ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 17
ಸಂಚಿಕೆ 17
ರೂ. 2.00

ಐಕ್ಯರಂಗ

23 ಏಪ್ರಿಲ್ 1995



ಜನತಾ ಆಂದೋಲನ ತೀವ್ರಗೊಳಿಸಿ, ಕಾಂಗ್ರೆಸ್ ಮತ್ತು ಬಿಜೆಪಿಯನ್ನು ಸೋಲಿಸಿರಿ

ಚಂಡೀಗಢದಲ್ಲಿ ಒಂದೂವರೆ ಲಕ್ಷ ಜನರ ರ್‍ಯಾಲಿ

ಎನ್.ಕೆ. ಉಪಾಧ್ಯಾಯ

ಆಧುನಿಕ ನಗರವಾದ, ಪಂಜಾಬ್-ಹರ್‍ಯಾಣಗಳ ರಾಜ್ಯ ಕೇಂದ್ರವಾದ ಚಂಡೀಗಢದ ಇತಿಹಾಸದಲ್ಲಿಯೇ ಏಪ್ರಿಲ್ 3ನೇ ತಾರೀಕು "ಕೆಂಪು ಬಣ್ಣದ" ಕ್ರಾಂತಿ ಘೋಷಣೆ ನೆಲೆಬೀಡಾಗಿತ್ತು. ಇಡೀ ನಗರದ ಮೂಲೆ ಮೂಲೆಗಳಲ್ಲಿ ಕೆಂಬಾವುಟಗಳೇ ಕೆಂಬಾವುಟಗಳು ಎತ್ತರದಲ್ಲಿ ಹಾರಾಡುತ್ತಿದ್ದವು "ಸಿಪಿಐ(ಎಂ) ಜಿಂದಾಬಾದ್" "ಲಾಲ್ ಝುಂಡಾ ಜಿಂದಾಬಾದ್" ಎಂಬ ಘೋಷಣೆಗಳು ಜನರಲ್ಲಿ ಸ್ಫೂರ್ತಿ ತುಂಬುತ್ತಿತ್ತು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ 15ನೇ ಕಾಂಗ್ರೆಸ್ಸಿನ ಕೊನೆಯ ದಿನ ಚಂಡೀಗಢದಲ್ಲಿ ಬೃಹತ್ ರ್‍ಯಾಲೀ ಮತ್ತು ಸಾರ್ವಜನಿಕ ಸಭೆ ನಡೆಯಿತು. ಹರಿಯಾಣ, ಪಂಜಾಬ್, ಉತ್ತರ ಪ್ರದೇಶ, ಹಿಮಾಚಲ ಪ್ರದೇಶದ ದುಡಿಯುವ ಜನತೆ ಒಂದೂವರೆ ಲಕ್ಷಕ್ಕೂ ಮೇಲ್ಪಟ್ಟು ಪೇರಡ್ ಮೈದಾನಿನಲ್ಲಿ ನೆರೆದಿದ್ದರು.

ನಗರದ ಮೂಲೆ ಮೂಲೆಗಳಿಂದ ಮೆರವಣಿಗೆಯಲ್ಲಿ ಸಾರ್ವಜನಿಕ ಸಭೆಗೆ ಹೋಗುತ್ತಿರುವಾಗ "ದೇಶ್ ಕೀ ರಕ್ಷಾ ಹಂ ಕರೇಂಗೇ,ಹಂ ಕರೇಂಗೇ" "ಕಾಂಗ್ರೆಸ್ ಮುರ್ದಾಬಾದ್" "ಸಾಂಪ್ರದಾಯಿಕ ತಾಕತೇ ಮುರ್ದಾಬಾದ್" ಎಂಬ ಘೋಷಣೆಗಳನ್ನು ಕೂಗುತ್ತಿದ್ದರು. ಪ್ರತಿಯೊಬ್ಬನ ಕೈಯಲ್ಲಿ ಕೆಂಬಾವುಟ ಹಾರಾಡುತ್ತಿತ್ತು. ಮಹಿಳೆಯರು, ಮಕ್ಕಳೂ ಕೂಡಾ ಮೆರವಣಿಗೆಯಲ್ಲಿ ಪುರುಷರಷ್ಟೇ ಸ್ಫೂರ್ತಿಯಿಂದ ಮುನ್ನುಗ್ಗುತ್ತಿದ್ದರು. ಸಿಪಿಐ(ಎಂ) ಪಕ್ಷದ 15ನೇಯ ಸಮ್ಮೇಳನ ರೈತ, ಕಾರ್ಮಿಕರಿಗೆ, ದುಡಿಯುವ ಜನತೆಗೆ, ಎಡಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳಿಗಿತ್ತ ಕರೆ. ದೇಶವನ್ನು ರಕ್ಷಿಸಲು, ಕಾಂಗ್ರೆಸ್-ಬಿಜೆಪಿಯನ್ನು ಸೋಲಿಸಲು ನಿರಂತರ ಐಕ್ಯ ಹೋರಾಟ ನಡೆಸಿರಿ ಎಂಬ ಕ್ರಾಂತಿಕಾರಿ ಕರೆಯನ್ನು ಸಮರ್ಥಿಸುವ ರೀತಿಯಲ್ಲಿ ಏನೇ ಅಡೆತಡೆಬಂದರೂ ಪಕ್ಷದ ಕಾಂಗ್ರೆಸ್ಸಿನ ಕರೆಯನ್ನು ಕಾರ್ಯರೂಪದಲ್ಲಿ ತಂದೇ ತರುತ್ತೇವೆಂಬ ದೃಢ ನಿರ್ಧಾರವನ್ನು ಈ ಮೆರವಣಿಗೆ-ಸಾರ್ವಜನಿಕ ಸಭೆ ನಿಚ್ಚಳವಾಗಿ ತೋರ್ಪಡಿಸುತ್ತಿತ್ತು. ಮುಖಂಡರ ಭಾಷಣಗಳನ್ನು ನೇರವಾಗಿ ಕೇಳಲು ಅನುಕೂಲವಾಗುವಂತೆ ಮೈದಾನದ ಸುತ್ತ ಟಿ.ವಿ. ವ್ಯವಸ್ಥೆ ಮಾಡಲಾಗಿತ್ತು. ಡಿ. 8ರಂದು ನಡೆದಷ್ಟು ದೊಡ್ಡ ಸಭೆ ಚಂಡೀಗಢದಲ್ಲಿ ಹಿಂದೆಂದೂ ನಡೆದಿಲ್ಲೆಂದೂ ಪತ್ರಿಕೆಗಳೂ, ಜನರೂ ಒಪ್ಪಿಕೊಂಡಿದ್ದರು.

ಬೃಹತ್ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಸ್ವಾಗತ ಸಮಿತಿ ಅಧ್ಯಕ್ಷ ಭಗತ್ ರಾಂ ಘಾಲ್ಲಾ ಅವರು ಮಾತನಾಡಿದ ನಂತರ ವಿದೇಶಗಳಿಂದ ಬಂದ ಅತಿಥಿಗಳನ್ನು ಸಭಿಕರಿಗೆ ಪರಿಚಯಿಸಲಾಯಿತು. ನಂತರ ಮಾತನಾಡಿದ ಹಿರಿಯ ಮುಖಂಡರಾದ ಇ.ಎಂ.ಎಸ್.ನಂಬೂದಿರಿ ಪಾಡ್ ಅವರು ದೇಶವು ಗಂಭೀರ ಪರಿಸ್ಥಿತಿಯನ್ನೆದುರಿಸುತ್ತಿರುವಾಗ 15ನೇ ಸಮ್ಮೇಳನ ನಡೆಯುತ್ತಿದೆ ಎಂದೂ, ಕಾಂಗ್ರೆಸ್ ಸಂಪೂರ್ಣ ಹೋಳಾಗುತ್ತಿದೆ ಎಂದೂ, ಆದರೆ ಕಾಂಗ್ರೆಸ್ ಅಧಿಕಾರ ಕಳಕೊಂಡಾಗ ಎಡಜಾತ್ಯಾತೀತ ಶಕ್ತಿಗಳು ಮಾತ್ರ ಆ ಖಾಲಿ ಜಾಗ ತುಂಬಬಹುದಾಗಿದೆ ಎಂದೂ, ಎಡ ಮತ್ತು ಜಾತ್ಯಾತೀತ ಶಕ್ತಿಗಳು ಮತ್ತು ಹಿಂದುಳಿದ ವರ್ಗದ ಅಲ್ಪಭಾಷಿಕರ ಮತ್ತು ಇತರ ದುಡಿಯುವ ಜನತೆಯ ಆಶೋತ್ತರಗಳನ್ನು ಪೂರೈಸಿಕೊಡಲು ಸಾಧ್ಯವಿದೆ ಎಂದು ಹೇಳಿದರು. ನಂತರ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಹರ್ಕಿಶನ್ ಸಿಂಗ್ ಸುರ್ಜಿತ್ ಅವರು ತಮ್ಮ ಸುದೀರ್ಘ ಭಾಷಣದಲ್ಲಿ

ಪುಟ 8 ನೋಡಿ

ಭಾರತದ ಹೆಮ್ಮೆಯ ಪರಂಪರೆಯ ರಕ್ಷಣೆಗೆ ಕೋಮುವಾದದ ವಿರುದ್ಧ ಸರ್ವತೋಮುಖ ಹೋರಾಟ

15ನೇ ಮಹಾಧಿವೇಶನದ ಕರೆ

ಕೋಮುವಾದಿಗಳ ತಂತ್ರಗಳನ್ನು ವಿಫಲಗೊಳಿಸಿ, ಜಾತ್ಯಾತೀತತೆ ಹಾಗೂರಾಷ್ಟ್ರೀಯ ಐಕ್ಯತೆಯನ್ನು ರಕ್ಷಿಸಲು ಒಂದು ನಿರಂತರ ಹಾಗೂ ಸರ್ವತೋಮುಖ ಹೋರಾಟ ನಡೆಸಲು ಸಿಪಿಐ(ಎಂ)ನ ಹದಿನೈದನೇ ಮಹಾಧಿವೇಶನ ಕರೆ ನೀಡಿದೆ. ಈ ಬಗ್ಗೆ ಒಂದು ನಿರ್ಣಯವನ್ನು ಅಂಗೀಕರಿಸಿರುವ ಮಹಾಧಿವೇಶನ ಆರ್‌ಎಸ್‌ಎಸ್-ಬಿಜೆಪಿ-ಶಿವಸೇನಾ ಕೂಟ ಧರ್ಮವನ್ನು ರಾಜಕೀಯದೊಂದಿಗೆ ಬೆರೆಸುವುದನ್ನು, ಕೋಮುವಾದವನ್ನು ಎದುರಿಸುವ ದೃಢ ನಿರ್ಣಯವನ್ನು ವ್ಯಕ್ತಪಡಿಸಿದೆ.

ಕೋಮುವಾದಿ ಶಕ್ತಿಗಳು ಅಯೋಧ್ಯಾ ವಿವಾದವನ್ನು ತಮ್ಮ ರಾಜಕೀಯ ಗುರಿಗಳಿಗಾಗಿ ಜನಗಳನ್ನು ಅಣಿನೆರೆಸಲು ಬಳಸಲಾರಂಭಿಸಿದಂದಿನಿಂದ ಕೋಮು ಗಲಭೆಗಳು, ಹಿಂಸಾಚಾರ ಹೆಚ್ಚಿ ರಾಷ್ಟ್ರೀಯ ಐಕ್ಯತೆಗೆ ಬೆದರಿಕೆ ಬಂದಿದೆ. ಬಾಬ್ರಿ ಮಸೀದಿ ಧ್ವಂಸದ ನಾಚಿಕೆಗೇಡಿ ಘಟನೆಯ ನಂತರವೂ ಈ ಶಕ್ತಿಗಳು ಸಕ್ರಿಯವಾಗಿವೆ. ವಾರಾಣಾಸಿ, ಮಥುರಾದಲ್ಲಿನ ಮಸೀದಿಗಳ ಧ್ವಂಸಕ್ಕಾಗಿಯೂ ಧರ್ಮದ ದುರುಪಯೋಗ ನಡೆಸುವ ರಾಜಕೀಯ ತಂತ್ರ ಅನುಸರಿಸಲಾಗುತ್ತಿದೆ. ಪೂಜಾಸ್ಥಾನಗಳ ಶಾಸನ ಈ ರೀತಿ ವಿವಾದ ಎಬ್ಬಿಸುವುದನ್ನು ಈಗ ನಿಷೇಧಿಸಿದ್ದರೂ ಕೋಮುವಾದಿಗಳು ಚಾರಿತ್ರಿಕ ತಪ್ಪುಗಳನ್ನು ಸರಿಪಡಿಸುವ ಹೆಸರಲ್ಲಿ ಭಾರತೀಯ ರಾಜಕಾರಣವನ್ನು ಕೋಮುಗ್ರಸ್ತಗೊಳಿಸುವುದನ್ನು ಬಯಲಿಗೆಳೆಯಬೇಕೆಂದು ಮಹಾಧಿವೇಶನ ಕರೆ

ಪುಟ 6 ನೋಡಿ

ರಾವ್ ಸರಕಾರದ ಆರ್ಥಿಕ ನೀತಿಗಳನ್ನು ನಿಲ್ಲಿಸಲೇಬೇಕು, ಬದಲಿಸಲೇಬೇಕು

ಹೋರಾಟ ತೀವ್ರಗೊಳಿಸಲು ಮಹಾಧಿವೇಶನ ಕರೆ

ಕಳೆದ ನಾಲ್ಕು ವರ್ಷಗಳಿಂದ ನರಸಿಂಹ ರಾವ್ ಸರಕಾರ ದೇಶದ ಆರ್ಥಿಕ ಸಾರ್ವಭೌಮತೆಗೆ ಹಾಗೂ ಜನಗಳ ಹಿತಾಸಕ್ತಿಗೆ ಮಾರಕವಾದ ನೀತಿಗಳನ್ನು ಅನುಸರಿಸಿಕೊಂಡು ಬರುತ್ತಿದೆ. ಇದರ ವಿರುದ್ಧ ನಡೆಯುತ್ತಿರುವ ಹೋರಾಟಗಳನ್ನು ತೀವ್ರಗೊಳಿಸಬೇಕು ಎಂದು ಸಿಪಿಐ (ಎಂ) 15ನೇ ಮಹಾಧಿವೇಶನ ಕರೆ ನೀಡಿದೆ.

ಐ.ಎಂ.ಎಫ್. ವಿಶ್ವಬ್ಯಾಂಕ್‌ನ "ಸಂರಚನಾ ಹೊಂದಾಣಿಕೆ" ನೀತಿಗಳು ಮತ್ತು ಗ್ಯಾಟ್ ಶರತ್ತುಗಳಿಂದ ದೇಶದ ಸ್ವಾವಲಂಬನೆಯನ್ನು ಗ್ರಾಮೀಣ, ಹಾಗೂ ನಗರದ ಬಡವರಿಗೆ ತೀವ್ರವಾಗಿ ತಟ್ಟಿದೆ. ಗುತ್ತೇದಾರಿಗಳಿಗೆ ಮತ್ತು ಭೂಮಾಲಕರು ಮಾತ್ರ ಬಹಳ ಲಾಭ ಬಾಚಿಕೊಂಡಿದ್ದಾರೆ.

ಜೀವನಾವಶ್ಯಕ ವಸ್ತುಗಳ ಬೆಲೆಯೇರಿಕೆ ಜನಸಾಮಾನ್ಯರ ಸಂಕಟಗಳಿಗೆ ಒಂದು ಅಸಂತ ಕಾರಣವಾಗಿಬಿಟ್ಟರೆ, ಗ್ರಾಮೀಣ ಮತ್ತು ನಗರದ ಬಡವರಿಗೆ ಅಗ್ಗದ ಆಹಾರ ಅತ್ಯಂತ ಅಗತ್ಯವಿರುವಾಗಲೇ ರೇಷನ್ ವ್ಯವಸ್ಥೆಯನ್ನು ಕಡಿತಮಾಡಲಾಗಿದೆ. ರೇಷನ್‌ನಲ್ಲಿ ಮಾರುವ ಆಹಾರಧಾನ್ಯಗಳ ಬೆಲೆಗಳನ್ನು ಏರಿಸಲಾಗಿದೆ. ಇದರಿಂದ ಹಸಿವು, ದಾರಿದ್ರ್ಯ ವಿಶೇಷವಾಗಿ ಬುಡಕಟ್ಟು ಪ್ರದೇಶಗಳಲ್ಲಿ ಹೆಚ್ಚಿದೆ ಎಂದಿರುವ ಮಹಾಧಿವೇಶನ ಈ ಮಾರುಕಟ್ಟೆ-ಪರವಾದ ಮತ್ತು ಬಡವರ ವಿರುದ್ಧವಾದ ನೀತಿಗಳಿಂದ ಜನಗಳ ಜೀವನ ಮಟ್ಟ, ಆರೋಗ್ಯ, ಶಿಕ್ಷಣ ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳಿಗೂ ತೀವ್ರ ಆಘಾತವಾಗಿದೆ ಎಂದು ಖೇದ ವ್ಯಕ್ತಪಡಿಸಿದೆ.

ಖಾಸಗೀಕರಣದ ಭರದಿಂದ ಒಂದೆಡೆ ಸಂಘಟಿತ ವಲಯದಲ್ಲಿ ಲಕ್ಷಾಂತರ ಉದ್ಯೋ

ಪುಟ 7 ನೋಡಿ

ಹದಿನೈದನೇ ಮಹಾಧಿವೇಶನದ ವರದಿ

- 4 ☐ ಸಾಮೂಹಿಕ ಹೋರಾಟಗಳನ್ನು, ವರ್ಗ ಸಮರವನ್ನು ಬಲಪಡಿಸಬೇಕು
- 5 ☐ ಸಾಮೂಹಿಕ ಸಂಘಟನೆಗಳನ್ನು ಚುರುಕುಗೊಳಿಸಬೇಕು, ಪಕ್ಷವನ್ನು ಕ್ರೋಢೀಕರಿಸಬೇಕು
- 8 ☐ ಲೆನಿನ್‌ರ 125ನೇ ಜನ್ಮ ವಾರ್ಷಿಕೋತ್ಸವ ಆಚರಣೆ
- ☐ ಫ್ಯಾಸಿಸಂ ಮೇಲಿನ ವಿಜಯದ 50ನೇ ವಾರ್ಷಿಕೋತ್ಸವ ಆಚರಣೆ
- ☐ ತ್ರಿಪುರಾ ಎಡರಂಗ ಸರಕಾರದ ವಿರುದ್ಧ ಪಕ್ಷಪಾತ ನಿಲ್ಲಬೇಕು

- 5 ಮಗು ಹುಟ್ಟಿದರೆ ದುಡಿತಕ್ಕೊಂದಾಳು
- 3 ವಿಧಾನಸಭೆಯಲ್ಲಿ ಕಾಂ. ಶ್ರೀರಾಮರೆಡ್ಡಿ
- 7 "ಗಡಿರಹಿತ" ಯುರೋಪು -- ಯಾರಿಗೆ ಲಾಭ?
- 6 ಸುರ್ಜಿತ್‌ರೊಡನೆ ಮೊದಲು ಮಾತನಾಡಬಯಸಿದ ಕಾಶ್ಮೀರಿ ಮುಖಂಡ



● ಏಪ್ರಿಲ್ 8ರಂದು ಚಂಡೀಗಢದಲ್ಲಿ ನಡೆದ ಬೃಹತ್ ರ್‍ಯಾಲಿಯ ಒಂದು ದೃಶ್ಯ

ಸಮಾಜ — ಸಂಸ್ಕೃತಿ

ಮಹಿಳೆಯರ ಸಮಸ್ಯೆಗಳ ಪರಿಹಾರ: ಇಡೀ ಸಮಾಜದ ಹೊಣೆಗಾರಿಕೆ

ಈಕೆ ಹೆಸರು ಸುಭಾಷಿಣಿ ಅಲಿ. ಸುಭಾಷ್ ಚಂದ್ರ ಬೋಸ್ ಅವರ ಆಝಾದ್ ಹಿಂದ್ ಸೇನೆ (ಐ.ಎಸ್.ಎ) ಯ ನಾಯಕಿಯಾಗಿದ್ದ ಕ್ಯಾಪ್ಟನ್ ಲಕ್ಷ್ಮಿ ಸೈಗಲ್ ಅವರ ಮಗಳು. ಸುಭಾಷಿಣಿ ಅಲಿ ಭಾರತದ ಜನಪ್ರಿಯ ಮಹಿಳೆಯರಲ್ಲಿ ಒಬ್ಬರು ಕ್ಯಾಪ್ಟನ್ ಲಕ್ಷ್ಮಿಯವರ ಮಗಳು ಎಂಬ ಕಾರಣಕ್ಕೆ ಅಲ್ಲ.

ಸುಭಾಷಿಣಿ ಕಾರ್ಮಿಕ ಚಳುವಳಿಯ ಒಬ್ಬ ನಾಯಕಿ. ದೇಶದ ಮಹಿಳಾ ಆಂದೋಲನದ ಒಬ್ಬ ಸಕ್ರಿಯ ಕಾರ್ಯಕರ್ತೆ. ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ರಾಷ್ಟ್ರೀಯ ಮುಖಂಡರೂ ಹೌದು. ಕೋಮುವಾದದ ವಿರುದ್ಧ ಜನಜಾಗೃತಿ ಹುಟ್ಟಿಸಲು ಉತ್ತರ ಪ್ರದೇಶ ಮಾತ್ರವಲ್ಲದೆ ಇಡೀ ಉತ್ತರ ಭಾರತದಲ್ಲಿ ಮಿಂಚಿನ ಸಂಚಾರ ಮಾಡಿ ಜನಾಕರ್ಷಣೆಯ ಕೇಂದ್ರ ಬಿಂದು ಆಗಿದ್ದವರು. ಕೋಮುವಾದಿಗಳು ಹುಬ್ಬಳ್ಳಿಯ -ಈದ್ಗಾ ಮೈದಾನದ ವಿವಾದವನ್ನು ಎಬ್ಬಿಸಿ ಕೋಮು ಉದ್ವಿಗ್ನತೆ ಹುಟ್ಟು ಹಾಕಿದಾಗ ಹುಬ್ಬಳಿಗೂ ಭೇಟಿ ಕೊಟ್ಟು ಮತೀಯ ಸಾಮರಸ್ಯ ಕಾಪಾಡಲು ಸುಭಾಷಿಣಿ ಮನವಿ ಮಾಡಿಕೊಂಡಿದ್ದರು.

ಲೋಕಸಭೆ ಸದಸ್ಯರಾಗಿದ್ದ ಅವರು ಮಹಿಳೆಯರ ಸ್ಥಿತಿಗತಿಗಳ ಕುರಿತು ಇಂಗ್ಲೀಷ್ ದೈನಿಕವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಸುಭಾಷಿಣಿ ಕೆಲವು ಅಂಶಗಳು.

ಪ್ರಶ್ನೆ: ಮಹಿಳೆಯರ ವಿರುದ್ಧದ ಅಪರಾಧಗಳನ್ನು ತಡೆಯಲು ದೇಶದ ಮಹಿಳಾ ಸಂಘಟನೆಗಳು ಏನು ಮಾಡುತ್ತಿವೆ?

ಉ: ಈ ಪ್ರಶ್ನೆಗೆ ನನ್ನ ಬಲವಾದ ಆಕ್ಷೇಪವಿದೆ. ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳನ್ನು ತಡೆಯಲು ಮಹಿಳಾ ಸಂಘಟನೆಗಳು ಮಾತ್ರವೇ ಏಕೆ ಕೆಲಸ ಮಾಡಬೇಕು? ಸರಕಾರದ ಸಂಸ್ಥೆಗಳು ಏನು ಮಾಡುತ್ತಿವೆ? ಒಟ್ಟಾರೆ ಸಮಾಜ ಏನು ಮಾಡುತ್ತಿದೆ ಎಂದು ನಾನು ತಿಳಿಯಲು ಬಯಸುತ್ತೇನೆ.

ಇದೊಂದು ಇಡೀ ಸಮಾಜವನ್ನು ಬಾಧಿಸುತ್ತಿರುವ ಸಮಸ್ಯೆಯಾಗಿದೆ. ಮಹಿಳೆಯರ ವಿರುದ್ಧ ಅಪರಾಧಗಳನ್ನು ತಡೆಗಟ್ಟುವುದು ಇಡೀ ಸಮಾಜದ ಮತ್ತು ಸರಕಾರದ ಕರ್ತವ್ಯವಾಗಿದೆ.

ಪ್ರ: ಕೆಲವು ಮಹಿಳಾ ಸಂಘಟನೆಗಳು ಕೇವಲ ಪ್ರಚಾರಕ್ಕಾಗಿ ಕೆಲಸ ಮಾಡುತ್ತವೆ ಎಂಬ ಅಭಿಪ್ರಾಯವಿದೆ. ಇದಕ್ಕೆ ನಿಮ್ಮ ಪ್ರತಿಕ್ರಿಯೆ ಯೇನು?

ಉ: ದೇಶದಲ್ಲಿ ನೂರಾರು ಮಹಿಳಾ ಸಂಘಟನೆಗಳಿವೆ. ಅವೆಲ್ಲವುಗಳ ಬಗ್ಗೆ ಪ್ರತಿಕ್ರಿಯೆ ವ್ಯಕ್ತಪಡಿಸಲು ನಾನು ಬಯಸುವುದಿಲ್ಲ. ಆದರೆ, ತನ್ನ ಕೆಲಸದಲ್ಲಿ ಗಂಭೀರವಾಗಿರುವ ಅನೇಕ ಮಹಿಳಾ ಸಂಘಟನೆಗಳು ಹಾಗೂ ಕಾರ್ಯಕರ್ತರು ಇದ್ದಾರೆ. ಅವರು ಬಹಳಷ್ಟು ಸಾಧಿಸುತ್ತಿದ್ದಾರೆ. ಎಂಬುದನ್ನು ಮಾತ್ರ ನಾನು ಆತ್ಮ ವಿಶ್ವಾಸದಿಂದ ಹೇಳಬಲ್ಲೆ.

ಪ್ರ: ಮಹಿಳೆಯ ಮೇಲೆ ದೌರ್ಜನ್ಯವೆಸಗುವ ಪೋಲೀಸರ ವಿರುದ್ಧ ಯಾವ ಕ್ರಮ ಕೈಗೊಳ್ಳಬೇಕೆಂದು ನೀವು ಸಲಹೆ ಮಾಡುತ್ತೀರಿ?

ಉ: ಪೋಲೀಸ್ ಠಾಣೆಯಲ್ಲಿನ ಅತ್ಯಾಚಾರ ಪ್ರಕರಣವನ್ನು ಕೈಗೆತ್ತಿಕೊಂಡು ಹೋರಾಟ ನಡೆಸಿದವರಲ್ಲಿ ನಾವೇ ಮೊದಲಿಗರು. ಅನೇಕ ವರ್ಷಗಳ ಹಿಂದೆ ಮಹಾರಾಷ್ಟ್ರದಲ್ಲಿ 'ಮಥುರಾ ಪ್ರಕರಣ' ನಡೆದಿತ್ತು.

ಇಂಥ ಯಾವುದೇ ಪ್ರಕರಣಗಳಲ್ಲಾದರೂ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ನಾವು ಒತ್ತಾಯಿಸುತ್ತೇವೆಯೇ ಹೊರತು ಅನ್ಯಾಯಕ್ಕೆ ಒಳಗಾದವರಿಗೆ ಪರಿಹಾರ ಹಣವನ್ನು ಕೇಳುವುದಿಲ್ಲ.

ಇಂಥ ಪ್ರಕರಣಗಳಲ್ಲಿ, ಆರೋಪಿ ತನ್ನ ಮುಗ್ಧತೆಯನ್ನು ಸಾಬೀತು ಪಡಿಸಬೇಕೇ ಹೊರತು ಅತ್ಯಾಚಾರ ಅಥವಾ ಮಾನಭಂಗಕ್ಕೆ ಒಳಗಾದವರ ಮೇಲೆ ಆ ಹೊಣೆ ಇರಬಾರದು ಎಂಬ ಕಾನೂನನ್ನು ರೂಪಿಸುವಂತೆ ನಾವು ಕಾನೂನು ಆಯೋಗಕ್ಕೆ ಸಲಹೆ ಮಾಡಿದ್ದೇವೆ.

ಮಹಿಳೆಯರ ಮೇಲೆ ಪೋಲೀಸರು ಲೈಂಗಿಕ ದುರಾಚಾರ ನಡೆಸಿದ ಸಂದರ್ಭಗಳಲ್ಲಿ ಬೇರೆ ಸಂಸ್ಥೆಗಳು ತನಿಖೆ ನಡೆಸಬೇಕೆ ಹೊರತು ಪೋಲೀಸರೇ ತನಿಖೆ ನಡೆಸಬಾರದು ಎಂದು ಕೂಡ ಸಲಹೆ ಮಾಡಲಾಗಿದೆ. ಯಾಕೆಂದರೆ ಪೋಲೀಸರೇ ತನಿಖೆ ಮಾಡಿದರೆ ತಮ್ಮ ಸಹೋದ್ಯೋಗಿಗಳನ್ನು ರಕ್ಷಿಸುವ ಮತ್ತು ಸಾಕ್ಷ್ಯಗಳನ್ನು ನಾಶಪಡಿಸುವ ಸಾಧ್ಯತೆಯಿದೆ.

ಸೈನಿಕರು ಮತ್ತು ಅರೆಸೇನಾ ಪಡೆಗಳ ಸಿಬ್ಬಂದಿ ಕೂಡಾ ಅತ್ಯಾಚಾರ ನಡೆಸಿದ ಪ್ರಕರಣಗಳನ್ನು ಆಗಾಗ ಕೇಳುತ್ತಿರುತ್ತೇವೆ. ಇಂಥ ಪ್ರಕರಣಗಳಲ್ಲಿ ತಪ್ಪಿತಸ್ಥರ ವಿಚಾರಣೆ ನಡೆಸಲು ವಿಶೇಷ ಕಾನೂನುಗಳನ್ನು ರೂಪಿಸಬೇಕು.

ಪ್ರ: ಕೆಲವು ರಾಜಕೀಯ ನಾಯಕರು ಕೂಡಾ ಅತ್ಯಾಚಾರದ ಆರೋಪಕ್ಕೆ ಒಳಗಾಗುತ್ತಾರೆ. ಅವರ ವಿರುದ್ಧ ಎಂಥ ಕ್ರಮಗಳನ್ನು ಕೈಗೊಳ್ಳಬೇಕೆಂಬುದು ನಿಮ್ಮ ನಿರೀಕ್ಷೆ.

ಉ: ಈ ರೀತಿಯಲ್ಲಿ ಘಟನೆಗಳು ಬಹು ಅಪರೂಪ ಇತ್ತೀಚೆಗೆ ಬಿಹಾರದಲ್ಲಿ ಇಂಥದೊಂದು ಪ್ರಕರಣ ನಡೆಯಿತು. ಕೆಲವು ವರ್ಷಗಳ ಹಿಂದೆ ಮಹಾರಾಷ್ಟ್ರದಲ್ಲಿ ಸಚಿವರೊಬ್ಬರು ವಿಮಾನ ಪರಿಚಾರಿಕೆಯ ಮಾನಭಂಗಕ್ಕೆ ಯತ್ನಿಸಿದ ಆರೋಪಕ್ಕೆ ಒಳಗಾಗಿದ್ದರು.

ಇಂಥ ಪ್ರಕರಣಗಳಲ್ಲಿ ಒಳಗೊಂಡ ಪುರುಷರು ಅಧಿಕಾರದಲ್ಲಿರುವವರಾದ್ದರಿಂದ ಆರೋಪಿಗಳನ್ನು ಮೊಳಕೆಯಲ್ಲೇ ಚಿವುಟಿ ಹಾಕಲಾಗುತ್ತದೆ. ಆದರೆ ಭಾರೀ ಪ್ರತಿಭಟನೆಯ ನಂತರ ಹರಿಜನ ಹುಡುಗಿಯ ಮೇಲೆ ಅತ್ಯಾಚಾರ ಮಾಡಿದ ಬಿಹಾರ ಶಾಸಕನನ್ನು ಬಂಧಿಸಲಾಯಿತು.

ಪ್ರ: ತಮ್ಮ ಮೇಲೆ ದೌರ್ಜನ್ಯವೆಸಗುವವರ ವಿರುದ್ಧ ಮಹಿಳೆಯರು ತಿರುಗಿ ಬೀಳಬೇಕೇ?

ಉ: ಬಹುತೇಕ ಸಂದರ್ಭಗಳಲ್ಲಿ ಇದು ಸಾಧ್ಯವಾಗದು ಎಂದು ನನ್ನ ಅನಿಸಿಕೆ. ಅತ್ಯಾಚಾರಕ್ಕೆ ಒಳಗಾದ ಎರಡು ವರ್ಷದ ಮಗು ದುಷ್ಕರ್ಮಿ ವಿರುದ್ಧ ತಾನು ತಾನೆ ಮಾಡಲು ಸಾಧ್ಯ? ಅಥವಾ ಇಟ್ಟಿಗೆ ಗೂಡಿನಲ್ಲಿ ಕೆಲಸ ಮಾಡುತ್ತಿರುವ ಬಡ ಮಹಿಳೆಯರನ್ನು ತಮ್ಮ ಶೋಷಿಸುತ್ತಿರುವ ಯಾವ ಕ್ರಮ ಕೈಗೊಳ್ಳಬಹುದು?

ನಗರ ಪ್ರದೇಶಗಳಲ್ಲಿ ಕೆಲವು ಪ್ರಕರಣಗಳಲ್ಲಿ ಯುವತಿಯರು ತಮಗಾದ ಅನ್ಯಾಯದ ವಿರುದ್ಧ ಪ್ರತಿಭಟನೆಗೆ ಮುಂದಾಗುತ್ತಾರೆ. ಆದರೆ ಅದು ಎಲ್ಲಾ ಕಡೆ ಸಾಧ್ಯವಿಲ್ಲ.

ಪ್ರ: ತಮ್ಮ ವಿರುದ್ಧ ಅಪರಾಧಗಳು, ವಿಶೇಷವಾಗಿ ಲೈಂಗಿಕ ದುರಾಚಾರ ನಡೆಯುವ ಪರಿಸ್ಥಿತಿಯನ್ನು ಮಹಿಯರೇ ಸೃಷ್ಟಿಸುತ್ತಿದೆಂಬ ಅಭಿಪ್ರಾಯವಿದೆಯಲ್ಲ?

ಉ: ಇದು ಅಪ್ಪಟ್ಟವಾಗಿ ಪುರುಷ ಪೂರ್ವಗ್ರಹ ಪೀಡಿತ ನಿಲುವು. ಒಬ್ಬ ಮಹಿಳೆ ಅಥವಾ ಹೆಣ್ಣಿಗೆ ತನ್ನ ಜೀವನವನ್ನು ಸಾಗಿಸುವ ಸ್ವಾತಂತ್ರ್ಯವಿದೆ. ಆಕೆ ತನಗೆ ಸರಿಕಂಡಂತೆ ಉಡುಪು ಧರಿಸಲಿ ಅಥವಾ ವರ್ತಿಸಲಿ. ಮಹಿಳೆಯೊಬ್ಬಳು ದುರ್ನಡತೆಯವಳಾಗಿದ್ದರಿಂದಲೇ ಆಕೆಯ ವಿರುದ್ಧ ಲೈಂಗಿಕ ದೌರ್ಜನ್ಯ ನಡೆಸಿದೆ ಎಂದು ಯಾರೂ ಹೇಳಿಕೊಳ್ಳುವಂತಿಲ್ಲ.

ಮಹಿಳೆಯೊಬ್ಬರು ವೇಶ್ಯೆಯಾಗಿದ್ದರೂ ಆಕೆಯ ಮೇಲೆ ಅತ್ಯಾಚಾರ ನಡೆಸುವಂತಿಲ್ಲ.

ಪ್ರ: ಭಾರತೀಯ ಮಹಿಳೆಯರಲ್ಲಿ ಆಧುನಿಕತೆಯಿಂದಾಗಿ ದಾಂಪತ್ಯ ಸಂಬಂಧದಲ್ಲಿ ವಿರಸ ಉಂಟಾಗುತ್ತಿದೆ ಎಂದು ನಿಮಗೆ ಅನಿಸುವುದಿಲ್ಲವೇ?

ಉ: ಭಾರತೀಯ ಮಹಿಳೆ ಎರಡು ಸನ್ನಿವೇಶಗಳಿಗೆ ಹೊಂದಿಕೊಳ್ಳಬೇಕು ಎಂಬುದನ್ನು ನಾವು ಗಮನಿಸಬೇಕಾಗಿದೆ. ಒಂದು: ಆಧುನಿಕವೆಂದು ಹೇಳಲಾಗುವ ಮನೆಯ ಹೊರಗಿನ ಸನ್ನಿವೇಶ ಇನ್ನೊಂದು : ಕುಟುಂಬದೊಳಗೆ ಸರಳ ಗೃಹಿಣಿಯಾಗಿ ಬದುಕುವುದು.

ಭಾರತ ಪುರುಷರು ತಮ್ಮ ಕುಟುಂಬದ ಹೊರಗಡೆ ಆಧುನಿಕ ಮಹಿಳಾ ಜೊತೆಗಾತಿಯನ್ನು ಬಯಸುತ್ತಾರೆ. ಆದರೆ ತನ್ನ ಹೆಂಡತಿ ಸತಿ ಸಾವಿತ್ರಿ ಆಗಿರಬೇಕೆಂದು ನಿರೀಕ್ಷಿಸುತ್ತಾರೆ.

ಹೀಗೆ ಗಂಡಸರು ಏಕಕಾಲದಲ್ಲಿ ಎರಡು ರೀತಿ ಮಹಿಳೆಯರನ್ನು ಬಯಸುತ್ತಾರೆ. ಅನೇಕರು ಈ ಪರಿಯ ಜೊತೆಗಾತಿಯರನ್ನು ಹೊಂದಿದ್ದಾರೆ ಕೂಡಾ.

ಯಾವುದೇ ಒಬ್ಬ ಮಹಿಳೆ ಗೃಹಿಣಿ ಸ್ಥಾನದಿಂದ ಹೊರಬಂದು ತನ್ನ ಸ್ಥಾನಮಾನ, ಅಭಿರುಚಿ ಮತ್ತು ಶಿಕ್ಷಣಕ್ಕೆ ಅನುಗುಣವಾಗಿ ತನ್ನದೆ ಆದ ಜೀವನವನ್ನು ಸಾಗಿಸಲು ಯತ್ನಿಸಿದಾಗ ವಿರಸ ಉಂಟಾಗುತ್ತದೆ.

ಪ್ರ: ಗಂಡನೊಂದಿಗೆ ಹೊಂದಿಕೊಳ್ಳಲಾಗದ ಮಹಿಳೆ ವಿಚ್ಛೇದನ ಪಡೆದು ಸ್ವತಂತ್ರ ಜೀವನವನ್ನು ನಡೆಸಬೇಕೇ?

ದಾಂಪತ್ಯ ಜೀವನದಲ್ಲಿದ್ದುಕೊಂಡು ಜಗಳವಾಡುತ್ತಿರುವುದಕ್ಕಿಂದ ಹಾಗೆ ಮಾಡುವುದೇ ಒಳ್ಳೆಯದು.

ಪ್ರ: ಭಾರತದಲ್ಲಿ ಏಕಾಂಗಿ ಮಹಿಳೆಯರ ಪರಿಸ್ಥಿತಿಯೇನು?

ಉ: ಪರಿಸ್ಥಿತಿ ದಿನೇ ದಿನೇ ಅಧೋಗತಿಗಿಳಿಯುತ್ತಿದೆ. ಏಕಾಂಗಿ ಮಹಿಳೆಗೆ ಅವಳದೇ ಆದ ಪ್ರತ್ಯೇಕ ಅಸ್ತಿತ್ವವಿಲ್ಲ. ಸಣ್ಣಪುಟ್ಟ ವಿಚಾರಗಳಿಗೂ ಆಕೆ ಬೇರೆಯವರನ್ನು ಅವಲಂಬಿಸಬೇಕಾಗುತ್ತದೆ. ತನ್ನ ಕೆಲಸವಾಗಬೇಕಾದರೆ ಆಕೆ ಯಾರದ್ದಾದರೂ ತಾಯಿ, ಹೆಂಡತಿ ಅಥವಾ ಸೋದರಿಯಾಗಿರಬೇಕಾಗುತ್ತದೆ. ಕಾನೂನಿನಲ್ಲಿ ಕೂಡಾ ಏಕಾಂಗಿ ಮಹಿಳೆಗೆ ಯಾವುದೇ ಸ್ಥಾನಮಾನವಿಲ್ಲ.

ಪ್ರ: ವಿಶೇಷವಾಗಿ ಇತರ ದೇಶಗಳ ಮಹಿಳೆಯರಿಗೆ ಹೋಲಿಸಿದಲ್ಲಿ ಒಟ್ಟಾರೆ ಭಾರತೀಯ ಮಹಿಳೆಯರ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಭಾರತದ ನಾರಿಯರನ್ನು ಇತರ ದೇಶಗಳ ಪ್ರಮೀಳೆಯರೊಂದಿಗೆ ಹೋಲಿಸಲು ಬಯಸುವದಿಲ್ಲ. ಯಾಕೆಂದರೆ ಅಲ್ಲಿನ ಹಾಗೂ ಇಲ್ಲಿನ ಪರಿಸ್ಥಿತಿ ತೀರಾ ಭಿನ್ನ ಭಿನ್ನ. ಆದರೆ ಭಾರತೀಯ ಮಹಿಳೆಯರನ್ನು ನಾನು ಮನಸಾರೆ ಅಭಿನಂದಿಸುತ್ತೇನೆ. ಅವರು ಬುದ್ಧಿವಂತರು, ಪರಿಶ್ರಮಿಗಳು ಮತ್ತು ಧೈರ್ಯಶಾಲಿಗಳು.

ಸೌಜನ್ಯ: ಪಯನಿಯರ್

ಬಾಳಠಾಕ್ರೆ, ಚಿದಾನಂದ ಮೂರ್ತಿ ಮತ್ತು ಪರ್ಮಿಟ್

ಮುಂಬೈಯೊಳಗೆ 'ಹೊರಗಿನವರು' ದೊಡ್ಡ ಪ್ರಮಾಣದಲ್ಲಿ ಬರುತ್ತಿರುವುದನ್ನು ತಡೆಯಲು 'ಪರ್ಮಿಟ್ ವ್ಯವಸ್ಥೆ' ತರಬೇಕು ಎಂಬ ಶಿವಸೇನೆಯ ಮುಖ್ಯಸ್ಥ ಬಾಳಠಾಕ್ರೆಯ ಪ್ರತಿಪಾದನೆಯನ್ನು ಬೆಂಬಲಿಸುತ್ತೇನೆ, ಆದರೆ ಅವರು ಬೆಳಗಾವಿಯ ಬಗ್ಗೆ ಹೇಳಿರುವುದನ್ನು ವಿರೋಧಿಸುತ್ತೇನೆ ಎಂದಿದ್ದಾರಂತೆ ಡಾ. ಚಿದಾನಂದಮೂರ್ತಿ.

"ಡಾ. ಎಂ. ಚಿದಾನಂದಮೂರ್ತಿಯಂಥ ವಿದ್ವಾಂಸರು ಠಾಕ್ರೆಯವರನ್ನು ಎತ್ತಿ ಹಿಡಿದಿದ್ದಾರೆ. ಠಾಕ್ರೆ ನೀತಿ ನಿಯಮಗಳಿಲ್ಲದ ಗೂಂಡ. ಏಕೋ ನಮ್ಮ ವಿದ್ವತ್ತು ಗೂಂಡಾಗಳಿಗೆ ಮಾರು ಹೋಗುತ್ತಿದೆ" ಎಂದು ಬೆಂಗಳೂರಿನಲ್ಲಿ ನಡೆದ ಒಂದು ವಿಚಾರಸಂಕಿರಣದಲ್ಲಿ ಖ್ಯಾತ ನಾಟಕಗಾರ ಗಿರೀಶ್ ಕಾರ್ನಾಡ್ ಬೇಸರದಿಂದ ನುಡಿದಿದ್ದಾರೆ.

ಜನರ ಒಂದು ನೈಜ ಪ್ರಶ್ನೆಗೆ ವಸ್ತುನಿಷ್ಠವಾಗಿ ಯೋಚಿಸಬೇಕಾದವರೂ ಸಂಕುಚಿತ ದೃಷ್ಟಿಯ ಪರಿಹಾರ ಸೂಚಿಸಿದಾಗ ಪ್ರಜಾಪ್ರಭುತ್ವವಾದಿಗಳಿಗೆ ಬೇಸರವಾಗುವುದು ಸಹಜ. ಈ ಸಂಕುಚಿತ ದೃಷ್ಟಿಯೇ ರಾಜಕೀಯ ಅಧಿಕಾರ ಕಬಳಿಸುವ ಅಸ್ತ್ರವಾಗುವಾಗ ಸಿಟ್ಟು ಉಕ್ಕೇರಬೇಕಾದುದೂ ಅಷ್ಟೇ ಸಹಜ.

ಠಾಕ್ರೆ ಮುಂಬೈಯಲ್ಲಿ ಪ್ರತಿಪಾದಿಸುವ, ಚಿ.ಮೂ. ರವರು ಬೆಂಗಳೂರಿನಲ್ಲಿ ಬೆಂಬಲಿಸುವ ಈ 'ಪರ್ಮಿಟ್ ವ್ಯವಸ್ಥೆ' ಎಂದರೇನು? "ಹೊರಗಿನವರು" ಎಂದರೆ ಯಾರು?

ಠಾಕ್ರೆ ಮಹಾಶಯರು "ಫ್ರಂಟ್ ಲೈನ್" ಪತ್ರಿಕೆಯ ಸಂದರ್ಶಕರಿಗೆ ಕೊಟ್ಟ ಈ ಉತ್ತರವನ್ನು ನೋಡಿ-"

"ಭಾರತೀಯರು ಎಂದರೆ ನೀವೇನಂದುಕೊಂಡಿದ್ದೀರಿ? ನಮ್ಮಲ್ಲಿ ಭಾಷಾವಾರು ಪ್ರಾಂತ್ಯಗಳಿವೆ. ಅವುಗಳ ಮುಖ್ಯಮಂತ್ರಿಗಳಿಗೆ ತಂತಮ್ಮ ಜನಗಳನ್ನು ನೋಡಿಕೊಳ್ಳಬೇಕಾದ ಜವಾಬ್ದಾರಿಯಿದೆ. ಆದರೆ ಸ್ಮಗ್ಲರ್‌ಗಳು, ಗೂಂಡಾಗಳು ಬಂದರೆ, ನಾವು ಉಳಿಯುವುದು ಹೇಗೆ? ತೆರಿಗೆ ತೆರುವವರ ಗತಿಯೇನು? ಅವರು ಮಹಾರಾಷ್ಟ್ರೀಯರು ಮಾತ್ರವಲ್ಲ, ಅವರು ಎಲ್ಲಾ ಜಾತಿಗೆ ಸೇರಿದವರು. ಗುಜರಾತಿಗಳು, ಮಾರವಾಡಿಗಳು, ಜೈನರು, ದಕ್ಷಿಣ ಭಾರತೀಯರು, ಮುಸ್ಲಿಮರಿದ್ದಾರೆ, ಸಿಖ್ಖರಿದ್ದಾರೆ. ಅವರೆಲ್ಲಾ ತೆರಿಗೆ ತೆರುವವರು. ನಾವು ಅವರಿಗೆ ಏನು ಕೊಡುತ್ತಿದ್ದೇವೆ? ಏನೂ ಇಲ್ಲ. ಏಕೆಂದರೆ ಈ ರೀತಿ ತುಂಬಿ ತುಳುಕುತ್ತಿರುವುದರಿಂದ.........ಆದ್ದರಿಂದ ನನಗನಿಸುತ್ತಿದೆ ಅದಕ್ಕೊಂದು ಮಿತಿ ಬೇಕೇ ಬೇಕು."

ಹಾಗಿದ್ದರೆ ಇಲ್ಲಿ 'ಹೊರಗಿನವರು' ಯಾರು? ನೇರವಾಗಿ ತೆರಿಗೆ ತರದಿರುವ (ಅಥವಾ ತೆರಲಾರದಷ್ಟು ಕಮ್ಮಿ ಆದಾಯವಿರುವ?) ಸಾಮಾನ್ಯ ಜನರೇ ಇರಬಹುದೇ? ನಿಮಗೆ ತೆರಿಗೆ ತೆರುವ ಸಾಮರ್ಥ್ಯವಿದೆಯೇ? ನೀವು ಕರ್ನಾಟಕದವರಾದರೂ ಮುಂಬೈಗೆ ಬರಬಹುದು, ಮಹಾರಾಷ್ಟ್ರದವರಾದರೂ ಬೆಂಗಳೂರಿಗೆ ಬರಬಹುದು. ಏಕೆಂದರೆ ನಿಮ್ಮ ಹಣ ನೋಡಿ ಮುಂಬೈ ಬೆಂಗಳೂರುಗಳು ನಿಮಗೆ ಮಣೆ ಹಾಕುತ್ತವೆ. ಆದರೆ ಕೂಲಿನಾಲಿ ಮಾಡಿ ಹೇಗಾದರೂ ಜೀವನ ನಡೆಸೋಣವೆಂದೂ ಕೊಂಡರೋ, ನಿಮ್ಮ ತರಬೇತಿಗೆ ತಕ್ಕುದಾದ ನಿಮ್ಮ ತರಬೇತಿಯ ಪ್ರಯೋಜನ ದೇಶಕ್ಕೂ ನಿಮಗೂ ಸಿಗಬಹುದಾದ ಉದ್ಯೋಗ ಅರಿಸಿಕೊಂಡು ಮಾತ್ರ ನೀವು ನಿಮ್ಮ ರಾಜ್ಯ ಬಿಟ್ಟು, ಪಕ್ಕದ ರಾಜ್ಯದಲ್ಲಿರುವ ಆದರೆ ನಿಮ್ಮ ಹಳ್ಳಿಗೆ ಸಮೀಪವಿರುವ ನಗರಕ್ಕೆ ಹೋಗುವಂತಿಲ್ಲ. "ಪರ್ಮಿಟ್ ವ್ಯವಸ್ಥೆ" ಯೆಂದರೆ ಠಾಕ್ರೆಯವರು ಮೇಲೆ ಹೇಳಿದ ಪ್ರತಿಪಾದನೆಯ ಅರ್ಥ ಇದೇ ಆಗುವುದಿಲ್ಲವೇ? ಬಹುಶಃ ಚಿ.ಮೂ.ರವರು ಈ ಅರ್ಥವನ್ನು ತಾನು ಒಪ್ಪಿದ್ದಲ್ಲ ಎನ್ನಬಹುದು. ಕನ್ನಡಿಗರಿಗೆ ಜನಸಾಮಾನ್ಯರಿಗೆ ಪರ್ಮಿಟ್ ಪ್ರಶ್ನೆಯಿಲ್ಲ ಎನ್ನಬಹುದು. ಆದರೆ ಇಂತಹ ನಿಲುವು ಅವರು ಆತಂಕ ಪಡುವ ವಿಪರೀತ ನಗರೀಕರಣಕ್ಕೆ ಪರಿಹಾರಗುವಂತಿಲ್ಲ 'ಉದಾರೀಕರಣ'ದ ಬಗ್ಗೆ ತುಟಿಪಿಟಿಕೆನ್ನದವರು ವಾಸ್ತವವಾಗಿ ಪರೋಕ್ಷವಾಗಿಯಾದರೂ ಎಲ್ಲಾ ಭಾಷೆಗಳ-ಧರ್ಮಗಳ ಜನಸಾಮಾನ್ಯರನ್ನೇ ಹೊಣೆಗಿಡುತ್ತಾರೆ.

ಅದಕ್ಕಿಂತಲೂ ಮುಖ್ಯವಾಗಿ ಜನ ಮುಂಬೈ ಬೆಂಗಳೂರುಗಳತ್ತ ಏಕೆ ಧಾವಿಸುತ್ತಾರೆ? ಮುಂಬೈಯಲ್ಲಿ ಕನ್ನಡಿಗರು, ತಮಿಳರು, ಹಿಂದೀಯರು, ಬೆಂಗಳೂರಿನಲ್ಲಿ ತಮಿಳರು, ಮಲೆಯಾಳಿಗಳು ಮದ್ರಾಸಿನಲ್ಲಿ ತೆಲುಗರು, ಕಲ್ಕತ್ತೆಯಲ್ಲಿ ಹಿಂದಿಭಾಷಿಕರು, ಏಕೆ ಬಂದು ನೆಲೆಸಿದ್ದಾರೆ? ಈ ಬಗ್ಗೆ ಠಾಕ್ರೆಯವರಾಗಲೀ, ಚಿ.ಮೂ.ರಂತಹ ವಿದ್ವಾಂಸರಾಗಲೀ ಯೋಚಿಸಿದ್ದಾರೆಯೇ? ಆಗ ಈ ನಗರಗಳು ಸ್ವಾಗತಿಸಿದ ಬೇರೆ ಭಾಷೆಗಳ ಜನಸಾಮಾನ್ಯರು ಈಗೇಕೆ ಭಾರವಾಗಿ ಕಾಣುತ್ತಿದ್ದಾರೆ? ಸಮಸ್ಯೆಯ ಮೂಲವನ್ನೇ ಗುರುತಿಸಲಾಗದ್ದ ಯಾವುದೇ ಪರಿಹಾರವನ್ನು ಪರಿಹಾರವೆನ್ನಲು ಸಾಧ್ಯವೇ?ಇನ್ನೊಂದು ಪ್ರಶ್ನೆ -ಶಿವಸೇನೆ ಅಧಿಕಾರ ಸೂತ್ರ ಹಿಡಿಯಲು ನೆರವಾದ ಸಂಘಪರಿವಾರದ ಬಿ.ಜೆ.ಪಿ.ಯ 'ಅಖಂಡ ಭಾರತ' ಕಲ್ಪನೆಯಲ್ಲಿ ಭಾಷಾವಾರು ಪ್ರಾಂತ್ಯಗಳಿಗೆ ಸ್ಥಾನವಿಲ್ಲ, ಅವರು 'ಆಡಳಿತಾತ್ಮಕ ಸೌಲಭ್ಯಕ್ಕಾಗಿ' ಸಣ್ಣ ರಾಜ್ಯಗಳನ್ನು ಪ್ರತಿಪಾದಿಸುವವರು.

ಇದು ತಮಾಷೆಯೆನಿಸುತ್ತದೆಯಲ್ಲವೇ? ಭಾಷಾವಾರು ಪ್ರಾಂತ್ಯಗಳ ಬಗ್ಗೆ ಸಂಪೂರ್ಣ ವಿರುದ್ಧ ನಿಲುವುಳ್ಳವರು ರಾಜಕೀಯ ಮೈತ್ರಿ ಮಾಡಿಕೊಂಡಿದ್ದಾರೆ. ಬೆಳಗಾವಿ ಬಗ್ಗೆ ಸಂಪೂರ್ಣ ವಿರುದ್ಧ ನಿಲುವುಳ್ಳವರು ಒಂದೇ ಸಿದ್ಧಾಂತವನ್ನು ಪ್ರತಿಪಾದಿಸುತ್ತಾರೆ! ಆದರೆ ನಿಜವಾಗಿ ಇಲ್ಲಿ ವಿಚಿತ್ರವೇನೂ ಇಲ್ಲ. ಇಲ್ಲಿರುವ ಏಕಸೂತ್ರವೆಂದರೆ ದುಡಿಯುವ ಜನಗಳ ಹಿತಾಸಕ್ತಿಗಳತ್ತ ಗಮನವನ್ನೇ ಹರಿಸದ 'ಸಂಕುಚಿತ' ದೃಷ್ಟಿಕೋನ, ಹಾಗೂ ರಾಜಕೀಯ ಅಧಿಕಾರ ಗಿಟ್ಟಿಸಲು ಅದರ ದುರುಪಯೋಗ, ಆದ್ದರಿಂದಲೇ ಪ್ರಗತಿಪರ ಚಿಂತನೆಯವರಿಗೆಲ್ಲಾ ಇದು ಆತಂಕ ಉಂಟು ಮಾಡಿರುವ ಸಂಗತಿ.

ಇಲ್ಲಿ ಇನ್ನೂ ಒಂದು ಅಂಶ ಗಮನಿಸಬೇಕು. ಶಿವಸೇನೆ-ಬಿಜೆಪಿ ಕೂಟ ಐದು ವರ್ಷಗಳವರೆಗೆ ಜೀವನಾವಶ್ಯಕ ಸಾಮಗ್ರಿಗಳ ಬೆಲೆಗಳನ್ನು ತಡೆದಿಡುತ್ತೇನೆ ಎಂದಿತ್ತು. ಈ ಬಗ್ಗೆ ನಿರ್ದಿಷ್ಟ ಯೋಜನೆ ತಯಾರಾಗುತ್ತಿದ್ದೆಯೇ ಎಂಬ 'ಫ್ರಂಟ್ ಲೈನ್' ಸಂದರ್ಶಕರ ಪ್ರಶ್ನೆಗೆ ಠಾಕ್ರೆಯವರ ಅದೇ ರೀತಿ ೨೭ ಲಕ್ಷ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದಾಗಿ ಹೇಳಿತ್ತು. ಆ ಬಗ್ಗೆಯೂ ಠಾಕ್ರೆಯವರ ಉತ್ತರ - "ಪುರುಸೊತ್ತಿಲ್ಲ". ಉತ್ತರ -"ಅದಕ್ಕಿನ್ನು ಪುರುಸೊತ್ತು ಸಿಕ್ಕಿಲ್ಲ. ಬಹುಶಃ ಕೋಟಿಗಟ್ಟಲೆ ಲೂಟಿ ಹೊಡೆಯುವ ಎನ್ರೋನ್ ವಿದ್ಯುತ್ ಸ್ಥಾವರದ ಬಗ್ಗೆ ಯೋಚಿಸಲೂ ಪುರುಸೊತ್ತು ಸಿಕ್ಕಿಲ್ಲ. ಭೂ ಸುಧಾರಣೆ ಸಣ್ಣ ಉದ್ದಿಮೆಗಳು ಗ್ರಾಮೀಣ ಜನರು ನಗರಗಳಿಗೆ ವಲಸೆ ಬರುವುದನ್ನು ತಡೆಯುವ ಸಾಧ್ಯ ಎಂಬುದರಲ್ಲಿ ಇವರ ಯೋಜನೆಗೆ ಬರುವುದಿಲ್ಲ. ಆದರೆ "ಪರ್ಮಿಟ್ ವ್ಯವಸ್ಥೆ" ಬಗ್ಗೆ ಮಾತಾಡಲು, ಔರಾಂಗಾಬಾದ್, ಉಸ್ಮಾನಾ ಬಾದ್ ಹೆಸರು ಬದಲಿಸಲು, ಮುಂಬೈಯಿಂದ ಬಂಗಾಲಿ ಮುಸ್ಲಿಮರನ್ನು ಹೊರಗಟ್ಟಿಸುವ ಬಗ್ಗೆ ಚಿಂತಿಸಿ ರಾಡಲು ಪುರುಸೊತ್ತೇ ಬೇಡ.

ಈ ಭಾಷಾ ಹಾಗೂ ಧಾರ್ಮಿಕ ಸಂಕುಚಿತ ದೃಷ್ಟಿಕೋಣ ಪ್ರತಿಪಾದಿಸುವವರ ನಿಜ ಹೂರಣ ಇಷ್ಟರಿಂದಲೇ ತಿಳಿಯುತ್ತದೆಯಲ್ಲವೇ

ವಿದ್ಯುಚ್ಛಕ್ತಿ ಮತ್ತು ನೀರಾವರಿ

"ಒಣಗಿ ಹೋಗುತ್ತಿರುವ ಬೆಳೆಗಳನ್ನು ಉಳಿಸಲು ತುರ್ತು ಕ್ರಮ ಬೇಕೆ ಬೇಕು"

ವಿಧಾನಸಭೆಯಲ್ಲಿ ಶ್ರೀರಾಮರೆಡ್ಡಿ ಆಗ್ರಹ

(ವಿಧಾನಸಭೆಯಲ್ಲಿ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಸಿಪಿಐ(ಎಂ)ನ ಕಾಂ. ಶ್ರೀರಾಮರೆಡ್ಡಿಯವರ ಭಾಷಣದಿಂದ ಆಯ್ದ ಕೆಲವು ಅಂಶಗಳು)

ಕರ್ನಾಟಕ

ಕರ್ನಾಟಕ ರಾಜ್ಯದಲ್ಲಿ ಈ ಕೃಷಿ ರಂಗಕ್ಕೆ ಹೊಂದಿಕೊಂಡು ನೀರಾವರಿ ಪ್ರಶ್ನೆ ಇದೆ ವಿದ್ಯುಚ್ಛಕ್ತಿ ಪ್ರಶ್ನೆ ಇದೆ. ಮೊದಲನೇಯದು ವಿದ್ಯುಚ್ಛಕ್ತಿ ಬಗ್ಗೆ. ಸರ್ಕಾರ ಇವತ್ತು ಹೇಳುತ್ತಿದೆ ಸನಾನ್ಯ ಉಪ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ತಕ್ಷಣಕ್ಕೆ ಪರಿಹಾರ ನಮ್ಮಲ್ಲಿ ಇಲ್ಲ ಅಂತ. ತಕ್ಷಣಕ್ಕೆ ಪರಿಹಾರ ಇಲ್ಲದಿದ್ದರೆ ರೈತ ನಾಶ ಆಗುತ್ತಾನೆ. ಬೆಳೆ ನಾಶ ಆಗುತ್ತದೆ. ಇವತ್ತು ನನ್ನ ಜಿಲ್ಲೆಯಾದ ಕೋಲಾರದಲ್ಲಿ ಟೋಮೆಟೋ ಒಣಗಿ ಹೋಗಿರತಕ್ಕ ಫೋಟೋಗಳನ್ನು ನಾನು ತಮಗೆ ಕಳುಹಿಸುತ್ತಿದ್ದೇನೆ ತಾವು ನೋಡಬಹುದು. ಇನ್ನೊಂದು ಕಡೆ ಈರುಳ್ಳಿ ಕಲ್ಲಂಗಡಿ ನೀರು ಇಲ್ಲದೆ ಅಂದರೆ ಕರೆಂಟ್ ಇಲ್ಲದೆ. ಒಣಗಿ ಹೋಗಿದೆ. ಈರುಳ್ಳಿ ಸಂಪೂರ್ಣವಾಗಿ ಒಣಗಿ ಹೋಗಿದೆ. ಟಮೋಟೋ ಇವತ್ತು ರಸ್ತೆಗೆ ಬಿಸಾಕಿದ್ದಾರೆ.


ಏನು ಕಾರ್ಯಕ್ರಮವಿದೆ?

ಅದೇ ರೀತಿಯಲ್ಲಿ ಈರುಳ್ಳಿ ಬೆಳೆಯು ಸಂಪೂರ್ಣವಾಗಿ ಒಣಗಿ ಹೋಗಿ ಬಿಟ್ಟಿದೆ. ಸಂಪೂರ್ಣವಾಗಿ ಹಾಳಾಗಿ ಹೋದ ಈರುಳ್ಳಿ ಬೆಳೆಯ ಫೋಟೋವನ್ನು ಕೂಡ ತಮಗೆ ಕಳುಹಿಸುತ್ತಾ ಇದ್ದೇನೆ. ಕೋಲಾರ ಜಿಲ್ಲೆಯಿಂದ ಬಂದಿರತಕ್ಕಂತ ತಾವು ಕೂಡ ಈ ಬಗ್ಗೆ ಆಲೋಚನೆ ಮಾಡಬೇಕಾಗಿದೆ. ನಮ್ಮ ರೈತರ ಪರಿಸ್ಥಿತಿಯು ಇವೊತ್ತು ಈ ಹಂತಕ್ಕೆ ಬಂದಿದೆ. ವಿದ್ಯುಚ್ಛಕ್ತಿ ಕೊರತೆಯಿಂದಾಗಿ ಈ ಬೆಳೆಗಳು ನಾಶವಾಗಿವೆ, ರೈತರಿಗೆ ನಷ್ಟವಾಗಿದೆ. ನನಗೆ ಗೊತ್ತಿರತಕ್ಕ ಪ್ರಕಾರ ನಮ್ಮ ಜಿಲ್ಲೆಯಲ್ಲಿ ಸುಮಾರು ೫೦ ಕೋಟಿ ರೂಪಾಯಿಗಳಷ್ಟು ಬೆಳೆಗಳು ನಾಶವಾಗಿವೆ. ಇದಕ್ಕೆ ಕಾರಣ ವಿದ್ಯುಚ್ಛಕ್ತಿಯ ಕೊರತೆ. ನೀವು ಐದು ವರ್ಷಗಳಲ್ಲಿ ವಿದ್ಯುಚ್ಛಕ್ತಿಯ ವ್ಯವಸ್ಥೆಯನ್ನು ಸರಿಮಾಡುತ್ತೀರಿ ಎಂದು ಹೇಳಿದ್ದೀರಿ. ಆದರೆ ತತ್ ಕ್ಷಣಕ್ಕೆ ಏನಾದರೂ ಒಂದು ಪರಿಹಾರ ಅದಕ್ಕೆ ಬೇಕಲ್ಲ? ಯಾಕೆಂದರೆ ಕೋಲಾರ ಜಿಲ್ಲೆಯಲ್ಲಿ ಯಾವುದೇ ನದಿ ಇಲ್ಲ, ನಾಲೆ ಇಲ್ಲ, ಕೆರೆಗಳಲ್ಲಿ ನೀರೂ ಇಲ್ಲ, ಇವತ್ತೂ ನಮಗೆ ಇರತಕ್ಕಂಥ ಆಧಾರ ಎಂದರೆ ಬೋರ್ ವೆಲ್ ಗಳು ಮಾತ್ರ. ಅದಕ್ಕೂ 350 ಅಡಿಗಳಿಗಿಂತಲೂ ಕೆಳಗೆ ಹೋಗಬೇಕಾಗುತ್ತದೆ. ಇಷ್ಟು ಕಷ್ಟಪಟ್ಟು ಬೋರ್ ವೆಲ್ ಹಾಕಿ ನೀರು ವ್ಯವಸ್ಥೆ ಮಾಡಿಕೊಳ್ಳಬೇಕೆಂದರೆ ಸುಮಾರು ೭೦ ಸಾವಿರ ರೂಪಾಯಿಗಳಷ್ಟನ್ನು ಖರ್ಚು ಮಾಡಬೇಕಾಗುತ್ತದೆ. ಇಷ್ಟು ಹಣವನ್ನು ಖರ್ಚು ಮಾಡಿ ಬೋರ್ ವೆಲ್ ಹಾಕಿಸಿದರೆ ಅವರಿಗೆ ಕರೆಂಟ್ ಇಲ್ಲ. 70 ಸಾವಿರ ರೂಪಾಯಿ ಮಾಡಿ ಬೋರ್ ಹಾಕಿಸುವ ಶಕ್ತಿ ಎಷ್ಟು ಜನರಿಗೆ ಇದೆ? ಬಹಳಷ್ಟು ಜನರಿಗೆ ಇಲ್ಲ, ಮಧ್ಯಮವರ್ಗದ ರೈತರಿಗೆ, ಕೆಳಹಂತದ ರೈತರಿಗಂತೂ ಆ ಶಕ್ತಿಯೇ ಇಲ್ಲ, ಹಾಕಿದವರ ಪರಿಸ್ಥಿತಿ ಹೀಗಾಗಿದೆ. ಆದ್ದರಿಂದ ತತ್ಕ್ಷಣ ಸಮಸ್ಯೆಯ ಪರಿಹಾರದ ಬಗ್ಗೆ ಸರಕಾರದವರಲ್ಲಿ ಏನಾದರೂ ಕಾರ್ಯಕ್ರಮ ಇದೆಯೇ? ಅದು ಇದ್ದ ಹಾಗೆ ಇಲ್ಲ, ವಿದ್ಯುತ್ ಉತ್ಪಾದನೆ ಕಡಿಮೆ ಇದೆ ಎಂಬುದು ನಮಗೂ ಗೊತ್ತಿದೆ. ನಮ್ಮ ಬೇಡಿಕೆಯು 30 ಲಕ್ಷ ಮಿಲಿಯ ಯೂನಿಟ್ ಗಳು. ಆದರೆ ನಮ್ಮಲ್ಲಿ ಲಭ್ಯವಿರುವುದು ಕೇವಲ 21 ಸಾವಿರ ಯುನಿಟ್ ಗಳು ಮಾತ್ರ. ಇದು ಮೂಲಭೂತವಾದ ಸಮಸ್ಯೆಯಾಗಿದೆ. ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ. ಉತ್ತರದಲ್ಲಿ ಕೊಜಾಂಟ್ರಿಕ್ಸ್ ಕಂಪನಿಯ ಜೊತೆಗೆ ಒಪ್ಪಂದ ಮಾಡಿಕೊಂಡಿದ್ದೇವೆ ಎಂದು ಹೇಳಿದ್ದಾರೆ. ಅವರಿಗೆ ಎಷ್ಟು ಲಾಭ ಕೊಡುತ್ತೇವೆಂದು ನೀವು ಅವರಿಗೆ ಆಶ್ವಾಸನೆ ಕೊಟ್ಟಿದ್ದೀರಿ ಎಂದು ಕೇಳಿದ್ದೇನೆ. ಈಕ್ವಿಟಿ ಶೇರ್ ನ ಮೇಲೆ 16 ಪರ್ಸೆಂಟ್‌ನಷ್ಟು ಲಾಭಾಂಶವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಅವರು ಉತ್ಪಾದನೆ ಮಾಡುವಂಥ ಕರೆಂಟ್‌ಗೆ ಒಂದು ಯುನಿಟ್‌ಗೆ 4 ರೂ. 60 ಪೈಸೆಗಳಷ್ಟು ರೇಟ್ ಹಾಕುತ್ತಾರೆ. ಇದಕ್ಕೆ ಮಹಾರಾಷ್ಟ್ರ ಸರ್ಕಾರದ ಉದಾಹರಣೆಯು ನಮ್ಮ ಮುಂದೆ ಇದೆ. ಇದು ದೀರ್ಘಕಾಲದ ಯೋಜನೆಯಾಗಿದೆ. ಈಗ ತತ್ ಕ್ಷಣದ ಪರಿಹಾರವಾದರೂ ಏನು? ಇವೊತ್ತು ಕೋಲಾರ ಜಿಲ್ಲೆಯಲ್ಲಿ ರೈತರು ನಾಶವಾಗಿದ್ದಾರೆ. ಬೇರೆ ಜಿಲ್ಲೆಗಳಲ್ಲಿಯೂ ಹೆಚ್ಚು ಕಡಿಮೆ ಇದೇ ಪರಿಸ್ಥಿತಿಯು ಕರೆಂಟ್‌ನ ವಿಚಾರದಲ್ಲಿದೆ ಎಂದು ನಾನು ಅರಿತಿದ್ದೇನೆ. ಇಷ್ಟೇ ಅಲ್ಲದೆ ಕುಡಿಯುವ ನೀರಿನ ಸಮಸ್ಯೆಯು ಕೂಡ ಇದ್ದು, ಅದಕ್ಕೂ ಕರೆಂಟ್‌ನ ಪೂರೈಕೆ ಇಲ್ಲ. ಇದರ ಬಗ್ಗೆ ತತ್ ಕ್ಷಣದಲ್ಲಿ ಏನು ಮಾಡಬೇಕಾಗಿದೆ ಎಂಬುದನ್ನು ಆಲೋಚನೆ ಮಾಡಬೇಕಾಗಿದೆ. ಸರಕಾರದ ಮುಂದಿರತಕ್ಕಂಥ ಸಮಸ್ಯೆಗಳು ಕೂಡಾ ನಮಗೆ ಗೊತ್ತಿದೆ. ನಮ್ಮಲ್ಲಿ ವಿದ್ಯುತ್‌ನ ಉತ್ಪಾದನೆ ಹೆಚ್ಚಿಗೆ ಆಗಬೇಕು. ಅದಕ್ಕಾಗಿ ಹಿಂದಿನ ಸರಕಾರಗಳು ಸೂಕ್ತ ಯೋಜನೆಗಳನ್ನು ಹಾಕಿರಲಿಲ್ಲ ಈಗಲಾದರೂ ಕೂಡಾ ಸರಕಾರದವರು ಸೂಕ್ತ ಯೋಜನೆಗಳನ್ನು ಹಾಕಬೇಕಾಗುತ್ತದೆ.

ತಕ್ಷಣದ ಪರಿಹಾರ

ಆದರೆ ತತ್‌ಕ್ಷಣದ ಸಮಸ್ಯೆ ಏನೆಂದರೆ ಇವೊತ್ತು ಬೆಳೆಗಳೆಲ್ಲವೂ ನಾಶವಾಗಿದೆ. ಒಣಗಿ ಹೋಗುತ್ತಿರುವ ಬೆಳೆಗಳನ್ನು ಕಾಪಾಡುವ ದೃಷ್ಟಿಯಲ್ಲಿ ಏನಾದರೂ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳ ಬೇಕೆಂಬ ದೃಷ್ಟಿಯಲ್ಲಿ ರಾಜ್ಯಪಾಲರ ಭಾಷಣದಲ್ಲಿ ಹೇಳಬೇಕಾಗಿತ್ತು. ಆದರೆ ಹಾಗೆ ಯಾವ ಯೋಜನೆಗಳನ್ನು ಹಾಕಿಕೊಂಡ ಬಗ್ಗೆ ಹೇಳಿಲ್ಲ.

ಇನ್ನು ನೀರಾವರಿ ಪ್ರಶ್ನೆಯನ್ನು ಹೇಳುವಾಗ ಅದರ ಗಂಭೀರತೆಯನ್ನು ಅರಿತು ತಾವು ಒಂದು ದಿನದ ಚರ್ಚೆಯನ್ನು ಅದಕ್ಕೆ ನಿಗದಿ ಮಾಡಿದ್ದೀರಿ. ಆ ಕುರಿತು ನಾನು ಹೆಚ್ಚು ಹೇಳಲು ಹೋಗುವುದಿಲ್ಲ, ನಮ್ಮ ಕೋಲಾರದಂಥ ಜಿಲ್ಲೆಗಳಿಗೆ ಎರಡೇ ದಾರಿ ಇರತಕ್ಕಂಥಾದ್ದು. ಸಣ್ಣ ನೀರಾವರಿಗೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಕೆರೆಗಳಲ್ಲಿನ ಹೂಳನ್ನು ತೆಗೆಯಬೇಕಾಗುತ್ತದೆ. ಹೆಚ್ಚು ಹಣವನ್ನು ಖರ್ಚು ಮಾಡಿ ನೀರನ್ನು ಸ್ಟೋರ್ ಮಾಡುವಂಥ ಕೆಲಸವನ್ನು ಮಾಡಬೇಕಾಗುತ್ತದೆ. ಎರಡನೇಯದಾಗಿ ನಾನು ಕೇಳಬಯಸುವುದೇನೆಂದರೆ, ನಾನು ನಿನ್ನೆ ಕೇಳಿದ ಪ್ರಶ್ನೆಯೊಂದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೂಡ ಕೊಟ್ಟಿದ್ದಾರೆ. ಭದ್ರಾ ಮೇಲ್ದಂಡೆ ಯೋಜನೆಯ ಬಗ್ಗೆ. ಭದ್ರಾ ಮೇಲ್ದಂಡೆ ಯೋಜನೆಯ ಮೂಲಕ ಮಾತ್ರ ನಮ್ಮ ತುಮಕೂರು, ಚಿತ್ರದುರ್ಗ ಮತ್ತು ಕೋಲಾರ ಜಿಲ್ಲೆಗಳಿಗೆ ನೀರು ಬರುವ ಸಾಧ್ಯತೆಯಾಗುತ್ತದೆ. ಬೇರೆ ಯಾವುದೇ ಸಾಧ್ಯತೆಗಳು ಕಡಿಮೆ ಇದೆ. ಆದರೆ ಈ ಯೋಜನೆಯನ್ನು ಜಾರಿ ಮಾಡುವುದರಲ್ಲಿ ಹಲವಾರು ಸಮಸ್ಯೆಗಳು ಇರಬಹುದು. ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮತ್ತು ಸರಕಾರದವರಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ನಮ್ಮ ಕೋಲಾರ ಜಿಲ್ಲೆಯು ಬರದ ಜಿಲ್ಲೆ, ಎಷ್ಟೇ ಸಮಸ್ಯೆಗಳು ಬಂದರೂ ಮಾನ್ಯ ದೇವೇಗೌಡರ ಕಾಲದಲ್ಲಿ ಜಿಲ್ಲೆಯ ವ್ಯವಸಾಯಕ್ಕೆ ನೀರನ್ನು ತಂದು ಕೊಟ್ಟಿದ್ದಾರೆ ಎಂಬ ಕೀರ್ತಿಯು ನಿಮಗೆ ಬರುವಂತಾಗಲಿ. ನಮ್ಮ ರೈತರುಗಳು ತಮ್ಮನ್ನು ಶಾಶ್ವತವಾಗಿ ನೆನೆಯಲಿ ಎಂದು ಆಶಿಸುತ್ತೇನೆ. ಭದ್ರಾಮೇಲ್ದಂಡೆ ಯೋಜನೆಯನ್ನು ಅವರ ಕಾಲದಲ್ಲಿ ಏನಾದರೂ ಮಾಡಿ ಕೈಗೆತ್ತಿಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇವೊತ್ತು ಈ ರೀತಿಯಲ್ಲಿ ಸಣ್ಣ ನೀರಾವರಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡಬೇಕಾಗಿದೆ. ಹೀಗೆ ಪ್ರಾಮುಖ್ಯತೆಯನ್ನು ಕೊಡದೇ ಹೋದರೆ ನದಿ ಇಲ್ಲದಿರತಕ್ಕಂಥ ಜಿಲ್ಲೆಗಳಿಗೆ ನೀರಿನ ಸಮಸ್ಯೆಯು ಬಹಳಷ್ಟು ಗಂಭೀರವಾಗುತ್ತದೆ.



"ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಪರಿಸ್ಥಿತಿ ಭಯಾನಕವಾಗಿದೆ"

ಕಾಂ. ಶ್ರೀ ರಾಮರೆಡ್ಡಿ

(ಕರ್ನಾಟಕ ವಿಧಾನ ಸಭೆಯಲ್ಲಿ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲೆ ಭಾಷಣವನ್ನು ಕಾಂ. ಶ್ರೀರಾಮರೆಡ್ಡಿಯವರು ಮಂಡಿಸಿದ ಕೆಲವು ಭಾಷಣಗಳು)

ಇವೊತ್ತು ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯದ ಪರಿಸ್ಥಿತಿಯು ಗಂಭೀರ ವಿಷಯವಾಗಿದೆ. ಇದನ್ನು ನೆನಸಿಕೊಂಡರೆ ಭಯವಾಗುತ್ತದೆ. ನಾವು ಇನ್ನೈದು ವರ್ಷಗಳಲ್ಲಿ 20ನೇ ಶತಮಾನಕ್ಕೆ ಕಾಲಿಡುತ್ತಿದ್ದೇವೆ. ಇವೊತ್ತು ಅತೀ ಹೆಚ್ಚು ಹಳ್ಳಿಗಾಡಿನಲ್ಲಿರತಕ್ಕಂಥ ಜನರು ನಿಂಬೆಹಣ್ಣು, ಬೇವಿನ ಸೊಪ್ಪು, ಮಂತ್ರವನ್ನು ಹಾಕಿಸಿಕೊಳ್ಳುತ್ತಿದ್ದಾರೆಯೇ ಹೊರತು ಔಷಧಿ ಹಾಕಿಸಿಕೊಳ್ಳುತ್ತಾ ಇಲ್ಲ, ಅದಕ್ಕೆ ಎರಡು ಮುಖ್ಯ ಕಾರಣಗಳು ಇವೆ. ಒಂದು ಅವರಲ್ಲಿರತಕ್ಕಂಥ ಬೌದ್ಧಿಕ ದಾರಿದ್ರ್ಯ ಅಂದರೆ ಅವರ ಮೂಢನಂಬಿಕೆಗಳು ಇತ್ಯಾದಿಗಳು. ಇನ್ನೊಂದು ಅಲ್ಲಿ ಆಸ್ಪತ್ರೆಗಳ ವ್ಯವಸ್ಥೆ ಇಲ್ಲದೆ ಇರುವುದು. ಅವರು ಆಸ್ಪತ್ರೆಗೆ ಬರಬೇಕಾದರೆ ಕನಿಷ್ಠ 10-12 ಮೈಲುಗಳವರಗೆ ಬರಬೇಕಾಗುತ್ತದೆ. ಹಳ್ಳಿಗಾಡಿನಲ್ಲಿರತಕ್ಕಂತ ಜನರ ಆರೋಗ್ಯದ ಕುರಿತಾಗಿ ತಾವು ಗಂಭೀರವಾಗಿ ಪರಿಶೀಲನೆ ಮಾಡುವುದಾದರೆ ಎರಡು ಪ್ರಮುಖವಾದಂಥ ಪ್ರಶ್ನೆಗಳಿಗೆ ಸರಕಾರದವರೇ ಹೇಳಿರುವ ಪ್ರಕಾರ 40 ಪರ್ಸೆಂಟ್ ನಷ್ಟು ಜನರು ಬಡತನದ ರೇಖೆಗಿಂತ ಕೆಳಗೆ ಇದ್ದಾರೆ. ಅವರಿಗೆ ಪೌಷ್ಠಿಕ ಆಹಾರ ಸಿಗುತ್ತಾ ಇಲ್ಲ.

ಅಪೌಷ್ಠಿಕತೆ......

ಅಪೌಷ್ಠಿಕತೆಯಿಂದಾಗಿ ಹಳ್ಳಿ ಮತ್ತು ಪಟ್ಟಣಗಳಲ್ಲಿನ ಜನರಿಗೆ ಕಾಯಿಲೆಗಳು ಹೆಚ್ಚಾಗಿ ಬರುತ್ತಿವೆ. ಪೌಷ್ಠಿಕ ಆಹಾರೋತ್ಪಾದನೆಯನ್ನು ಹೆಚ್ಚಿಸುವ ಕಡೆಗೆ ಗಮನ ಕೊಡಬೇಕು ಮತ್ತು ಪೌಷ್ಠಿಕಾಹಾರವನ್ನು ಜನಸಾಮಾನ್ಯರಿಗೆ ಸರ್ಕಾರದವರೇ ಒದಗಿಸಿಕೊಡುವ ವ್ಯವಸ್ಥೆಯಾಗಬೇಕು. ಒಂದು ವರದಿಯ ಪ್ರಕಾರ ಒಬ್ಬ ಮನುಷ್ಯ ಆರೋಗ್ಯವಂತನಾಗಿರಬೇಕಾದರೆ ಪ್ರತಿದಿವಸವೂ 2600 ಕ್ಯಾಲರಿಗಳಷ್ಟು ಆಹಾರವು ಬೇಕಾಗುತ್ತದೆ. ನಮ್ಮ ದೇಶದಲ್ಲಿ ಸಿಗುವ ಆಹಾರದ ಕ್ಯಾಲರಿಯು 900 ಮಾತ್ರ. ಅಂದರೆ 1500 ಕ್ಯಾಲರಿಗಳಷ್ಟು ಆಹಾರದ ಕೊರತೆ ಇದೆ ಎಂದ ಹಾಗೆ ಆಯಿತು. ಇದರಿಂದಾಗಿ ಮೂಲತಃ ಜನರು ನಾನಾ ರೀತಿಯ ಕಾಯಿಲೆಗಳಿಗೆ ಒಳಗಾಗುತ್ತಾ ಇದ್ದಾರೆ. ಟೆಲಿಗ್ಗೆ ಮಾನ್ಯ ಸದಸ್ಯರಾದ ಶ್ರೀ ಕುಂಬ್ಳೆ ಸುಂದರರಾಯರು ಸುರತ್ಕಲ್ ನಗರದ ಮಧ್ಯದಲ್ಲಿ ಕೊಳಚೆ ನೀರು ಹರಿದು ಹೋಗುತ್ತಿರುವ ಬಗ್ಗೆ ಹೇಳಿದರು. ಆದರೆ ಇಂಥ ದೃಶ್ಯವು ನಮ್ಮ ಎಲ್ಲಾ ಹಳ್ಳಿಗಳಲ್ಲಿಯೂ ಸಾಮಾನ್ಯವಾಗಿರುತ್ತದೆ. ನಾನು ಹಿಂದಿನ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಕೂಡ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಸರಕಾರದವರು ಮಹಿಳೆಯರ ಬಗ್ಗೆ ಬಹಳ ಸಹಾನುಭೂತಿಯನ್ನು ವ್ಯಕ್ತಪಡಿಸಿದ್ದಾರೆ. ಇದು ಸಂತೋಷ ತರುವ ವಿಚಾರ. ಅದೇ ರೀತಿಯಲ್ಲಿ ರಿಸರ್‌ವೇಶನ್ ಮಾಡುತ್ತೇವೆ ಎಂದು ಹೇಳಿದ್ದಾರೆ, ಬಹಳ ಸಂತೋಷ. ನಮ್ಮ ಬೆಂಬಲ ನಿಮ್ಮ ಬಗ್ಗೆ ಇದೆ. ಗ್ರಾಮೀಣ ಪ್ರದೇಶಗಳಲ್ಲಿ ವಾಸಮಾಡತಕ್ಕಂಥ ನೂರಕ್ಕೆ 70ರಷ್ಟು ಮಹಿಳೆಯರಿಗೆ ಇವೊತ್ತು ಶೌಚಕ್ಕಾಗಿ ಬಹಿರಂಗ ಸ್ಥಳಗಳಿಗೆ ಹೋಗಬೇಕಾದ ಸ್ಥಿತಿ ಇದೆ. ಅವರಿಗೆ ಯಾವುದೇ ವ್ಯವಸ್ಥೆಯು ಇಲ್ಲ, ಇಂಥ ವಿಚಾರದ ಬಗ್ಗೆ ಒಂದು ನಾಗರೀಕ ಸಮಾಜವು ತಲೆತಗ್ಗಿಸಬೇಕಾಗಿದೆ. ಇದೊಂದು ತೀರಾ ಅಮಾನವೀಯವಾದಂಥ ಪರಿಸ್ಥಿತಿ. ಇದನ್ನು ಕೇವಲ ನೈರ್ಮಲ್ಯದ ಪ್ರಶ್ನೆಯಾಗಿ ಮಾತ್ರ ನಾನು ಹೇಳುತ್ತಾ ಇಲ್ಲ, ಇದು ನಮ್ಮ ನಾಗರೀಕ ಸಮಾಜದ ಮುಂದಿರತಕ್ಕಂಥ ಒಂದು ದೊಡ್ಡ ಸವಾಲು ಕೂಡ ಆಗಿದೆ. ನೈರ್ಮಲ್ಯದ ಬಗ್ಗೆ ಎಂಥ ಗಂಭೀರ ಸ್ಥಿತಿ ಇದೆ ಎಂಬುದನ್ನು ಹೋಗಿ ನೋಡಿದಾಗ ತಿಳಿಯುತ್ತದೆ. ಇವೊತ್ತು ಹಲವಾರು ಕಾರ್ಯಕ್ರಮಗಳಿವೆ. ಪಟ್ಟಣಗಳಿಗಾಗಿ ಒಳಚರಂಡಿ ಮಂಡಳಿಯೇ ಇದೆ. ಆದರೆ ನಮ್ಮ ಹಳ್ಳಿಗಳಿಗೆ ಮಾತ್ರ ಯಾವುದೇ ಬೋರ್ಡ್ ಇಲ್ಲ, ಅಲ್ಲಿ ಒಳಚರಂಡಿಯೂ ಇಲ್ಲ, ಮೇಲ್ಚರಂಡಿಯೂ ಇಲ್ಲ. ಕೊಳಚೆ ನೀರು ಮೇಲ್ಗಡೆಯೇ ಹರಿದು ಹೋಗಬೇಕು. ನಾನು ಎಲ್ಲಾ ವಿವರಗಳನ್ನು ಹೇಳಿದರೆ ಅದು ಇರಿಸುಮುರಿಸು ಆಗಿ ಸಮಸ್ಯೆಯಾಗಬಹುದು. ಇನ್ನು ಕುಡಿಯುವ ನೀರಿನ ಪರಿಸ್ಥಿತಿಯು ನಮ್ಮಲ್ಲಿ ಏನಾಗಿದೆ ಅಂದರೆ, ಎಲ್ಲರೂ ಕೂಡ ಇದನ್ನು ರಾಜಕೀಯ ಬಂಡವಾಳವಾಗಿ ಮಾಡಿಕೊಳ್ಳಲು ಪ್ರಯತ್ನ ಮಾಡುತ್ತಿದ್ದಾರೆಯೇ ಹೊರತು ನಿಜವಾಗಿಯೂ ಸಮಸ್ಯೆಯನ್ನು ಪರಿಹರಿಸಿಲ್ಲ. ಮಾನ್ಯ ನಜೀರ್ ಸಾಬ್ ರವರು ಬೋರ್ ವೆಲ್ ಗಳನ್ನು ಹಾಕುವ ಮೂಲಕ ಕರ್ನಾಟಕಕ್ಕೆ ಒಂದು ದೊಡ್ಡ ಕೊಡುಗೆಯನ್ನು ಕೊಟ್ಟರು. ಆದರೆ ಅದೇ ಬೋರ್‌ವೆಲ್‌ಗಳು ಸರಿಯಾಗಿ ರಿಪೇರಿ ಕೂಡಾ ಆಗುತ್ತಾ ಇಲ್ಲ. ಹಾಕಿರತಕ್ಕಂಥ ಬೋರ್‌ವೆಲ್‌ಗಳಲ್ಲಿ ನೀರು ಇಲ್ಲ, ಎನ್.ಆರ್.ಡಬ್ಲ್ಯು. ಸ್ಕೀಮ್ ನಲ್ಲಿ ಮಾಡಿದ ವ್ಯವಸ್ಥೆಯಲ್ಲಿ ಕೆಲವುಕಡೆಗಳಲ್ಲಿ ನೀರೇ ಇಲ್ಲ, ಇನ್ನು ಕೆಲವು ಕಡೆಗಳಲ್ಲಿ ಪಂಪ್ ಹಾಕಿಸಿಲ್ಲ, ಹಳ್ಳಿಗಾಡಿನಲ್ಲಿ ನೀರಿಗಾಗಿ 5-6 ಕಿ.ಮೀಗಳಷ್ಟು ದೂರ ಹೋಗಬೇಕಾಗಿದೆ. ಈ ಎಲ್ಲಾ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಗ್ರಾಮೀಣ ನೈರ್ಮಲ್ಯದ ಬಗ್ಗೆ ಯೋಚನೆ ಮಾಡಬೇಕಾಗಿದೆ. ಈ ಬಗ್ಗೆ ಹೆಚ್ಚಿನ ಹಣವನ್ನು ಸರ್ಕಾರದವರು ತೊಡಗಿಸದೇ ಹೋದರೆ ನೈರ್ಮಲ್ಯ ಸ್ಥಿತಿಯನ್ನು ಕಾಪಾಡಲು ಮತ್ತು ಅದನ್ನು ಉತ್ತಮಪಡಿಸಲು ಯಾವುದೇ ರೀತಿಯಲ್ಲಿ ಕೂಡಾ ಸಾಧ್ಯವಾಗುವುದಿಲ್ಲ, ಅಂಥ ಒಂದು ಕಾರ್ಯಕ್ರಮವನ್ನು ಇಡಬೇಕಾಗಿತ್ತು. ಆದರೆ ಅದನ್ನು ಇಟ್ಟ ಬಗ್ಗೆ ಯಾವುದೇ ಸೂಚನೆಗಳು ಇಲ್ಲ, ನಾವು ಆರೋಗ್ಯ ಕಾರ್ಯಕ್ರಮಗಳನ್ನು ಹೆಚ್ಚು ಹಾಕಿಕೊಳ್ಳುತ್ತೇವೆ ಮತ್ತು ಆರೋಗ್ಯದ ಕುರಿತಾದ ಕಾರ್ಯಕ್ರಮಗಳ ಬಗ್ಗೆ ಅಧಿಕ ಗಮನ ಕೊಡುತ್ತೇವೆ ಎಂದು ಹೇಳಿದ್ದಾರೆ.

ಓದುಗರ ಏಜೆನ್ಸಿದಾರರ ಗಮನಕ್ಕೆ

ಹಿಂದಿನ ಸಂಚಿಕೆ ಸರಿಯಾದ ವೇಳೆಯಲ್ಲಿ ಮುದ್ರಣಕ್ಕೆ ಸಿದ್ಧವಾಗಿದ್ದರೂ ಮುದ್ರಣ ಕಾಗದದ ಅಭಾವ ಹಾಗೂ ಅಂಚೆ ಕಛೇರಿಯ ರಜಾಗಳಿಂದಾಗಿ ಸಮಯಕ್ಕೆ ಸರಿಯಾಗಿ ಓದುಗರಿಗೆ ಏಜೆನ್ಸಿದಾರರಿಗೆ ತಲುಪಿಸಲಾಗಲಿಲ್ಲ. ಇದರಿಂದ ನಮ್ಮ ಬಹಳಷ್ಟು ಓದುಗರಿಗೆ ಈ ಸಂಚಿಕೆಯೊಂದಿಗೇ ಹಿಂದಿನ ಸಂಚಿಕೆ ತಲುಪುತ್ತಿದೆ.

*ಈ ವಿಳಂಬಕ್ಕಾಗಿ ವಿಷಾದಿಸುತ್ತೇವೆ ಮುದ್ರಣದ ವೆಚ್ಚ ಏರುತ್ತಿರುವುದರಿಂದ ಐಕ್ಯರಂಗವನ್ನು ನಿಯಮಿತವಾಗಿ ತರಲು ಸಹಾಯಕವಾಗುವಂತೆ ಏಜೆನ್ಸಿದಾರರು ತಮ್ಮ ಏಜೆನ್ಸಿ ಬಾಕಿಯನ್ನು ತ್ವರಿತವಾಗಿ ತೀರಿಸಬೇಕೆಂದೂ ಕೋರುತ್ತೇವೆ

—ವ್ಯವಸ್ಥಾಪಕರು

ಸಿಪಿಐ(ಎಂ)ನ 15ನೇ ಮಹಾಧಿವೇಶನ

ಪಂಜಾಬಿನ ಚಂಡೀಗಢದಲ್ಲಿ ಸಿಪಿಐ(ಎಂ)ನ 15ನೇ ಮಹಾಧಿವೇಶನ ಏಪ್ರಿಲ್ 8 ರಂದು ಬೃಹತ್ ರ‍್ಯಾಲಿಯೊಂದಿಗೆ ಮುಕ್ತಾಯಗೊಂಡಿತು. ಏಪ್ರಿಲ್ 3 ರಿಂದ ಆರಂಭವಾದ ಈ ಮಹಾಧಿವೇಶನದ ಮೊದಲ ದಿನದ ಕಲಾಪಗಳ ಬಗ್ಗೆ ಕಳೆದ ವಾರ ಓದಿರುವಿರಿ. ಉಳಿದ 5 ದಿನಗಳ ಕಲಾಪಗಳ ಬಗ್ಗೆ ಒಂದು ವರದಿ.

ರಾಜಕೀಯ ನಿರ್ಣಯದ ಮೇಲೆ ಚರ್ಚೆ

“ಸಾಮೂಹಿಕ ಹೋರಾಟಗಳು ಮತ್ತು ವರ್ಗ ಸಮರಗಳನ್ನು ಬಲಪಡಿಸುವುದಲ್ಲದೆ ಬೇರೆ ಸುಲಭೋಪಾಯವಿಲ್ಲ”

ಎರಡನೇ ದಿನ (ಏಪ್ರಿಲ್ 4 ರಂದು) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ರವರು “ರಾಜಕೀಯ ಸಮೀಕ್ಷಾ ವರದಿ (ರಾಜಕೀಯ ಸಂಘಟನಾ ವರದಿಯ ಮೊದಲ ಭಾಗ) ಮಂಡಿಸಿದರು. ಇದು 1992 ರಲ್ಲಿ ಮದ್ರಾಸಿನಲ್ಲಿ ನಡೆದ 14ನೇ ಮಹಾಧಿವೇಶನ ಕೈಗೊಂಡ ನಿರ್ಣಯಗಳ ಜ್ಯಾರಿಯ ಒಂದು ಸಮೀಕ್ಷೆಯಾಗಿತ್ತು.

ಕಳೆದ ಮೂರು ವರ್ಷಗಳ ಪ್ರಮುಖ ರಾಜಕೀಯ ಬೆಳವಣಿಗೆಗಳ ಗಮನ ಸೆಳೆಯುತ್ತಾ ಪಕ್ಷದ ಮುಂಬಿಡತ್ವ ಆಗಾಗ ಕೈಗೊಂಡ ನಿರ್ಣಯಗಳನ್ನು ವಿವರಿಸಿದರು. ಈ ಸಂದರ್ಭದಲ್ಲಿ ಜೂನ್ 1992ರಲ್ಲಿ ರಾಷ್ಟ್ರಪತಿ ಚುನಾವಣೆಗಳಲ್ಲಿ ಸಿಪಿಐ(ಎಂ) ನಿಲುವುಗಳ ಬಗ್ಗೆ ಹೇಳಿದರು. ರಾಷ್ಟ್ರಪತಿ, ಉಪರಾಷ್ಟ್ರಪತಿ ಎರಡೂ ಸ್ಥಾನಗಳಲ್ಲಿ ನಂಬಲರ್ಹ ಜಾತ್ಯಾತೀತ ಹಿನ್ನೆಲೆಯುಳ್ಳವರು ಇರಬೇಕು ಎಂಬುದು ಪಕ್ಷದ ವಿಚಾರವಾಗಿತ್ತು. ಚುನಾವಣೆ ನಡೆದ ಆರು ತಿಂಗಳೊಳಗೆ ಬಾಬ್ರಿ ಮಸೀದಿ ಧ್ವಂಸದೊಂದಿಗೆ ದೇಶ ಗಂಭೀರ ಕೋಮುವಾದಿ ಬಿಕ್ಕಟ್ಟನ್ನು ಎದುರಿಸಬೇಕಾಗಿ ಬಂದ ಸಂದರ್ಭದಲ್ಲಿ ನಮ್ಮ ಈ ನಿಲುವು ಎಷ್ಟು ಸರಿಯೆಂದು ಸಾಬೀತಾಯಿತು. ರಾಷ್ಟ್ರಪತಿಗಳು ಆತಂಕ ವ್ಯಕ್ತಪಡಿಸಿ ಸಾರ್ವಜನಿಕ ಹೇಳಿಕೆ ನೀಡಿದರು ಎಂದು ಸುರ್ಜಿತ್ ನೆನಪಿಸಿದರು.

ಬಿಜೆಪಿ ಮತ್ತು ಕಾಂಗ್ರೆಸ್(ಐ) ಎರಡರ ವಿರುದ್ಧವೂ ಹೋರಾಟ ಅಗತ್ಯ ಎಂದು ಒತ್ತಿ ಹೇಳುತ್ತಾ ಸುರ್ಜಿತ್ ಒಂದು ಮಾರ್ಕ್ಸ್‌ವಾದಿ ಪಕ್ಷವಾಗಿ ಸಿಪಿಐ(ಎಂ)ನ ಕಾರ್ಯತಂತ್ರಗಳು ನಿರ್ದಿಷ್ಟ ಸಮಯದ ಮೂರ್ತ ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ ಎಂದರು. ಉದಾಹರಣೆಗೆ ಮಹಾರಾಷ್ಟ್ರದಲ್ಲಿ ಒಂದು ಗಂಭೀರ ಕೋಮು ಧ್ರುವೀಕರಣ ನಡೆಯುವಂತಿದ್ದರೆ ಆಗ ಪಕ್ಷ ತನ್ನೆಲ್ಲಾ ಶಕ್ತಿಯನ್ನು ಕೋಮುವಾದದ ಧಾಳಿಯ ವಿರುದ್ಧ ಸೆಣಸಲು ಕೇಂದ್ರೀಕರಿಸಬೇಕು. ಆದರೆ ಕಾಂಗ್ರೆಸ್(ಐ)ನ ಆರ್ಥಿಕ ನೀತಿಗಳ ವಿರುದ್ಧ ಹೋರಾಟವೂ ನಿರ್ಣಾಯಕ ಸಂಗತಿ ಎನ್ನುತ್ತಾ ಕಳೆದ ಮೂರು ವರ್ಷಗಳೂ ನಡೆದ ಎಡನೇತೃತ್ವದ ಬೃಹತ್ ಪ್ರಕ್ಷೋಭೆ ಹಾಗೂ ಮುಷ್ಕರಗಳನ್ನು ನೆನಪಿಸಿದರು. ಆರ್ಥಿಕ ನೀತಿಗಳ ವಿರುದ್ಧ ಹೆಚ್ಚುತ್ತಿರುವ ಪ್ರತಿರೋಧವನ್ನು ಎರಡು ಬೆಳವಣಿಗೆಗಳಲ್ಲಿ ಕಾಣಬಹುದು - ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್(ಐ) ಸೋಲು ಹಾಗೂ ಕಾಂಗ್ರೆಸ್ ಪಕ್ಷದೊಳಗೆ ಬೆಳೆಯುತ್ತಿರುವ ಬಿಕ್ಕಟ್ಟು. ಕಾಂಗ್ರೆಸ್(ಐ) ನೀತಿಗಳ ವಿರುದ್ಧ ಹೋರಾಟ ತೀವ್ರಗೊಳಿಸಬೇಕು ಎಂದು ಅವರು ಹೇಳಿದರು.

ಝಾರ್ಖಂಡ್, ಉತ್ತರಾಖಂಡ ಹಾಗೂ ಇಂತಹ ಇತರ ಆಂದೋಲನಗಳ ಬಗ್ಗೆ ಹೇಳುತ್ತಾ ಪಕ್ಷ ತಮ್ಮ ಸ್ವಂತಿಕೆಗಾಗಿ ಹೋರಾಡುತ್ತಿರುವ ಜನಗಳ ಆಕಾಂಕ್ಷೆಗಳನ್ನು ಇನ್ನಷ್ಟು ಅರ್ಥಮಾಡಿಕೊಳ್ಳಬೇಕು ಎಂದರು. ಸ್ವಂತಿಕೆಯ ರಕ್ಷಣೆ ಮತ್ತು ಸ್ವಾಯತ್ತತೆಯ ಈ ನಿರ್ಣಾಯಕ ಪ್ರಶ್ನೆಗಳನ್ನು ಪಕ್ಷ ಕೈಗೆತ್ತಿಕೊಳ್ಳುವಲ್ಲಿ ವಿಫಲವಾದರೆ ಅದರರ್ಥ ಈ ಆಂದೋಲನಗಳ ಹಿಂದಿರುವ ಜನಸಮೂಹಗಳನ್ನು ಬಂಡವಾಳಶಾಹಿ ಪಕ್ಷಗಳಿಗೆ ವಹಿಸಿ ಕೊಟ್ಟಂತಾಗುತ್ತದೆ. ಜಾತಿ ಸಮಸ್ಯೆಯ ಬಗ್ಗೆಯೂ ಹೇಳುತ್ತಾ ದಲಿತರು ಮತ್ತು ಹಿಂದುಳಿದ ಜಾತಿಗಳಲ್ಲಿ ಪ್ರಜ್ಞೆ ಎದ್ದುಬಂದಿರುವುದನ್ನು ನಾವು ಗಮನಿಸಬೇಕು, ಜಾತಿವಾದಿ ಪಕ್ಷಗಳಿಗಿಂತ ಭಿನ್ನವಾಗಿ ಜಾತಿ ದಮನದ ಮೂಲದಲ್ಲಿರುವ ಭೂಸುಧಾರಣೆ ಮತ್ತಿತರ ಸಾಮಾಜಿಕ-ಆರ್ಥಿಕ ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳಬೇಕು ಎಂದರು.

ಮುಸ್ಲಿಂ ಲೀಗ್ ನಲ್ಲಿ ಒಡಕಿನ ಬಗ್ಗೆ ಕೇರಳದಲ್ಲಿ ಅಂಗೀಕರಿಸಿದ ನಿಲುವಿನ ಬಗ್ಗೆ ಮಾತನಾಡುತ್ತಾ ಯಾವುದೇ ಕೋಮುವಾದಿ ಪಕ್ಷದೊಂದಿಗೆ ಯಾವುದೇ ರೀತಿಯಲ್ಲಿ ಸೇರಬಾರದೆಂದು 12ನೇ ಮಹಾಧಿವೇಶನ ನಿರ್ಣಯಿಸಿದ್ದನ್ನು ಪುನರುಚ್ಚರಿಸಿದರು. ಪಕ್ಷ ಸ್ವತಂತ್ರ ವಾಗಿ ಮುಸ್ಲಿಂ ಜನಸಮೂಹಗಳ ಬಳಿಗೆ ಹೋಗುವ, ಅವರನ್ನು ಎಡಶಕ್ತಿಗಳ ಸುತ್ತ ದೊಡ್ಡ ಪ್ರಮಾಣದಲ್ಲಿ ಅಣಿನೆರೆಸಬೇಕಾದ ಅಗತ್ಯವನ್ನು ಒತ್ತಿ ಹೇಳಿದರು.

ಪಶ್ಚಿಮ ಬಂಗಾಳದ ಕೈಗಾರಿಕಾ ನೀತಿಯ ಬಗ್ಗೆ ಮಾತನಾಡುತ್ತಾ ಇದು ಆರಂಭದಲ್ಲಿ ಗೊಂದಲ ಹುಟ್ಟಿಸಿತ್ತು. ಆದರೆ ಕೇಂದ್ರ ಸಮಿತಿ ಈ ನೀತಿಯ ಸಂದರ್ಭ ಮತ್ತು ಲಕ್ಷಣಗಳ ಬಗ್ಗೆ ಒಂದು ವಿವರವಾದ ಹೇಳಿಕೆ ಅಂಗೀಕರಿಸಿತು.

ಎಡ ಐಕ್ಯತೆ ಹಾಗೂ ಕಾಂಗ್ರೆಸ್(ಐ) ಹಾಗೂ ಬಿಜೆಪಿ ವಿರುದ್ಧ ಹೋರಾಡಲು ಬಂಡವಾಳಶಾಹಿ ಪ್ರತಿಪಕ್ಷಗಳೊಡನೆ ಸಹಕರಿಸುವ ಅಗತ್ಯದ ಬಗ್ಗೆ ಒತ್ತಿ ಹೇಳಿದರು. “ಸುಲಭೋಪಾಯಗಳೇನೂ ಇಲ್ಲ” ಎಂದು ಸುರ್ಜಿತ್ ಮತ್ತೆ ಮತ್ತೆ ಒತ್ತಿ ಹೇಳುತ್ತಾ ಸತತ ಸಾಮೂಹಿಕ ಆಂದೋಲನಗಳು ಮತ್ತು ಹೋರಾಟಗಳ ಮೂಲಕ ಮಾತ್ರವೇ ವರ್ಗಶಕ್ತಿಗಳ ಬಲಾಬಲವನ್ನು ಬದಲಿಸಲು ಸಾಧ್ಯ, ಇದರಿಂದ ಮಾತ್ರವೇ ಒಂದು ಎಡ ಮತ್ತು ಪ್ರಜಾಪ್ರಭುತ್ವವಾದಿ ಪರ್ಯಾಯದತ್ತ ಮುನ್ನಡೆಯಲು ಸಾಧ್ಯ ಎಂದರು. ಈ ಸಂದರ್ಭದಲ್ಲಿ ಸಂಸದೀಯ ಭ್ರಮೆಯ ಅಪಾಯದ ಬಗ್ಗೆ ಎಚ್ಚರಿಸುತ್ತಾ ವಿಶೇಷವಾಗಿ ಸಂಸತ್ತು ಮತ್ತು ವಿಧಾನಸಭೆಗಳಲ್ಲಿ ಮಾತ್ರವೇ ಅಲ್ಲ, ಜಿಲ್ಲಾ ಪರಿಷತ್ತು, ಬ್ಲಾಕ್ ಮತ್ತು ಪಂಚಾಯತು ಸಮಿತಿಗಳಲ್ಲಿ ಚುನಾಯಿತ ಸ್ಥಾನಗಳತ್ತ ಗಮನ ತಿರುಗಿರುವಾಗ ಇದು ಇನ್ನೂ ಮುಖ್ಯ ಎಂದರು. ಸಿಪಿಐ(ಎಂ) ಸದಸ್ಯರು ಅಧಿಕಾರದ ಮೋಹದಿಂದ ತಮ್ಮನ್ನು ತಪ್ಪಿಸಿಕೊಳ್ಳಬೇಕು. ನಿಜವಾದ ಏಕೈಕ ಮಾರ್ಗವೆಂದರೆ ಸಾಮೂಹಿಕ ಹೋರಾಟಗಳಿಗೆ ನೇತೃತ್ವ ನೀಡುವುದು ಹಾಗೂ ವರ್ಗ ಸಮರಗಳನ್ನು ಬಲಪಡಿಸುವುದು ಎಂದರು ಸುರ್ಜಿತ್.

ತಿದ್ದುಪಡಿಗಳು

ನಂತರ ಸುರ್ಜಿತ್ ಕೇಂದ್ರ ಸಮಿತಿ ಮಹಾಧಿವೇಶನಕ್ಕೆ ಮೊದಲು ಕರಡು ರಾಜಕೀಯ ನಿರ್ಣಯಕ್ಕೆ ಬಂದ ತಿದ್ದುಪಡಿಗಳ ಬಗ್ಗೆ ವರದಿ ನೀಡಿದರು. 2772 ತಿದ್ದುಪಡಿಗಳು 279 ಸೂಚನೆಗಳು, ಟಿಪ್ಪಣಿಗಳು ಬಂದಿದ್ದು 81ನ್ನು ಸ್ವೀಕರಿಸಲಾಗಿದೆ. ಪಕ್ಷದ ಮಾರ್ಗದ ಬಗ್ಗೆ ಒಂದು ವಿಶಾಲ ಐಕ್ಯತೆ ಮತ್ತು ತಿಳುವಳಿಕೆಯಿದೆ, ಪಕ್ಷದ ನೀತಿಗಳನ್ನು ರೂಪಿಸುವಲ್ಲಿ ಸದಸ್ಯರ ತಂತ್ರದ ಬಗ್ಗೆ ಅರಿವು ಹೆಚ್ಚುತ್ತಿದೆ ಎಂಬುದನ್ನು ಇವು ತೋರಿಸಿವೆ, ಇದೊಂದು ಬಹಳ ಆರೋಗ್ಯಕರ ಲಕ್ಷಣ ಎಂದರು. ಕೆಲವು ತಿದ್ದುಪಡಿಗಳು ಮೂರನೇ ಜಗತ್ತಿಗೆ ನಷ್ಟವುಂಟುಮಾಡಿ ಹಣಕಾಸು ಬಂಡವಾಳವನ್ನು ಅಂತರ‍್ರಾಷ್ಟ್ರೀಯ ಗೊತ್ತುವಳಿ ಬಹುರಾಷ್ಟ್ರೀಯ ಕಂಪೆನಿಗಳು, ಬಹುರಾಷ್ಟ್ರೀಯ ಬ್ಯಾಂಕುಗಳ ಪಾತ್ರದ ಕುರಿತಾದವುಗಳು ಹಾಗೂ ಗ್ಯಾಟ್ ಷರತ್ತುಗಳ ಪ್ರಕಾರ ತಿದ್ದುಪಡಿಯಿಂದ ಹೊಸ ಪೇಟೆಂಟ್ ಶಾಸನದ ದುಷ್ಪರಿಣಾಮಗಳನ್ನು ಕುರಿತಾದವುಗಳು. ಮಹಾರಾಷ್ಟ್ರ, ಗುಜರಾತ್, ಒರಿಸ್ಸಾ, ಬಿಹಾರಗಳಲ್ಲಿ ಇತ್ತೀಚಿನ ಚುನಾವಣಾ ಫಲಿತಾಂಶಗಳ ಬೆಳಕಲ್ಲಿ ಬಿಜೆಪಿ ಮತ್ತು ಕೋಮುವಾದೀ ಅಪಾಯದ ಕುರಿತಾದ ಪರಿಚ್ಛೇದಗಳನ್ನು ಸಮಯಬದ್ಧಗೊಳಿಸುವ ತಿದ್ದುಪಡಿಗಳನ್ನು ಅಂಗೀಕರಿಸಲಾಯಿತು.

ವರದಿ ಮಂಡನೆಯ ನಂತರ ಕು... ರಾಜಕೀಯ ನಿರ್ಣಯ ಮತ್ತು ರಾಜಕೀ... ಸಮೀಕ್ಷಾ ವರದಿಯ ಮೇಲೆ ಚರ್ಚೆ ಆರಂಭ...ಯಿತು. ಕರ್ನಾಟಕದಿಂದ ಜಿ.ಎನ್. ನಾಗರಾ... ಮಾತನಾಡಿದರು. ಎರಡು ದಿನಗಳ ವಿವರ... ಚರ್ಚೆಯ ನಂತರ ಏಪ್ರಿಲ್ 6 ರಂದು ಕ... ರಾಜಕೀಯ ನಿರ್ಣಯವನ್ನು ಅವಿರೋಧ... ಅಂಗೀಕರಿಸಿ ದೇಶಾದ್ಯಂತ ಸಾಮೂಹಿಕ ಹೋ...ಟಗಳನ್ನು ಹಾಗೂ ಆಂದೋಲನಗಳನ್ನು ...ಸುವ ಮೂಲಕ ಕಾಂಗ್ರೆಸ್(ಐ) ಹಾಗೂ ಬಿ...ಯನ್ನು ಸೋಲಿಸಲು ದುಡಿಯುವ ಪಕ್ಷದ ನಿರ್ಧಾರವನ್ನು ಹದಿನೈದನೇ ಮಹಾಧಿವೇ...ಸಾರಿತು.

ಅವಿರೋಧ ಅಂಗೀಕಾ...

ಮಹಾಧಿವೇಶನದ ಮೊದಲೇ ಬಂದ ...ಪಡಿಗಳಲ್ಲಿ 81ನ್ನು ಹಾಗೂ ಪ್ರತಿನಿಧಿ... ಮಂಡಿಸಿದ 238 ತಿದ್ದುಪಡಿಗಳಲ್ಲಿ ... ಸ್ವೀಕರಿಸಿದ ನಂತರ ರಾಜಕೀಯ ನಿರ್ಣಯ... ಅಂಗೀಕರಿಸಲಾಯಿತು.

ನಿರ್ಣಯದ ಅಂತರ‍್ರಾಷ್ಟ್ರೀಯ ಭಾ... ಸ್ವೀಕರಿಸಿದ ಕೆಲವು ತಿದ್ದುಪಡಿಗಳ... ಐ.ಎಂ.ಎಫ್-ವಿಶ್ವಬ್ಯಾಂಕ್ ನ ಶರತ್ತು... ಸ್ವೀಕರಿಸಿದ ದೇಶಗಳ ಗತಿಯನ್ನು ತೋರಿ... ಮೆಕ್ಸಿಕೋದ ಆರ್ಥಿಕ ಬಿಕ್ಕಟ್ಟಿನ ಬಗ್ಗೆ ಪ್ರ... ಹಲವು ಅಭಿವೃದ್ಧಿಶೀಲ ದೇಶಗಳಲ್ಲಿ ... ಮತ್ತು ಬಂಡವಾಳಶಾಹಿ-ಭೂಮಾಲಕ ...ಗಳ ನಡುವೆ ಹೆಚ್ಚುತ್ತಿರುವ ಸಂಘರ್ಷ... ಹಾಗೂ ಭೂತಾನದಿಂದ ಉಚ್ಚಾಟಿಸಲ್ಪಟ್ಟ... ರಾರು ನೇಪಾಳೀ ಮೂಲದ ಭೂತಾನೀ... ರಿಕರ ಸಮಸ್ಯೆಯನ್ನು ಇತ್ಯರ್ಥಪಡಿಸ... ಕರೆ.

ರಾಷ್ಟ್ರೀಯ ಸನ್ನಿವೇಶ ಕುರಿತಂತೆ ...ವಾದ ತಿದ್ದುಪಡಿಗಳೆಂದರೆ ಬಿಜೆಪಿ-ಶಿ... ಮಹಾರಾಷ್ಟ್ರದಲ್ಲಿ ಅಧಿಕಾರಕ್ಕೆ ಬಂದಿರು... ಅಪಾಯ ಹಾಗೂ ಒರಿಸ್ಸಾದಲ್ಲಿ ಕಾಂಗ್ರೆ... ನೀತಿಗಳನ್ನು ಅನುಕರಿಸಿದ್ದರಿಂದ ಜನ... ಸೋಲಿನ ಬಗ್ಗೆ ವಿವಿಧ ನಿರೂಪಣೆ... ಸಮಯಬದ್ಧ ಗೊಳಿಸುವಂತದ್ದು, ಮ... ದಲ್ಲಿ ವಿದೇಶೀಯರ ಪ್ರಶ್ನೆ ಕುರಿತಂತೆ ... 20, 1950ನ್ನು ಆಧಾರ ವರ್ಷ ... ಪರಿಗಣಿಸಬೇಕೆನ್ನುವ ಅಲ್ಲಿಯ ಸರಕಾರ ... ವಿದ್ಯಾರ್ಥಿಗಳ ನಡುವಿನ ಒಪ್ಪಂದದ ... ಆತಂಕ ವ್ಯಕ್ತಪಡಿಸುವಂತದ್ದು. ಎಡ... ಭುತ್ವ ರಂಗದ ಕನಿಷ್ಠ ಕಾರ್ಯಕ್ರಮದಲ್ಲಿ ...ಳೆಯರಿಗೆ ಜಂಟಿ ಪಟ್ಟಾದೊಂದಿಗೆ ಭೂ... ಹಾಗೂ ಮಹಿಳೆಯರು ಮುಖ್ಯಸ್ಥರಾ... ಕುಟುಂಬಗಳಲ್ಲಿ ಮಹಿಳೆಯ ಹೆಸರಲ್ಲಿ ಭೂ... ಪಟ್ಟಾ ನೀಡಲು ವಿಶೇಷ ಕ್ರಮಗಳು ಎಂಬ... ಸೇರಿಸಲಾಯಿತು.

ಮಹಾಧಿವೇಶನದಲ್ಲಿ ಕರ್ನಾಟಕದಿಂದ ಭಾಗವಹಿಸಿದವರು -ಎಡಗಿಂದ ಬಲಕ್ಕೆ: ಕಾಂ. ಡೇವಿಡ್ ಕರ್ಕ... ಜಿ.ಎನ್. ನಾಗರಾಜ್, ಕಾಂ. ಮಾರುತಿ ಮಾನ್ಪಡೆ, ಕಾಂ. ಜಿ.ಸಿ. ಬಯ್ಯಾರೆಡ್ಡಿ, ಕಾಂ. ಎನ್.ಕೆ. ಉಪಾಧ್ಯಾ... ಕೆ.ಆರ್. ಶ್ರೀಯಾನ್, ಕಾಂ. ಎಸ್. ಸೂರ್ಯನಾರಾಯಣರಾವ್, ಕಾಂ. ಪಿ. ರಾಮಚಂದ್ರರಾವ್. ಮುಂದಿನ... ಕಾಂ. ಕೆ. ನೀಲಾ, ಹಾಗೂ ಲೀಲಾ ರಾಮಚಂದ್ರರಾವ್ (ಕಾಂ. ರಾಮಚಂದ್ರರಾವ್‌ರವರ ಪತ್ನಿ)



ಹೊಸ ಕೇಂದ್ರ ಸಮಿತಿ

ಸಿಪಿಐ(ಎಂ)ನ 15ನೇ ಮಹಾಧಿವೇಶನ 71 ಸದಸ್ಯರುಳ್ಳ ಹೊಸ ಕೇಂದ್ರ ಸಮಿತಿಯನ್ನು ಆರಿಸಿತು. ಹೊಸ ಕೇಂದ್ರ ಸಮಿತಿ ಹರ್ಕಿಶನ್ ಸಿಂಗ್ ಸುರ್ಜಿತ್‌ರವನ್ನು ಪ್ರಧಾನ ಕಾರ್ಯದರ್ಶಿಯಾಗಿ ಪುನರಾಯ್ಕೆ ಮಾಡಿತು. ಅಲ್ಲದೆ 15 ಸದಸ್ಯರುಳ್ಳ ಪೊಲಿಟ್ ಬ್ಯೂರೋವನ್ನು ಆರಿಸಿತು. ಹೊಸ ಕೇಂದ್ರ ಸಮಿತಿಯ ಸದಸ್ಯರ ಹೆಸರುಗಳು ಹೀಗಿವೆ.

ಪೊಲಿಟ್‌ಬ್ಯೂರೋ ಸದಸ್ಯರು

1. ಹರ್ಕಿಶನ್ ಸಿಂಗ್ ಸುರ್ಜಿತ್
2. ಇ.ಎಂ.ಎಸ್. ನಂಬೂದರಿಪ್ಪಾಡ್
3. ಜ್ಯೋತಿ ಬಸು
4. ಇ. ಬಾಲಾನಂದನ್
5. ಬಿನೋಯ್ ಚೌಧುರಿ
6. ವಿ.ಎಸ್. ಅಚ್ಯುತಾನಂದನ್
7. ಎಲ್. ಬಿ. ಗಂಗಾಧರರಾವ್
8. ಪ್ರಕಾಶ್ ಕಾರಟ್
9. ಸೀತಾರಾಂ ಯೆಚೂರಿ
10. ಎಸ್. ರಾಮಚಂದ್ರಪಿಳ್ಳೆ
11. ಸುನಿಲ್ ಮೈತ್ರ
12. ಪಿ. ರಾಮಚಂದ್ರನ್
13. ಶೈಲೇನ್ ದಾಸ್ ಗುಪ್ತಾ
14. ಇ.ಕೆ. ನಾಯನಾರ್
15. ಆರ್. ಉಮಾನಾಥ್

ಇತರ ಸದಸ್ಯರು

16. ಎಂ. ಹನುಮಂತರಾವ್
17. ಕೋಟಾಲಾ ಸತ್ಯಾನಾರಾಯಣರಾವ್
18. ಎಸ್. ಪ್ರಸಾದ್ ರಾವ್
19. ಎಂ.ವಿ. ನರಸಿಂಹರೆಡ್ಡಿ
20. ನಂದೇಶ್ವರ್ ತಾಲೂಕ್ ದಾರ್
21. ಹೆಮೆನ್ ದಾಸ್
22. ನೂರಲ್ ಹುದಾ
23. ಗಣೇಶ್ ಶಂಕರ್ ವಿದ್ಯಾರ್ಥಿ
24. ಸುಭೋದ್ ರಾಯ್
25. ಜೋಗಿಂದರ್ ಶರ್ಮಾ
26. ಮಹಮ್ಮದ್ ಯೂಸುಫ್
27. ಪಿ. ರಾಮಚಂದ್ರರಾವ್
28. ಟಿ.ಕೆ. ರಾಮಕೃಷ್ಣನ್
29. ಸುಶೀಲಾ ಗೋಪಾಲನ್
30. ಎಂ.ಎಂ. ಲಾರೆನ್ಸ್
31. ಕೆ.ಎನ್. ರವೀಂದ್ರನಾಥ್
32. ಪ್ರಭಾಕರ್ ಸಾಂಝಗಿರಿ
33. ಅಹಲ್ಯಾ ರಂಗ್ನೇಕರ್
34. ಮಂಗತ್ ರಾಂ ಪಾಸ್ಲಾ
35. ಬಲವಂತ್ ಸಿಂಗ್
36. ಹರ್ಕನ್ ವಾಲಾ ಸಿಂಗ್
37. ಹರಿರಾಮ್ ಚೌಹಾಣ್
38. ಎ. ನಲ್ಲಶಿವನ್
39. ಎನ್. ಶಂಕರಯ್ಯ
40. ಪಿ.ಆರ್. ಪರಮೇಶ್ವರನ್
41. ದಶರಥ್ ದೇಬ್
42. ಮಾಣಿಕ್ ಸರ್ಕಾರ್
43. ರಾಮ್ ಸುಮೇರ್ ಯಾದವ್
44. ಬುದ್ಧದೇಬ್ ಭಟ್ಟಾಚಾರ್ಯ
45. ಬಿಮಾನ್ ಬಸು
46. ಮಹಮ್ಮದ್ ಅಮೀನ್
47. ಅನಿಲ್ ಬಿಸ್ವಾಸ್
48. ಕನಕ್ ಮುಖರ್ಜಿ
49. ಬಿಪ್ಲಬ್ ದಾಸ್ ಗುಪ್ತಾ
50. ಆನಂದ್ ಪಾಠಕ್
51. ಎಂ.ಕೆ. ಫಂದೆ
52. ವಿಮಲ ರಣದಿವೆ
53. ಸುಕೋಮಲ್ ಸೆನ್
54. ಹನ್ನನ್ ಮೊಲ್ಲಾ
55. ಎಂ.ಎ. ಬೇಬಿ
56. ಹರಿಸಿಂಗ್ ಕಂಗ್
57. ಬಿನೋಯ್ ಕೋನಾರ್
58. ನಿರೇನ್ ಘೋಷ್
59. ಚಿತ್ತಬ್ರತ ಮಜುಂದಾರ್
60. ಚಡಾಯನ್ ಗೋವಿಂದನ್
61. ಪಲೋಳಿ ಮಹಮ್ಮದ್ ಕುಟ್ಟಿ
62. ಬೈದ್ಯನಾಥ್ ಮಜುಂದಾರ್
63. ಎನ್. ವರದರಾಜನ್
64. ಬಿ.ವಿ. ರಾಘವಲು
65. ಉದ್ದಬ್ ಬರ್ಮನ್
66. ಜನಾರ್ದನ್ ಪತಿ
67. ಮಹಮ್ಮದ್ ಸಲೀಂ
68. ಬೃಂದಾ ಕಾರಟ್
69. ಸುನಿಲ್ ಚೋಪ್ರಾ
70. ಶೈಲೇಂದ್ರ ಶೈಲಿ
71. ಇಂದ್ರಜಿತ್ ಸಿಂಗ್

ಕೊನೆಯ 15 ಮಂದಿ (ಕ್ರಮ ಸಂಖ್ಯೆ 57 ರಿಂದ 71ರವರೆಗೆ) ಕೇಂದ್ರ ಸಮಿತಿಗೆ ಹೊಸದಾಗಿ ಸೇರ್ಪಡೆಯಾದವರು.

ಮಹಾಧಿವೇಶನ ಮೂವರು ಸದಸ್ಯರುಳ್ಳ ಕೇಂದ್ರೀಯ ಹತೋಟಿ ಆಯೋಗವನ್ನು ಆರಿಸಿತು. -ಸಮರ್ ಮುಖರ್ಜಿ (ಅಧ್ಯಕ್ಷರು), ಡಿ. ಜಾನಕಿರಾಂ ಮತ್ತು ಸುನಿಲ್ ಬಸು ರಾಯ್.

ಸಂಘಟನಾ ವರದಿಯ ಮೇಲೆ ಚರ್ಚೆ

ನೈಜ ಪರ್ಯಾಯವನ್ನು ಮುಂದಿಡಲು ...ಾಮೂಹಿಕ ಸಂಘಟನೆಗಳನ್ನು ಚುರುಕುಗೊಳಿಸಬೇಕು ಪಕ್ಷವನ್ನು ಕ್ರೋಢೀಕರಿಸಬೇಕು"

...ಪ್ರಿಲ್ 6 ರಂದು ಪೊಲಿಟ್ ಬ್ಯೂರೋ ... ಪ್ರಕಾಶ್ ಕಾರಟ್ ರವರು ಮಹಾಧಿವೇ... ಮುಂದೆ ಸಂಘಟನಾ ವರದಿಯನ್ನು ...ತಿಸಿದರು. ಇದು ವಿವಿಧ ಸಾಮೂಹಿಕ ...ಗಳಲ್ಲಿ ಪಕ್ಷ ಮಾಡಿರುವ ಕೆಲಸದ ಸಮೀಕ್ಷೆ. ... ಸಂಘಟನೆಯ ವಲಯದಲ್ಲಿನ ಪ್ರಗತಿ ...ತೆಗಳು ಹಾಗೂ 14ನೇ ಮಹಾಧಿವೇಶ... ಸಂಘಟನಾ ವರದಿ ಹಾಕಿಕೊಟ್ಟ ಕರ್ತವ್ಯ... ನೆರವೇರಿಕೆ ಅಂದರೆ ಸಾಮೂಹಿಕ ...ರಾಟಗಳನ್ನು, ಆಂದೋಲನಗಳನ್ನು ಇನ್ನಷ್ಟು ...ಗೊಳಿಸುವುದು, ಪಕ್ಷ ಕಟ್ಟಲು, ಸಂಘಟನೆ... ಸಾಮರ್ಥ್ಯಗೊಳಿಸಲು ಆದ್ಯತೆ, ಸೈದ್ಧಾಂತಿಕ ...ರಾಟವನ್ನು ಹೆಚ್ಚಿಸುವುದು ಇವುಗಳ ಅನು... ಸಮೀಕ್ಷೆಯಲ್ಲಿ ವರದಿ ಮಂಡಿಸಿತು.

... ರಾಜ್ಯಗಳಲ್ಲಿ ಪಕ್ಷದ, ಸಾಮೂಹಿಕ ...ಳ ಕೆಲಸ ಕಾರ್ಯಗಳಲ್ಲಿ ವೃದ್ಧಿಯ ...ವನ್ನು ಇದರಲ್ಲಿ ನೀಡಲಾಗಿತ್ತು. ಕಳೆದ ...ು ವರ್ಷಗಳಲ್ಲಿ ಪಕ್ಷದ ಸದಸ್ಯತ್ವ 50 ...ದಷ್ಟು ಹೆಚ್ಚಿತು. ಕಾರ್ಮಿಕ ವರ್ಗ, ರೈತಾಪಿ ... ಕೃಷಿ ಕೂಲಿಕಾರರು, ಮಹಿಳೆಯರು ...ರ್ಗಗಳು ಹಾಗೂ ಯುವಜನರ ನಡುವೆ ...ಮಾಡುತ್ತಿರುವ ಸಾಮೂಹಿಕ ಸಂಘಟನೆ... ...ದಸ್ಯತ್ವ 3.5 ಕೋಟಿಗಿಂತಲೂ ಹೆಚ್ಚಿದೆ.

...ರಡು ದಿನಗಳ ಕಾಲ ವಿವಿಧ ರಾಜ್ಯಗಳ ... ಸಾಮೂಹಿಕ ಸಂಘಟನೆಗಳ 37 ...ಧಿಗಳು ಈ ವರದಿಯ ಮೇಲಿನ ಚರ್ಚೆ... ...ಾಗವಹಿಸಿದರು. ಕರ್ನಾಟಕದಿಂದ ವಿ.ಜೆ.ಕೆ. ...ರ್ ಮಾತನಾಡಿದರು. ಚರ್ಚೆಯಲ್ಲಿ ಪ್ರತಿ... ...ು ತಂತಮ್ಮ ರಾಜ್ಯಗಳಲ್ಲಿ ಪಕ್ಷದ ಸಂಘ... ...ನ್ನು ಕಟ್ಟುವಲ್ಲಿ ಹಾಗೂ ಸಾಮೂಹಿಕ ...ಗಳನ್ನು ಬೆಳೆಸುವಲ್ಲಿನ ತಮ್ಮ ಅನುಭವ... ನಿವೇದಿಸಿದರು. ಹಲವು ಪ್ರತಿನಿಧಿಗಳು ... ಮಾಡಿದ ಒಂದು ಪ್ರಮುಖ ದೌರ್ಬ... ...ರೆ ಈ ಅವಧಿಯಲ್ಲಿ ಸಾಮೂಹಿಕ ...ಟಿಕೆಗಳು ಹೆಚ್ಚಿದ್ದರೂ ಸಾಮೂಹಿಕ ಸಂಘ... ...ಳ ಕ್ರೋಢೀಕರಣ ಹಾಗೂ ಬೆಳ... ...ಗೆಯ ಅಭಾವ ಕಂಡು ಬಂದದ್ದು.

...ದೇಶದಲ್ಲಿ ಸಿಪಿಐ(ಎಂ)ನ ಅಸಮಾನ ...ಣಿಗೆಯ ಬಗ್ಗೆ ದುರ್ಬಲ ರಾಜ್ಯಗಳು ...ೂ ಬಲಿಷ್ಠ ರಾಜ್ಯಗಳು ಇವೆರಡೂ ...ಳ ಪ್ರತಿನಿಧಿಗಳು ಆತಂಕ ವ್ಯಕ್ತಪಡಿಸಿ... ಹೆಚ್ಚಿರುವ ಪಕ್ಷದ ಪ್ರತಿಷ್ಠೆಯನ್ನು ...ಟನಾ ಶಕ್ತಿಯಾಗಿ ಕ್ರೋಢೀಕರಿಸುವ ...ವನ್ನು ಒತ್ತಿ ಹೇಳಿದರು. ಪಕ್ಷದ ಕೇಂದ್ರ ...ೂ ಕೇಂದ್ರ ಸಮಿತಿ ಪಕ್ಷ ದುರ್ಬಲವಾ... ...ರ ರಾಜ್ಯಗಳಿಗೆ ಹೆಚ್ಚು ಗಮನ ನೀಡಬೇ... ಪ್ರತಿನಿಧಿಗಳು ಸಲಹೆ ಮಾಡಿದರು.

ಸೈದ್ಧಾಂತಿಕ ಶಿಕ್ಷಣದ ಮಹತ್ವವನ್ನು ಪ್ರತಿನಿಧಿಗಳು ಎತ್ತಿತೋರಿದರು. ಸದ್ಯ ಪಕ್ಷದ ಶಾಲೆಯ ವ್ಯವಸ್ಥೆ ಬಹಳ ಅಸಮರ್ಪಕ, ಕಳೆದ ದಶಕದಲ್ಲಿ ಬಹಳಷ್ಟು ಹೊಸ ಸದಸ್ಯರು ಬಂದಿರುವ ಹಿನ್ನೆಲೆಯಲ್ಲಿ ಇದು ಇನ್ನಷ್ಟು ಅಗತ್ಯ ಎಂದರು. ಪಕ್ಷದ ಸದಸ್ಯರಲ್ಲಿ ಶೇ. 70ಕ್ಕೂ ಹೆಚ್ಚು 40 ವರ್ಷಕ್ಕಿಂತ ಕಮ್ಮಿ ವಯಸ್ಸಿನವರು ಮತ್ತು 1980ರ ನಂತರ ಪಕ್ಷಕ್ಕೆ ಬಂದವರು ಎಂದು ಸಂಘಟನಾ ವರದಿ ಹೇಳಿದೆ.

ಬಹಳಷ್ಟು ಬುಡಕಟ್ಟು ಜನಾಂಗಗಳಿರುವ ಈಶಾನ್ಯ ಭಾಗದಲ್ಲಿನ ಕ್ಲಿಷ್ಟ ಪರಿಸ್ಥಿತಿಯ ಬಗ್ಗೆಯೂ ಚರ್ಚೆ ನಡೆಯಿತು. ಈ ಪ್ರದೇಶಕ್ಕೆ ಪಕ್ಷ ಹೆಚ್ಚು ಗಮನ ನೀಡಬೇಕು ಎಂಬ ವಿಚಾರ ವ್ಯಕ್ತಪಡಿಸಲಾಯಿತು. ಪಕ್ಷ ಬುಡಕಟ್ಟು ನೀತಿಯ ಬಗ್ಗೆ ಒಂದು ದಸ್ತಾವೇಜು ತಯಾರಿಸಬೇಕು ಎಂಬ ಒತ್ತಾಯ ಬಂತು. ಅದೇ ರೀತಿ ಪರಿಸರ ಪ್ರಶ್ನೆಗಳು, ಮಹಿಳಾ ಆಂದೋಲನ, ಸಾಂಸ್ಕೃತಿಕ ರಂಗ ಮತ್ತು ವಿವಿಧ ಇತರ ಸಾಮಾಜಿಕ ಆಂದೋಲನಗಳನ್ನು ಕುರಿತ ಪ್ರಶ್ನೆಗಳೂ ಚರ್ಚೆಗೆ ಬಂದವು. ಸ್ಥಳೀಯ ಮಟ್ಟದಿಂದ ಮೇಲಿನವರೆಗೂ ಪಕ್ಷದ ಕಾರ್ಯ ನಿರ್ವಹಣೆಗಳನ್ನು ಸುಧಾರಿಸುವ ಅಗತ್ಯವನ್ನು ಪ್ರತಿನಿಧಿಗಳು ಒತ್ತಿ ಹೇಳುತ್ತಾ ದೇಶ ಎದುರಿಸುತ್ತಿರುವ ಸವಾಲುಗಳನ್ನು ಎದುರಿಸಲು ಸಾಮೂಹಿಕ ಹೋರಾಟಗಳನ್ನು ತೀವ್ರಗೊಳಿಸುವುದು, ಪಕ್ಷದ ಸಂಘಟನೆಯನ್ನು ಚುರುಕುಗೊಳಿಸುವುದು ಅನಿವಾರ್ಯ ಎಂದರು.

ಒಟ್ಟು 38 ತಿದ್ದುಪಡಿಗಳನ್ನು, 10 ಸೂಚನೆಗಳನ್ನು ಪ್ರತಿನಿಧಿಗಳು ಈ ಚರ್ಚೆಯಲ್ಲಿ ಮುಂದಿಟ್ಟರು. ಅವುಗಳಲ್ಲಿ 5ನ್ನು ಸ್ವೀಕರಿಸಲಾಯಿತು. ಉಳಿದ ಕೆಲವನ್ನು ಪರಿಶೀಲಿಸಲಾಗುವುದು ಎಂದು ಪ್ರಕಾಶ್ ಕಾರಟ್ ತಿಳಿಸಿದರು.

ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಚರ್ಚೆಗೆ ಉತ್ತರ ನೀಡುತ್ತಾ ಪ್ರತಿನಿಧಿಗಳು ಪಕ್ಷ ಕಟ್ಟುವ ಬಗ್ಗೆ, ಸಾಮೂಹಿಕ ರಂಗಗಳ ಚಟುವಟಿಕೆಗಳ ಬಗ್ಗೆ, ಸಂಘಟನಾ ಕಾರ್ಯನಿರ್ವಹಣೆಯ ಬಗ್ಗೆ ಎತ್ತಿದ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸುತ್ತಾ ಜನಗಳೆದುರು ಒಂದು ನೈಜ ಪರ್ಯಾಯವನ್ನು ಮುಂದಿಡಬಲ್ಲವರೆಂದರೆ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಮಾತ್ರ, ಈ ಶಕ್ತಿಗಳ ಮುನ್ನಡೆಗೆ ಸಾಮೂಹಿಕ ಹೋರಾಟಗಳನ್ನು ಹರಿಯಬಿಡುವುದು, ಸಾಮೂಹಿಕ ಸಂಘಟನೆಗಳನ್ನು ಚುರುಕುಗೊಳಿಸುವುದು ಹಾಗೂ ಪಕ್ಷವನ್ನು ಕ್ರೋಢೀಕರಿಸುವುದು ಅತ್ಯಗತ್ಯ ಎಂದು ಮತ್ತೊಮ್ಮೆ ಒತ್ತಿ ಹೇಳಿದರು.

ನಿರ್ಣಯಗಳು

...ಪಿಐ(ಎಂ)ನ 15ನೇ ಮಹಾಧಿವೇಶನ ಎಪ್ರಿಲ್ 6 ರಂದು ತ್ರಿಪುರಾದೊಂದಿಗೆ ...ರ್ದ ವ್ಯಕ್ತಪಡಿಸಿ ಒಂದು ನಿರ್ಣಯವನ್ನು ಅಂಗೀಕರಿಸಿತು. ಕೇಂದ್ರ ಸಮಿತಿ ಸದಸ್ಯ ...ಸೇನ್ ಇದನ್ನು ಮಂಡಿಸಿದರು. ಕೇಂದ್ರ ಸಮಿತಿ ಸದಸ್ಯ ಪಿ.ಆರ್. ...ೇಶ್ವರನ್ ಅದನ್ನು ಅನುಮೋದಿಸಿದರು.

...ದೇ ದಿನ ಐ.ಎಂ.ಎಫ್.-ವಿಶ್ವಬ್ಯಾಂಕ್ ಹೇರಿರುವ ಆರ್ಥಿಕ ನೀತಿಗಳ ಹಿಮ್ಮೆಟ್ಟಿಸುವ ...ರಾಟದಲ್ಲಿ ಪಕ್ಷ ನೇತೃತ್ವ ನೀಡಬೇಕೆಂದು ಕರೆ ಕೊಡುವ ನಿರ್ಣಯವನ್ನು ಕೇಂದ್ರ ... ಸದಸ್ಯ ಎಂ.ಕೆ. ಫಂದೆ ಮಂಡಿಸಿದರು. ಕೇಂದ್ರ ಸಮಿತಿ ಸದಸ್ಯ ರಾಮ್ ...ುಣ್ ಗೋಸ್ವಾಮಿ ಅದನ್ನು ಅನುಮೋದಿಸಿದರು.

...ನೆಯ ದಿನದಂದು ಹಲವು ನಿರ್ಣಯಗಳನ್ನು ಅಂಗೀಕರಿಸಲಾಯಿತು. ಅವೆಂದರೆ ...ುವಾದದ ವಿರುದ್ಧ ಸರ್ವತೋಮುಖಿ ಹೋರಾಟ ನಡೆಸಬೇಕೆಂದು ಕರೆ ...ವ ನಿರ್ಣಯ; ಲೆನಿನ್‌ರ 125ನೇ ಜನ್ಮ ವಾರ್ಷಿಕಾಚರಣೆಯ ಕುರಿತು; ...ಿನ ವಿಜಯದ 50ನೇ ವಾರ್ಷಿಕೋತ್ಸವದ ಕುರಿತು; ಕ್ಯೂಬಾದೊಂದಿಗೆ ...ರ್ದ ಕುರಿತು ಹಾಗೂ ಕೊರಿಯಾ ಜನತೆಯ ಹೋರಾಟದೊಂದಿಗೆ ಸೌಹಾರ್ದ ...ಕುರಿತು.

...ದ ಸಂವಿಧಾನಕ್ಕೆ ತಿದ್ದುಪಡಿಗಳು

...ಧಿವೇಶನದ ಎರಡು ತಿಂಗಳ ... ಪಕ್ಷದ ಸಂವಿಧಾನಕ್ಕೆ ತರಬೇಕೆಂ... ...ದ್ದುಪಡಿಗಳ ಬಗ್ಗೆ ತಿಳಿಸಲಾಗಿತ್ತು. ...ದಲ್ಲಿ ಪೊಲಿಟ್ ಬ್ಯೂರೋ ...ಸ್. ರಾಮಚಂದ್ರನ್ ಪಿಳ್ಳೆ ಮಂಡಿ... ...ಸಂವಿಧಾನ ಕುರಿತಂತೆ ಬಂದ ...ು, ತಿದ್ದುಪಡಿಗಳ ವರದಿಯನ್ನೂ ...ೇಶನದ ಮುಂದೆ ಇಡಲಾಯಿತು. ...ಧಿವೇಶನ ಆರು ತಿದ್ದುಪಡಿಗಳನ್ನು ಅಂಗೀಕರಿಸಿತು. ಅಂಗೀಕರಿಸಲ್ಪಟ್ಟ ತಿದ್ದುಪಡಿಗಳಲ್ಲಿ ಮುಖ್ಯವಾದುದು ವಿಶಿಷ್ಟ ಸಂದರ್ಭಗಳಲ್ಲಿ ವ್ಯಕ್ತಿಗಳನ್ನು ಪಕ್ಷದ ಪೂರ್ಣ ಸದಸ್ಯನಾಗಿ ಪ್ರವೇಶ ನೀಡಲು ಕೇಂದ್ರ ಸಮಿತಿಗೆ ಅಧಿಕಾರ ನೀಡುವುದು ಹಾಗೂ ಕೇಂದ್ರೀಯ ಹತೋಟಿ ಆಯೋಗ ಅಧಿಕಾರ ವ್ಯಾಪ್ತಿಯನ್ನು ವಿಸ್ತರಿಸಿ ಶಿಸ್ತು ಕ್ರಮಗಳ ವಿರುದ್ಧ ಮನವಿಗಳನ್ನು ಸ್ವೀಕರಿಸಲು ಅವಕಾಶ ನೀಡುವುದು.

ಮಗು ಹುಟ್ಟಿದರೆ ದುಡಿತಕ್ಕೊಂದಾಳು

ಈ ಉದಾರೀಕರಣದ ಅಬ್ಬರದ ನಡುವೆಯೂ ಭಾರತದ ವಾಸ್ತವ ಪರಿಸ್ಥಿತಿಯ ಬಗ್ಗೆ ಅಲ್ಲಲ್ಲಿ ತುಣುಕು ಸುದ್ದಿಗಳು ಬರುತ್ತಿವೆ. ಉದಾರೀಕರಣ ಖಾಸಗೀಕರಣಗಳ ವೈಭವೀಕರಣದಲ್ಲಿ ತೊಡಗಿರುವ ಸರ್ಕಾರ ವಾಸ್ತವದ ಚಿತ್ರಣ ಕೊಡುವುದಿರಲಿ ಇರುವುದನ್ನೇ ಮುಚ್ಚಿ ಹಾಕಲು ಅದು ಶತಾಯಗತಾಯ ಪ್ರಯತ್ನಿಸುತ್ತಿದೆ. ಇಂತಹ ಸಂದರ್ಭದಲ್ಲೂ ಸತ್ಯ ಮೇಲೆದ್ದು ಬರಲು ಪ್ರಯತ್ನಿಸುತ್ತದೆ.

ಭಾರತದಲ್ಲಿ 44 ದಶಲಕ್ಷ ಅಂದರೆ ಸುಮಾರು ನಾಲ್ಕೂವರೆ ಕೋಟಿ ಬಾಲಕಾರ್ಮಿಕರಿದ್ದಾರಂತೆ. ಇವರಲ್ಲಿ 75000 ಬಾಲಾಕಾರ್ಮಿಕರು ಮುಂಬಯಿಯಲ್ಲೇ ಇದ್ದಾರಂತೆ. ಇವರ ಪರಿಸ್ಥಿತಿ ಹೀನಾಯವಾಗಿದೆ. ಆಶ್ರಯವಿಲ್ಲ, ವಿದ್ಯೆಯಿಲ್ಲ ಆಹಾರವಿಲ್ಲ, ಏನೇನೂ ಇಲ್ಲ. ಏನು ಬೇಕಾದರೂ ಮೈಮುರಿದು ದುಡಿಯಬೇಕು ಇಂತಹ ಪರಿಸ್ಥಿತಿಗೆ ಸಿಕ್ಕ ಎಳೆಕಂದ ಏನು ತಾನೇ ಮಾಡಲು ಸಾಧ್ಯ. ಕಂಡ ಕಂಡವರಿಗೆಲ್ಲ ಈತ ತೊತ್ತು, ಹೇಳಿದ್ದೆಲ್ಲ ಮಾಡಬೇಕು. ಬೇರೆ ದಾರಿಯೇ ಇಲ್ಲ, ಇದು ಅವರ ಕನಿಕರಮಯ ಪರಿಸ್ಥಿತಿ.

ಉದ್ಯೋಗಗಳನ್ನು ಸೃಷ್ಟಿಸುವ ಉದಾರೀಕರಣ ಮತ್ತು ಖಾಸಗೀಕರಣ ಈ ಎಳೆಕಂದಮ್ಮಗಳಿಗೆ ಏನು ಮಾಡಿದೆ?

ಸಮೀಕ್ಷೆಯ ವರದಿಗಳ ಪ್ರಕಾರ ಬಡತನ ಹೆಚ್ಚಿದೆ. ಅಂದರೆ ಇಂತಹವರ ಸಂಖ್ಯೆ ಹೆಚ್ಚುತ್ತಿದೆ. ಇವರನ್ನೂ ಹೇಗೆ ನೋಡುತ್ತದೆ ಉದಾರೀಕರಣದ ಪೆಡಂಭೂತ?

ಸಾಮ್ರಾಜ್ಯಶಾಹಿಗಳು ಹೇಳುತ್ತಾರೆ -ಭಾರತದಲ್ಲಿ ಕೂಲಿಯ ದರಗಳು ಬಹಳ ಕಡಿಮೆ ಇವೆ. ಆದ್ದರಿಂದ ಉತ್ಪಾದನೆಗೆ ತೊಡಗಿದರೆ ಅತ್ಯಂತ ಕಡಿಮೆ ಕೂಲಿ ದರದಲ್ಲಿ ಉತ್ಪಾದನೆ ಮಾಡಬಹುದು. ಅಪಾರ ಲಾಭ ಬಾಚಿಕೊಳ್ಳಬಹುದು. ನಮ್ಮ ಸರ್ಕಾರವೂ ಹೇಳುತ್ತದೆ 'ನಮ್ಮಲ್ಲಿ ಜನಸಂಪತ್ತು ಅಪಾರವಾಗಿದೆ. ಆದ್ದರಿಂದ ಶ್ರಮ ಸುಲಭವಾಗಿ ದೊರೆಯುತ್ತದೆ. ಆದ್ದರಿಂದ ನೀವು ಹಣ ಹೂಡಿರಿ ನಮಗೆ ಅಭಿವೃದ್ಧಿಯ ಫಲ ದೊರೆಯುತ್ತದೆ.

ಆದರೀಗ ಆಗುತ್ತಿರುವುದು? ಇವರೆಲ್ಲ ಹೇಳುವುದೇ ಜನರ ಶ್ರಮದ ಬೆಲೆ ಕಡಿಮೆ ಆಗುತ್ತಿದೆ. ಆದರೆ ಜನರಿಗೆ ಅವಶ್ಯ ಬೇಕಾಗುವ ವಸ್ತುಗಳೆಲ್ಲ ತುಟ್ಟಿ ಆಗುತ್ತಿವೆ. ಉದಾರೀಕರಣ ತರುವ 'ರಾಮರಾಜ್ಯ' ಇದೇ ಇರಬಹುದಲ್ಲವೆ?

ರಾಜ್ಯಗಳಿಗೇ ವಕ್ಕರಿಸಲಿರುವ ವಿಶ್ವಬ್ಯಾಂಕ್ ಜಾಲ

ವಿಶ್ವಬ್ಯಾಂಕ್ ಮತ್ತು ಅದರ ಸಹೋದರ ಏಶಿಯನ್ ಅಭಿವೃದ್ಧಿ ಬ್ಯಾಂಕುಗಳು ಈಗ ರಾಜ್ಯಗಳಿಗೇ ಗಂಟು ಬೀಳಲಿವೆ. ಪ್ರಾದೇಶಿಕ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವಲ್ಲಿ ರಾಜ್ಯಗಳನ್ನು ಪೂರ್ತಿಯಾಗಿ ತೊಡಗಿಸಿಕೊಳ್ಳಲು ಸಾಧ್ಯವಾಗಬೇಕೆಂದು ಅವು ಕೇಂದ್ರ ಸರ್ಕಾರಕ್ಕೆ ಸೂಚಿಸಿವೆಯಂತೆ. ಕೇಂದ್ರ ಸರ್ಕಾರದ ಹಣಕಾಸು ಮಂತ್ರಾಲಯವೂ ಸಹ ಇದಕ್ಕೆ ಒಪ್ಪಿದೆಯಂತೆ.

ಆದರೆ ರಾಜ್ಯಗಳಿಗೇ ಇದರಿಂದ ಆಶ್ಚರ್ಯವಾಗಿ ಇಂತಹ ನೇರ ಸಂಬಂಧದ ಪರಿಣಾಮಗಳೇನು ಎಂಬುದನ್ನು ಅವು ಪರಿಶೀಲಿಸುತ್ತವೆಯಂತೆ.

ಹಿಂದೆ ಕೇಂದ್ರ ಹಣಕಾಸು ಮಂತ್ರಾಲಯ ರಾಜ್ಯ ಸರ್ಕಾರಗಳು ನೇರವಾಗಿ ಮಾತುಕತೆ ನಡೆಸಿ ಒಪ್ಪಂದಗಳನ್ನು ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಿತು. ಇಂತಹ ಸಾಲಗಳನ್ನು ಪೂರ್ತಿಯಾಗಿ ರಾಜ್ಯಗಳಿಗೇ ನೀಡಲು ಅದು ತೀರ್ಮಾನಿಸಿತ್ತು.

ವಿಶ್ವಬ್ಯಾಂಕ್ ಇಂತಹ ತೀರ್ಮಾನ ಕೈಗೊಳ್ಳಲು ಎರಡು ಕಾರಣಗಳು. ಮೊದಲನೆಯದು ಈ ಸಾಲಗಳ ಬಳಕೆ ಪೂರ್ತಿಯಾಗಿ ಆಗುತ್ತಿಲ್ಲ, ಅದು ಆಗುವಂತೆ ಮಾಡಿಕೊಂಡರೆ ಅದಕ್ಕೆ ಹೆಚ್ಚು ಲಾಭ.

ಎರಡನೇಯದು ಈಗಿರುವ ಪದ್ಧತಿಯಲ್ಲಿ ರಾಜ್ಯ ಸರ್ಕಾರಗಳು ನೇರವಾಗಿ ಮಾತುಕತೆಗಳಲ್ಲಿ ಭಾಗಿಗಳಾಗದೇ ಇರುವುದರಿಂದ ಅವು ತಕರಾರು ತೆಗೆಯಬಹುದು. ಇದಲ್ಲದೆ ಕೆಲವು ರಾಜ್ಯಗಳು ವಿಶ್ವಬ್ಯಾಂಕಿನ ಷರತ್ತುಗಳಿಗೂ ತಕರಾರು ತೆಗೆಯುತ್ತವೆ.

ನೇರವಾಗಿ ರಾಜ್ಯಗಳೊಡನೆ ಮಾತುಕತೆ ನಡೆದು ಒಪ್ಪಂದ ನಡೆದರೆ ರಾಜ್ಯಗಳ ಬಾಯಿಗಳನ್ನೂ ಮುಚ್ಚಬಹುದು. ಆದ್ದರಿಂದ ಅವರೊಡನೆ ನೇರ ಸಂಪರ್ಕವೇ ಸರಿ ಎಂಬ ತೀರ್ಮಾನಕ್ಕೆ ವಿಶ್ವಬ್ಯಾಂಕ್ ಬಂದಿರಬೇಕು. ಆದ್ದರಿಂದ ಈ ನೀತಿ ನಿಲುವು.

ವಿದೇಶೀ ಕಂಪೆನಿಗಳಿಗೆ ಕೊಳ್ಳೆ ಹೊಡೆಯಲು ವಿಶೇಷ ಅನುಮತಿ

ಇನ್ನು ವಿದೇಶೀ ಕಂಪನಿಗಳು ಪೂರ್ಣ ಅಧೀನ ಕಂಪನಿಗಳನ್ನು ಭಾರತದಲ್ಲಿ ಪ್ರಾರಂಭಿಸ ಬಹುದು. ಇದು ಕೇಂದ್ರ ಸರ್ಕಾರ ಅಂದರೆ ಪ್ರಧಾನ ಮಂತ್ರಿಗಳ ಕಾರ್ಯಾಲಯ ವಿದೇಶೀ ಕಂಪನಿಗಳಿಗೆ ಕೂಡಲೇ ಕೊಡಮಾಡಿರುವ ಸವಲತ್ತು.

ಇಲ್ಲಿಯೂ ಅಧಿಕಾರಿಗಳ ಒಂದು ಗುಂಪು ಬಳಕೆ ವಸ್ತುಗಳ ರಂಗದಲ್ಲಿ ಶೇ. 100ರಷ್ಟು ಅಧೀನ ಕಂಪನಿಗಳಿಗೆ ಅವಕಾಶ ನೀಡಬಾರದು ಎಂದು ವಾದಿಸುತ್ತಿದೆಯಂತೆ. ಇದರಿಂದಾಗಿ ಈ ಪ್ರಕ್ರಿಯೆಯಲ್ಲಿ ಸ್ವಲ್ಪ ಹಿಂಜರಿತ ಉಂಟಾಗಿದೆ.

ಈ ತಡೆಯನ್ನು ದಾಟಿದರೆ ಬಹುಶಃ ವಿದೇಶೀ ಕಂಪನಿಗಳು ಯಶಸ್ವಿಯಾದಂತೆ. ದೇಶವನ್ನೇ ಮಾರಹೊರಟಿರುವ ಸರ್ಕಾರಕ್ಕೆ ಇದರಿಂದಾಗುವ ದುಷ್ಪರಿಣಾಮಗಳ ಚಿಂತೆ ಏಕೆ? ಅಲ್ಲವೆ?


ವಿಮೆ ಮತ್ತು ಪೇಟೆಂಟ್ ಈಗ ಅಮೇರಿಕದ ಮಂತ್ರ

ವಿಮೆ ಮತ್ತು ಪೇಟೆಂಟ್ ಈಗ ಅಮೇರಿಕದ ಮಂತ್ರವಾಗಿ ಹೋಗಿದೆ. ಯಾಕೆಂದರೆ ಈ ಎರಡು ಭಾರತದಿಂದ ಅಪಾರ ಸಂಪತ್ತು ದೋಚಲು ಸಾಮ್ರಾಜ್ಯಶಾಹಿಗಳಿಗೆ ನೆರವಾಗುತ್ತದೆ. ಆದರೆ ಈ ಎರಡೂ ರಂಗಗಳಲ್ಲಿ ಭಾರತ ಉದಾರೀಕರಣವನ್ನು ವೇಗವಾಗಿ ತರುವುದು ಸಾಧ್ಯವಾಗುತ್ತಿಲ್ಲ.

ವಿಮೆ ರಂಗದಲ್ಲಿ ನೌಕರರ ಪ್ರತಿಭಟನೆ ಬಹಳ ತೀವ್ರವಾಗಿದೆ. ಆದ್ದರಿಂದ ದೊಡ್ಡ ತೊಡಕು ಉಂಟಾಗಿದೆ. ಪೇಟೆಂಟ್ ಸುಗ್ರೀವಾಜ್ಞೆಯೇನ್ನೇನೋ ಸರ್ಕಾರ ತಂದಿತು. ಆದರೆ ಈಗ ಅವನ್ನು ಕಾನೂನು ಮಾಡುವುದು ಸುಲಭವಲ್ಲ, ಯಾಕೆಂದರೆ ರಾಜ್ಯ ಸಭೆಯಲ್ಲಿ ಕಾಂಗ್ರೆಸ್‌ಗೆ ಅವಶ್ಯ ಪ್ರಮಾಣದ ಸದಸ್ಯತ್ವ ಇಲ್ಲವಾದ್ದರಿಂದ ಅದು ಮಂಡನೆಯಾದಾಗ ಬಿದ್ದು ಹೋಗುವ ಸಂಭವ ಇದೆ.

ಇಂತಹ ಪರಿಸ್ಥಿತಿಗಳನ್ನು ಎದುರಿಸಿ ಇವುಗಳನ್ನು ತಪ್ಪಿಸಿಕೊಂಡು ವಿದೇಶೀಯರ ಅನುಕೂಲಕ್ಕೆ ತಕ್ಕಂತೆ ಈ ಎರಡೂ ರಂಗಗಳನ್ನೂ ಅನುವು ಮಾಡಿಕೊಳ್ಳುವುದೇ ಅವರ ಉದ್ದೇಶ. ಆದ್ದರಿಂದ ಅಮೇರಿಕ-ಭಾರತದ ಮೇಲಧಿಕಾರಿಗಳ ಸಭೆ ನಡೆಯಲಿದ್ದು ಈ ಬಗ್ಗೆ ತೀರ್ಮಾನ ಕೈಗೊಳ್ಳಬೇಕೆಂದು ಒಪ್ಪಲಾಗಿದೆಯಂತೆ.

ನರಸಿಂಹರಾವ್ ಸರಕಾರದ 47ನೇ ತಿಂಗಳಿನಲ್ಲಿ



ಜಿ..ಎಸ್. ಮಣಿ

ಆರ್ಥಿಕ ಸುಧಾರಣೆ: ನಿರೀಕ್ಷಿತ ಫಲ

ಆರ್ಥಿಕ ಸುಧಾರಣಾ ಕ್ರಮಗಳಿಂದ ಭಾರತಕ್ಕೆ ಲಾಭವಾಗಿವೆಯೇ? ಹೌದು ಎನ್ನುತ್ತದೆ ಏಶಿಯಾ ಅಭಿವೃದ್ಧಿ ಬ್ಯಾಂಕ್ ನ ವರದಿ.

ಈ ಕ್ರಮಗಳು ಭಾರತವನ್ನು ಬೆಳವಣಿಗೆಯ ಹೆಬ್ಬಾಗಿಲಿಗೆ ತಂದು ನಿಲ್ಲಿಸಿದೆ ಎಂದು ಆ ವರದಿ ಹೇಳಿದೆ.

1995ರಲ್ಲಿ ಭಾರತದ ಆರ್ಥಿಕ ಬೆಳವಣಿಗೆ ಗತಿಯ 6.1 ಮತ್ತು 1996ರಲ್ಲಿ 6.5 ಇರುವುದು ಎಂದು 1995 ಮತ್ತು 96ರ ಏಶಿಯಾ ಅಭಿವೃದ್ಧಿ ನೋಟ ಎಂಬ ತಲೆಬರಹದ ತನ್ನ ವಾರ್ಷಿಕ ವರದಿಯಲ್ಲಿ ಬ್ಯಾಂಕ್ ತಿಳಿಸಿದೆ. ಬ್ಯಾಂಕಿನ ಪರವಾಗಿ ಮನಿಲಾ ಮೂಲದ ಅಭಿವೃದ್ಧಿ ಸಂಸ್ಥೆಯೊಂದು ಈ ವರದಿಯನ್ನು ಸಿದ್ಧಪಡಿಸಿದೆ.

ಮುಕ್ತ ಮಾರುಕಟ್ಟೆ ನೀತಿ ಆಧಾರಿತ ಅಧಿಕಾರ ಸುಧಾರಣೆ ಕ್ರಮಗಳಿಂದ ಭಾರತದ ಆರ್ಥಿಕ ಸ್ಥಿತಿ ಹಾಗೂ ಮಾರುಕಟ್ಟೆಯ ತ್ವರಿತ ಗತಿಯ ಆರ್ಥಿಕ ಬೆಳವಣಿಗೆ ಬಾಗಿಲಿಗೆ ಬಂದು ಹೋಗಿದೆಯಂತೆ.

ಮುಂದಿನ ಎರಡು ವರ್ಷಗಳಲ್ಲಿ ಕೈಗಾರಿಕೆಯು ಶೇಕಡಾ 85ರಿಂದ 900ರಷ್ಟು ಬೆಳವಣಿಗೆ ಆಗಲಿದೆಯಂತೆ. ಸೇವಾ ಕ್ಷೇತ್ರ ಶೇಕಡಾ 5 ರಿಂದ 7 ಹಾಗೂ ಕೃಷಿ ಕ್ಷೇತ್ರ ಶೇಕಡಾ 3 ರಷ್ಟು ಅಭಿವೃದ್ಧಿ ಆಗುತ್ತದಂತೆ.

ಈ ಎಲ್ಲ ಬೊಗಳೆಗಳನ್ನೂ ಒಪ್ಪಿಕೊಳ್ಳೋಣ. ಆದರೆ ಮೆಕ್ಸಿಕೋದಲ್ಲಿ ವಿಶ್ವಬ್ಯಾಂಕ್, ಐ.ಎಂ.ಎಫ್.ಗಳು ಹೇಳಿದಂತೆ ಆರ್ಥಿಕ ಸುಧಾರಣೆ ಮಾಡಿದಾಗಿಯೂ ಇಂತಹ ಪರಿಸ್ಥಿತಿ ಬಂದದ್ದು ಹೇಗೆಂದು ಈ ಬ್ಯಾಂಕ್ ವಿವರಿಸಿದ್ದರೆ ಚೆನ್ನಾಗಿತ್ತು ಅಲ್ಲವೆ?

ಜಪಾನಿನ ಚಿತಾವಣೆ

ಜಪಾನ್ ಭಾರತ ತನ್ನ ವಿದ್ಯುತ್ ದರಗಳನ್ನು ಏರಿಸಬೇಕೆಂದು ಚಿತಾವಣೆ ಮಾಡುತ್ತಿದೆ. ಭಾರತದ ವಿದ್ಯುತ್ ವಲಯದಲ್ಲಿ ಹಣ ಹೂಡಲು ಈ ಷರತ್ತನ್ನು ಹಾಕುತ್ತಿರುವ ಜಪಾನ್ ಬಹಳ ತಡವಾಗಿ ನಮ್ಮ ವಿದ್ಯುತ್ ವಲಯಕ್ಕೆ ಬರುವ ಪ್ರಯತ್ನ ಮಾಡಿದೆ.

ತಮ್ಮ ಲಾಭದ ಮೇಲೆ ಗಮನ ಹೊಂದಿರುವ ಸಾಮ್ರಾಜ್ಯಶಾಹಿ ದೇಶಗಳೆಲ್ಲ ಈ ರೀತಿ ಹೆಚ್ಚಿನ ವಿದ್ಯುತ್ ದರ ಇರಬೇಕೆಂದು ಕೇಳುತ್ತಿವೆ. ಭಾರತ ಸರ್ಕಾರ ಆಗಲೇ ಕನಿಷ್ಠ ಶೇ. 16 ರ ಪ್ರತಿಫಲ ಸಿಗುವಂತೆ ಮಾಡುವ ಭರವಸೆ ನೀಡಿದ ಮೇಲೂ ಇಂತಹ ಒತ್ತಡವನ್ನು ಜಪಾನ್ ಹಾಕುತ್ತಿದೆ.

ಒಟ್ಟಾರೆ ಇವರೆಲ್ಲರ ಚಿತಾವಣೆಗೆ ಮಣಿದು ಭಾರತ ಸರ್ಕಾರ ವಿದ್ಯುತ್ ದರಗಳನ್ನು ಏರಿಸಬಹುದು. ಈ ಬೆಲೆ ಏರಿಕೆಗಳೊಡನೆ ಎನ್ರೋನ್ ಹಗರಣದಂತಹ ಹಗರಣಗಳೂ ಸೇರಿದರೆ ಇಲ್ಲಿ ಬದುಕು ಅತ್ಯಂತ ಕಷ್ಟಕರವಾಗುವುದರಲ್ಲಿ ಸಂದೇಹವೇ ಇಲ್ಲ.



ಸುರ್ಜಿತ್‌ರೊಡನೆ ಮೊದಲು ಮಾತನಾಡಬಯಸಿದ ಕಾಶ್ಮೀರಿ ಮುಖಂಡ

ಕಾಶ್ಮೀರಿ ಮುಖಂಡ ಶಬ್ಬೀರ್ ಅಹಮ್ಮದ್‌ಶಾಹ ಇತ್ತೀಚೆಗೆ ದಿಲ್ಲಿಗೆ ಬಂದಿದ್ದಾಗ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಯವರೊಡನೆ ಮಾರ್ಚ್ 21ರಂದು ಕಾಶ್ಮೀರ ಪರಿಸ್ಥಿತಿಯ ಬಗ್ಗೆ ಎರಡು ಗಂಟೆಗಳ ಕಾಲ ಮಾತುಕತೆ ನಡೆಸಿದರು. ಕಾಶ್ಮೀರದ ಪೀಪಲ್ಸ್ ಲೀಗ್ ಎಂಬ ಸಂಘಟನೆಯ ಈ 42 ವರ್ಷದ ಮುಖಂಡ ಇತ್ತೀಚೆಗೆ 20 ವರ್ಷಗಳ ಬಂಧನದಿಂದ ಬಿಡುಗಡೆಯಾಗಿದ್ದು ಬಿಡುಗಡೆಯಾದ ಮೇಲೆ ಬೇರೆ ಯಾವುದೇ ರಾಜಕೀಯ ಮುಖಂಡರಿಗಿಂತ ಮೊದಲು ಸುರ್ಜಿತ್‌ರನ್ನು ಭೇಟಿಯಾಗ ಬಯಸಿದ್ದರು.

ಈ ವಸಾತುಕತೆಯ ಬಗ್ಗೆ ಐ.ಎನ್.ಎನ್.ನೊಂದಿಗೆ ಮಾತನಾಡುತ್ತಾ ಸುರ್ಜಿತ್ "ಶಬ್ಬೀರ್ ಶಾಹರವರ ಬಗ್ಗೆ ಒಂದು ಸಕಾರಾತ್ಮಕ ಅಂಶ ಎಂದರೆ ಅವರು ಧರ್ಮದ ಹೆಸರಲ್ಲಿ ಕಾಶ್ಮೀರ ಪಾಕಿಸ್ತಾನ ಸೇರುವುದನ್ನು ಪ್ರತಿಪಾದಿಸುವವರನ್ನು ವಿರೋಧಿಸುತ್ತಾರೆ, ಒಂದು ದೃಢ ಜಾತ್ಯಾತೀತ ನಿಲುವು ತಳೆದಿದ್ದಾರೆ. ಇದುವರೆಗೆ ಭಾಷಣ ಮಾಡಲು ಮಸೀದಿಗಳನ್ನು ಅವರು ಬಳಸಿಲ್ಲ, ಸಾರ್ವಜನಿಕ ರ್‍ಯಾಲಿಗಳಲ್ಲಿ ಸ್ವತಂತ್ರ ಕಾಶ್ಮೀರದ ಪ್ರತಿಪಾದನೆ ಮಾಡುತ್ತಿದ್ದಾರೆ' ಎಂದರು.

ಆತನ ನಿಲುವಿನ ಇನ್ನೊಂದು ಮಹತ್ವದ ಅಂಶವೆಂದರೆ ಕಾಶ್ಮೀರ ಕಣಿವೆಯಿಂದ ದೊಡ್ಡ ಪ್ರಮಾಣದಲ್ಲಿ ಕಾಶ್ಮೀರಿ ಪಂಡಿತ ಜನಾಂಗದವರ ವಲಸೆಯ ಬಗ್ಗೆ ಅವರಿಗೆ ತೀವ್ರ ಆತಂಕವಿದೆ. ಶತಮಾನಗಳಿಂದ ಹಿಂದೂಗಳು, ಮುಸಲ್ಮಾನರು ಶಾಂತಿಯಿಂದ ಜತೆಗಿದ್ದ ಸಾಂಸ್ಕೃತಿಕ ಪರಂಪರೆಗೆ ಇದು ದೊಡ್ಡ ಧಕ್ಕೆ ತಂದಿದೆ ಎಂದು ಶಬ್ಬೀರ್ ಶಾಹ ಭಾವಿಸುತ್ತಾರೆ. ಈ ಜನಾಂಗದ ಜನ ಕಾಶ್ಮೀರ ಕಣಿವೆಗೆ ಹಿಂದಿರುಗಿ ಹಳೆಯ ಸೌಹಾರ್ದದ ಪರಂಪರೆ ಮತ್ತೆ ಪುನರುಜ್ಜೀವನಗೊಳ್ಳಲು ಅನುವಾಗುವಂತಹ ಸನ್ನಿವೇಶ ಸೃಷ್ಟಿಸಲು ಕಾಶ್ಮೀರಿ ಜನತೆಯನ್ನು ಅಣಿನೆರೆಸಲು ತಾನು ಕಟಿಬದ್ಧ ಎಂದು ಆತ ಹೇಳಿರುವುದಾಗಿ ಸುರ್ಜಿತ್ ಐ.ಎನ್.ಎನ್. ಸುದ್ದಿ ಸಂಸ್ಥೆಗೆ ತಿಳಿಸಿದರು.

ಮೂರನೆಯ ಅಂಶವೆಂದರೆ ಶಬ್ಬೀರ್ ಶಾಹ ಕಾಶ್ಮೀರ ಕಣಿವೆಯ ಬಗ್ಗೆ ಮಾತ್ರ ಮಾತನಾಡುವುದಿಲ್ಲ, ಜಮ್ಮುಮತ್ತು ಲಡಾಖ್ ಪ್ರದೇಶಗಳ ಬಗ್ಗೆಯೂ ಆತನಿಗೆ ಆತಂಕವಿದೆ". ನಾವೂ ಅಭಿಪ್ರಾಯ ಪಡುವಂತೆ ಒಂದು ರಾಜಕೀಯ ಪರಿಹಾರವಿಲ್ಲದೆ ಕಾಶ್ಮೀರದಲ್ಲಿ ಚುನಾವಣೆ ನಡೆಸಲು ಆತನ ವಿರೋಧವಿದೆ ಎಂದು ಸುರ್ಜಿತ್ ಹೇಳಿದರು.

ಶಬ್ಬೀರ್ ಶಾಹ ತನ್ನ ಮಾತುಕತೆಯ ವೇಳೆಯಲ್ಲಿ ಒತ್ತಿ ಹೇಳಿದ ಮತ್ತೊಂದು ಅಂಶವೆಂದರೆ ಸಶಸ್ತ್ರ ಪಡೆಗಳ ಕೆಲವು ಅತ್ಯಾಚಾರಗಳು ಕಾಶ್ಮೀರದ ಜನತೆಯನ್ನು ದೂರಸರಿಸುತ್ತಿವೆ ಎಂದು ಒಂದು ರಾಜಕೀಯ ಪರಿಹಾರ ಸಾಧಿಸಲು ಬಂದೂಕು ಎತ್ತಿ ನಿಲ್ಲಬೇಕು ಎಂದು ನಾನು ಹೇಳುವುದಿಲ್ಲ, ಮಾತುಕತೆ ನಡೆಯಬೇಕು ಎನ್ನುತ್ತೇವೆ".

ಎಂದ ಆತ "ಕಾಶ್ಮೀರಿ ಜನ ಸಾಮಾನ್ಯವಾಗಿ ಬಂದೂಕು ಎತ್ತಿಕೊಳ್ಳ ಬಯಸುವುದಿಲ್ಲ, ಆದರೆ ನಮ್ಮ ಹುಡುಗರು ಆತ್ಮರಕ್ಷಣೆಗಾಗಿ ಬಂದೂಕನ್ನು ಆಶ್ರಯಿಸಿದ್ದಾರೆ" ಎಂದು ಒತ್ತಿ ಹೇಳಿದರು.

ಸುರ್ಜಿತ್ ಶಾಹರವರಿಗೆ ಇತ್ತೀಚಿನ ವರ್ಷಗಳಲ್ಲಿ ರಾಷ್ಟ್ರೀಯ, ಅಂತರ್‍ರಾಷ್ಟ್ರೀಯ ಸನ್ನಿವೇಶ ತೀವ್ರವಾಗಿ ಬದಲಾದ ಬಗ್ಗೆ ವಿವರಿಸುತ್ತಾ ಕಾಶ್ಮೀರದ ಜನಗಳ ರಾಜಕೀಯ ಸಾಮಾಜಿಕ ಹಾಗೂ ಆರ್ಥಿಕ ಜೀವನ ಕಳೆದ ಕೆಲವು ವರ್ಷಗಳಿಂದ ಅಸ್ತವ್ಯಸ್ತಗೊಂಡು ಈಗಾಗಲೇ ಅವರು ಕೊನೆಯಿಲ್ಲದ ಸಂಕಟಗಳನ್ನು ಎದುರಿಸಬೇಕಾಗಿ ಬಂದಿರುವುದರಿಂದ ಒಂದು ರಾಜಕೀಯ ಪರಿಹಾರ ಹುಡುಕುವುದು ಅತ್ಯಗತ್ಯ ಎಂದರು.

"ಧರ್ಮದ ಹೆಸರಲ್ಲಿ ಪಾಕಿಸ್ತಾನವನ್ನು ಸೇರಬೇಕೆಂದು ಪ್ರತಿಪಾದಿಸುವವರು ಹಾಗೂ ಸ್ವತಂತ್ರ ಕಾಶ್ಮೀರದ ಘೋಷಣೆ ನೀಡಿ ಕಾಶ್ಮೀರಿ ಜನರ ಸ್ವಂತಿಕೆಗಾಗಿ ಹೋರಾಡುತ್ತಿರುವವರು ಇವರಿಬ್ಬರ ನಡುವಿನ ಭಿನ್ನತೆಯನ್ನು ಮನಗಾಣಬೇಕು ಎಂದು ಸರ್ಕಾರವನ್ನು ಆಗ್ರಹಪಡಿಸುತ್ತಲೇ ಬಂದಿದ್ದೇವೆ" ಎಂದು ಸುರ್ಜಿತ್ ಹೇಳಿದರು.

"ಶಬ್ಬೀರ್ ಶಾಹರೊಂದಿಗೆ ಮಾತುಕತೆಯ ನಂತರ ಕಾಶ್ಮೀರಿ ಸಿಕ್ಕು ಬಿಡಿಸಲು ಇದೊಂದೇ ದಾರಿ ಎಂದು ನನಗೆ ಮನದಟ್ಟಾಗಿದೆ" ಎಂದು ಸುರ್ಜಿತ್ ಐ.ಎನ್.ಎನ್. ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ.

ಕೇರಳ: ಆ್ಯಂಟನಿಗೂ ಕರುಣಾಕರನ್‌ರದ್ದೇ ಗತಿ?

ನೀತಿಗಳಲ್ಲಿ ಅರ್ಥಪೂರ್ಣ ಬದಲಾವಣೆಯಿಲ್ಲದೆ ಕೇವಲ ಮುಖ್ಯಮಂತ್ರಿಯ ಬದಲಾವಣೆಯಿಂದ ಕೇರಳದ ಜ್ವಲಂತ ಸಮಸ್ಯೆಗಳು ಯಾವುವೂ ಪರಿಹಾರ ಕಾಣವು ಎಂದು ಕೇರಳದ ಎಡಪ್ರಜಾಪ್ರಭುತ್ವ ರಂಗ (ಎಲ್.ಡಿ.ಎಫ್) ಹೊಸ ಯು.ಡಿ.ಎಫ್. ಮಂತ್ರಿ ಮಂಡಳದ ರಚನೆಯ ಬಗ್ಗೆ ಪ್ರತಿಕ್ರಿಯಿಸುತ್ತಾ ಹೇಳಿದೆ. ಇಸ್ರೋ ಬೇಹುಗಾರಿಕೆ ಹಗರಣದಂತಹ ಸೂಕ್ಷ್ಮ ಸಂಗತಿಗಳ ಬಗ್ಗೆ, ಹಿಂದಿನ ಸರ್ಕಾರವನ್ನು ಅಲುಗಾಡಿಸಿದ ಹಲವಾರು ಹಗರಣಗಳ ಬಗ್ಗೆ ಹೊಸ ಮುಖ್ಯಮಂತ್ರಿ ಸ್ಪಷ್ಟಪಡಿಸಬೇಕು ಎಂದು ಅದು ಒತ್ತಾಯಿಸಿದೆ.

ಎ.ಕೆ.ಆ್ಯಂಟನಿಯವರು ಮಾಡಿರುವ ಮಂತ್ರಿಮಂಡಲದ ಸದಸ್ಯರ ಆಯ್ಕೆ ನೋಡಿದರೆ ನಿಜವಾದ ಬದಲಾವಣೆ ಏನೂ ಆಗುವುದಿಲ್ಲ, ಎಂಬ ಭಯ ಗಟ್ಟಿಯಾಗುತ್ತದೆ. ನ್ಯಾಯಾಲಯದಲ್ಲಿ ಕ್ರಿಮಿನಲ್ ಆರೋಪ ಎದುರಿಸುತ್ತಿರುವ, ಕೂತು ಪರಂಬದ ಪೋಲೀಸ್ ಗೋಳೀಬಾರಿಗೆ ಕಾರಣವಾದ ಎಂ.ವಿ.ರಾಘವನ್‌ರನ್ನು ಮಂತ್ರಿಮಂಡಳದಲ್ಲಿ ಸೇರಿಸಬಾರದು ಎಂದು ಡಿವೈಎಫ್‌ಐ ಒತ್ತಾಯಿಸಿತ್ತು. ಕೊಚ್ಚಿ ಕಾನೂನು ವೇದಿಕೆ ಭ್ರಷ್ಟಾಚಾರದ ಆಪಾದನೆ ಎದುರಿಸುತ್ತಿರುವ ಹಾಗೂ ಕರ್ನಾಟಕಕ್ಕೆ ಅನಧಿಕೃತವಾಗಿ ವಿದ್ಯುತ್ ಮಾರಲು ಹೋಣೆಯಾದ ಬಾಲಕೃಷ್ಣ ಪಿಳ್ಳೆಯವರನ್ನು ಮಂತ್ರಿಯಾಗಿ ತೆಗೆದುಕೊಳ್ಳಬಾರದುಎಂದು ಆ್ಯಂಟನಿಯವರನ್ನು ಕೇಳಿತ್ತು. ಈ ಇಬ್ಬರೂ ಆಂಟನಿಯವರ ಮೊದಲ ಕಂತಿನ 6 ಮಂತ್ರಿಗಳಲ್ಲಿ ಸೇರಿದ್ದಾರೆ. ಹಿಂದಿನ ಮಂತ್ರಿಮಂಡಲದಲ್ಲಿ ಪರಸ್ಪರ ಭ್ರಷ್ಟಾಚಾರದ ಆರೋಪ ಎರಚಿಕೊಂಡಿದ್ದ ಕೇರಳ ಕಾಂಗ್ರೆಸ್‌ನ ಎರಡೂ ಬಣಗಳ ಟಿ.ಎಂ.ಜೇಕಬ್ ಹಾಗೂ ಕೆ.ಎಂ.ಮಣಿ ಆಂಟನಿಯವರ ಮಂತ್ರಿಮಂಡಲದ ಇನ್ನಿಬ್ಬರು ಸದಸ್ಯರು.

ಆಂಟನಿ ಆರಿಸಿದ ಮಂತ್ರಿಗಳೆಲ್ಲಾ ಕರುಣಾಕರನ್ ಸರಕಾರದ ಕುಕೃತ್ಯಗಳೂ ಭ್ರಷ್ಟಾಚಾರಗಳಲ್ಲಿ ಸಕ್ರಿಯವಾಗಿ ನೆರವಾದವರು ಅಥವಾ ಪ್ರೇಕ್ಷಕರಾಗಿದ್ದವರು. ಹೀಗಿರುವಾಗ ಕರುಣಾಕರನ್ ಗತಿಯೇ ಆಂಟನಿಯವರದ್ದು ಕೂಡಾ ಎಂದು ಇ.ಎಂ.ಎಸ್. ಹೇಳಿದ್ದಾರೆ.

ಒಂದು ಘಟನೆ ಆಂಟನಿಯವರ ನೇತೃತ್ವದ ಯು.ಡಿ.ಎಫ್. ಸರಕಾರದ ಭವಿಷ್ಯದ ಬಗ್ಗೆ ಸಾಕಷ್ಟು ಬೆಳಕು ಚೆಲ್ಲುತ್ತದೆ. ಕೊಝಿಕೋಡ್ ಜಿಲ್ಲಾ ಕಾಂಗ್ರೆ ಪದಾಧಿಕಾರಿಗಳ ಸಮಾವೇಶವನ್ನು ಉದ್ಘಾಟಿಸುತ್ತಾ ಕರುಣಾಕರನ್ ಮಗ ಹಾಗೂ ಕೆಪಿಸಿಸಿ(ಐ) ಪ್ರಧಾನ ಕಾರ್ಯದರ್ಶಿ ಸಂಸತ್ ಸದಸ್ಯ ಕೆ.ಮುರಳೀಧರನ್ ಕರುಣಾಕರನ್‌ರನ್ನು ಕೆಳಗಿಳಿಸುವುದರಲ್ಲಿ ಭಾಗವಹಿಸಿದವರನ್ನೆಲ್ಲಾ ಜನ ತಿರುವನಂತಪುರದ ಸಚಿವಾಲಯದಿಂದ ಹೊರಗೆಳೆದು ಹಾಕುತ್ತಾರೆ ಎಂದು ಎಚ್ಚರಿಸಿದ್ದರಂತೆ. ಬಹಳ ಸಮಯದಿಂದ ಕರುಣಾಕರನ್ ಹಿಂಬಾಲಕರಾಗಿದ್ದ ಮೊನ್ನೆ ಬಣ್ಣ ಬದಲಿಸಿದ ಕಾಂಗ್ರೆಸ್(ಐ) ಎಂ.ಎಲ್.ಎ. ಮನೆಯ ಕಿಟಕಿ ಗಾಜುಗಳು ಆಂಟನಿ ಮಂತ್ರಿಮಂಡಲ ಅಧಿಕಾರವಹಿಸಿಕೊಂಡ ಮರುದಿನವೇ ಪುಡಿಪುಡಿಯಾಯಿತು. ಅವರ ಕಾರಿಗೂ ಭಾರೀ ಹಾನಿಯುಂಟಾಯಿತು. ಕಾಂಗ್ರೆ ಎಂ.ಎಲ್.ಎ.ದ ನೆರೆಕರೆಯವರು ಮಧ್ಯಪ್ರವೇಶಿಸಿದ್ದರಿಂದ ಹಾನಿ ಅಷ್ಟಕ್ಕೇ ನಿಂತಿತು. ಇದೂ ಭವಿಷ್ಯದ ಸೂಚಕವಲ್ಲವೇ?

ಈಶಾನ್ಯ ಭಾರತದ ಅಭಿವೃದ್ಧಿ: ವಿದ್ಯಾರ್ಥಿಗಳ ಒತ್ತಾಯ

ಇಡೀ ಈಶಾನ್ಯ ಭಾರತದ ಪ್ರದೇಶ ಅತ್ಯಂತ ನಿರ್ಲಕ್ಷ್ಯಕ್ಕೊಳಗಾಗಿದೆ, ಅಭಿವೃದ್ಧಿಯಲ್ಲಿ ಹಿಂದುಳಿದಿದೆ. ಕೇಂದ್ರ ಸರಕಾರ ಈ ಪ್ರದೇಶದ ಜನಗಳ ಪ್ರಜಾಪ್ರಭುತ್ವ ಹಕ್ಕುಗಳನ್ನು ಉಲ್ಲಂಘಿಸಿದೆ, ಸಂವಿಧಾನ ಒಕ್ಕೂಟ ನೀತಿಯನ್ನು ಉಲ್ಲಂಘಿಸಿದೆ ಎಂದು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್.ಎಫ್.ಐ) ಈಶಾನ್ಯ ಪ್ರದೇಶದಲ್ಲಿರುವ ರಾಜ್ಯ ಸಮಿತಿಗಳ ಮುಖಂಡರು ಆಪಾದಿಸಿದ್ದಾರೆ. ವಿದ್ಯಾರ್ಥಿ ಸಮುದಾಯ ಒಂದಾಗಿ ಒಂದು ಬಲಿಷ್ಠ ಪ್ರಜಾಪ್ರಭುತ್ವ ಆಂದೋಲನವನ್ನು ಕಟ್ಟಿ ಬೆಳೆಸಿ ಈ ಪಕ್ಷಪಾತದ ನೀತಿಗಳ ವಿರುದ್ಧ ಹೋರಾಡಬೇಕು ಎಂದು ಅವರು ಕರೆ ನೀಡಿದ್ದಾರೆ.

ಈ ಪ್ರದೇಶದ ಜ್ವಲಂತ ಪ್ರಶ್ನೆಗಳ ಬಗ್ಗೆ ಚರ್ಚಿಸಲು ಎಸ್.ಎಫ್.ಐ.ನ ಈಶಾನ್ಯ ರಾಜ್ಯಗಳ ರಾಜ್ಯ ಸಮಿತಿಗಳ ಮುಖಂಡರ ಸಭೆ ಇತ್ತೀಚೆಗೆ ಗುವಾಹಾತಿಯಲ್ಲಿ ನಡೆಯಿತು. ಈಶಾನ್ಯ ಪ್ರದೇಶ ಆರ್ಥಿಕವಾಗಿ, ಕೈಗಾರಿಕಾವಾಗಿ ಹಾಗೂ ಸಾಂಸ್ಕೃತಿಕವಾಗಿ ಬಲಿಷ್ಠವಾದರೆ ಮಾತ್ರ ದೇಶ ಬಲಿಷ್ಠವಾಗಬಲ್ಲುದು ಎಂದು ಅಭಿಪ್ರಾಯಪಟ್ಟಿರುವ ಈ ಸಭೆ ಶಿಕ್ಷಣವಲಯದಲ್ಲಿ ಈ ಪ್ರದೇಶ ವಿಪರೀತ ನಿರ್ಲಕ್ಷ್ಯಕ್ಕೆ ಒಳಗಾಗಿದೆ ಎಂದು ಹೇಳಿ ಶಿಕ್ಷಣದ ತ್ವರಿತ ವಿಸ್ತಾರಕ್ಕೆ ನಿರ್ದಿಷ್ಟ ಪ್ರಸ್ತಾಪಗಳನ್ನು ಕೊಟ್ಟಿದೆ. ಯು.ಜಿ.ಸಿ.ಯಪ್ರಾದೇಶಿಕಮುಖ್ಯಕಛೇರಿಯೊಂದು ಗುವಾಹಾಟಿಯಲ್ಲಿ ಇರಬೇಕೆಂದು ಒತ್ತಾಯಿಸಿದೆ. ಹೊಸ ಆರ್ಥಿಕ ನೀತಿಗಳಿಂದ ಈ ನಿರ್ಲಕ್ಷ್ಯಗಳು ಇನ್ನಷ್ಟು ಹೆಚ್ಚಿವೆ. ನಾವು ಅನ್ಯರೇನೋ ಎಂಬ ಹತಾಶ ಭಾವನೆ ಯುವಜನ-ವಿದ್ಯಾರ್ಥಿಗಳಲ್ಲಿ ಹೆಚ್ಚಿ ಅವರು ಭಯೋತ್ಪಾದಕ, ವಿಭಜನಾತ್ಮಕ ಕರೆಗಳಿಗೆ ಬಲಿಬೀಳುವಂತಾಗಿದೆ. ಇದಕ್ಕೆ ಸಶಸ್ತ್ರ ಪಡೆಗಳ ವಿಪರೀತ ಬಳಕೆ ಅಥವಾ ಕರಾಳ ಶಾಸನಗಳ ಬಳಕೆ ಪರಿಹಾರವಲ್ಲ, ಭಯೋತ್ಪಾದಕತೆಗೆ ಸಾಮಾಜಿಕ-ಆರ್ಥಿಕ ಹಾಗೂ ರಾಜಕೀಯ ಪರಿಹಾರ ಮಾತ್ರ ಸಾಧ್ಯ ಎಂದು ವಿದ್ಯಾರ್ಥಿ ಮುಖಂಡರ ಈ ಸಭೆ ಹೇಳಿದೆ.

ಹೋರಾಟ ತೀವ್ರಗೊಳಿಸಲು ಮಹಾಧಿವೇಶನ ಕರೆ

ಪುಟ 1ರಿಂದ

ನೀಡಿದೆ.

ಎರಡು ಕೈಗಾರೀಕೃತ ರಾಜ್ಯಗಳಲ್ಲಿ

ಆರ್.ಎಸ್.ಎಸ್. ಕೂಟ ಬಯಸುವ 'ಹಿಂದೂರಾಷ್ಟ್ರ'ವಾಗಲೀ, 'ಹಿಂದುತ್ವ'ದ ವೇದಿಕೆಯಾಗಲಿ ಜಾತ್ಯಾತೀತ ತತ್ವಕ್ಕೆ ವಿರೋಧವಾದದ್ದು ಹಾಗೂ ಅಲ್ಪಸಂಖ್ಯಾತರ ಹಿತಾಸಕ್ತಿಗಳಿಗೆ ಬಾಧಕ ತರುವಂತದ್ದು. ಆ ಮೂಲಕ ದೇಶದ ಐಕ್ಯತೆಗೇ ಅಪಾಯ ತರುವಂತದ್ದು ಎಂದು ಮಹಾಧಿವೇಶನ ಹೇಳಿದೆ. ಇತ್ತೀಚೆಗೆ ಮಹಾರಾಷ್ಟ್ರ ಹಾಗೂ ಗುಜರಾತ್ ಈ ಎರಡು ಕೈಗಾರಿಕೀಕೃತ ರಾಜ್ಯಗಳಲ್ಲಿ ಬಹಿರಂಗ ಕೋಮುವಾದಿ ವೇದಿಕೆಯ ಮೂಲಕ ಈ ಶಕ್ತಿಗಳು ಅಧಿಕಾರಕ್ಕೆ ಬಂದಿರುವುದರಿಂದ ಕೋಮುವಾದೀ ಆಕ್ರಮಣಗಳನ್ನು ನವೀಕರಿಸಲು ಅವಕಾಶದೊರೆತಂತಾಗಿದೆ ಎಂದಿರುವ ಮಹಾಧಿವೇಶನ ಬಾಳಠಾಕ್ರೆಯ ಕರೆಗಳು ಉದ್ರೇಕಕಾರಿ ಎಂದಿದೆ. 'ಹೊರಗಿನವರಿಗೆ" ಕೆಲಸದ 'ಪರ್ಮಿಟ್' ಕೊಡಬೇಕೆಂಬ ಕಿತಾಪತಿಯನ್ನು ತಡೆಯಲು ಇಡೀ ದೇಶ ಎದ್ದು ನಿಲ್ಲಬೇಕು, ಇದು ದೇಶವನ್ನು ಧಾರ್ಮಿಕ ಮತ್ತು ಭಾಷಾ ಆಧಾರದ ಮೇಲೆ ಒಡೆಯುವ ಪ್ರಯತ್ನ ಎಂದು ಖಂಡಿಸಿದೆ. ಭಾರತದಲ್ಲಿ ಎಲ್ಲಿ ಬೇಕಾದರೂ ಹೋಗಲು, ನೆಲೆಸಲು ಮುಕ್ತ ಅವಕಾಶ ಎಲ್ಲಾ ಭಾರತೀಯ ನಾಗರಿಕರ ಮೂಲಭೂತ ಹಕ್ಕು ಎಂದು ಮಹಾಧಿವೇಶನ ಹೇಳಿದೆ.

ರಾವ್ ಜಾತ್ಯಾತೀತತೆಯನ್ನು ಎತ್ತಿಹಿಡಿಯುವಲ್ಲಿ ರಾವ್ ಸರಕಾರದ್ದು ಶೋಚನೀಯ ದಾಖಲೆ ಎಂದು ಗಮನಿಸಿದ ಮಹಾಧಿವೇಶನ ಅಯೋಧ್ಯೆಯ ವಿವಾದಗ್ರಸ್ತ ಸ್ಥಳದಲ್ಲಿ ದೇವಾಲಯ ಕಟ್ಟಲು ಶಂಕರಾಚಾರ್ಯಗಳ ಒಂದು ಟ್ರಸ್ಟ್ ನ್ನು ಪ್ರಾಯೋಜಿಸುವ ಒಂದು ಸರಕಾರ ಮತ್ತು ಒಂದು ಪಕ್ಷ ಜಾತ್ಯಾತೀತತೆಯನ್ನು ರಕ್ಷಿಸಬಹುದೆಂದು ನಂಬಲು ಅವಕಾಶ ನೀಡುವುದಿಲ್ಲ, ಸುಪ್ರೀಂ ಕೋರ್ಟ್ ಸರಕಾರದ ಕೇಳಿಕೆಯನ್ನು ತಿರಸ್ಕರಿಸಿರುವುದು ಸರಿಯಾದ ಕ್ರಮ ಎನ್ನುತ್ತಾ ತಕ್ಷಣ ಸಂವಿಧಾನದ 138(2) ಕಲಮಿನ ಪ್ರಕಾರ ಎಲ್ಲಾ ವಿವಾದಗಳನ್ನು ಸುಪ್ರೀಂ ಕೋರ್ಟಿನ ಮುಂದಿಟ್ಟು ಒಂದು ತೀರ್ಪು ಕೇಳಬೇಕೆಂದು ಮಹಾಧಿವೇಶನ ಒತ್ತಾಯಿಸಿದೆ. ಜಾತ್ಯಾತೀತತೆ ಸಂವಿಧಾನದ ಮೂಲಭೂತ ಲಕ್ಷಣ ಎಂದು ಸುಪ್ರೀಂ ಕೋರ್ಟ್ ತೀರ್ಪಿತ್ತ ಮೇಲೂ ಕೇಂದ್ರ ಸರ್ಕಾರ ಚುನಾವಣಾ ಪ್ರಕ್ರಿಯೆಯಲ್ಲಿ ಧರ್ಮವನ್ನು ರಾಜಕೀಯದಲ್ಲಿ ಬೆರೆಸುವುದನ್ನು ತಡೆಯುವ ಶಾಸನ ತರಲು ಹಿಂದೇಟು ಹಾಕುತ್ತಿದೆ.

ಪರ್ಯಾಯ ಮುಂದಿಡಬೇಕು

ಆರ್.ಎಸ್.ಎಸ್. ಕೂಟ ಶಿಕ್ಷಣ, ಸಂಸ್ಕೃತಿ ಇತ್ಯಾದಿ ಎಲ್ಲಾ ವಲಯಗಳಲ್ಲೂ ಕೋಮುವಾದಿ ಮನೋಭಾವನೆಯನ್ನು ತುಂಬಲು ಪ್ರಯತ್ನಿಸಿದ್ದು ಇದನ್ನು ಎದುರಿಸಿ ರಾಜಕೀಯ, ಸಾಮಾಜಿಕ, ಸೈದ್ಧಾಂತಿಕ ಹಾಗ ಸಾಂಸ್ಕೃತಿಕ ಇತ್ಯಾದಿ ಎಲ್ಲಾ ವಲಯಗಳಲ್ಲೂ ಜಾತ್ಯಾತೀತ ಹಾಗೂ ಪ್ರಜಾಸತ್ತಾತ್ಮಕ ಪರ್ಯಾಯವನ್ನು ಮುಂದಿಡುವ ಪ್ರಚಾರ-ಪ್ರಕ್ಷೋಭೆ ನಡೆಸಬೇಕು, ಇದರಲ್ಲಿ ಎಲ್ಲಾ ಪ್ರಜಾಸತ್ತಾತ್ಮಕ ಹಾಗೂ ಜಾತ್ಯಾತೀತ ಶಕ್ತಿಗಳನ್ನು ಅಣಿನೆರೆಸಬೇಕು ಎಂದು ಮಹಾಧಿವೇಶನ ಕರೆ ನೀಡಿದೆ.

ಜಾತ್ಯಾತೀತ ರಾಜಕೀಯ ವ್ಯವಸ್ಥೆಗೆ ಬಾಧಕವಾಗಿರುವ ಎಲ್ಲಾ ಸ್ವರೂಪಗಳ ಕೋಮುವಾದಗಳನ್ನು ವಿರೋಧಿಸಿರುವ ಮಹಾಧಿವೇಶನ ಮೂಲಭೂತವಾದದ ಬೆಳವಣಿಗೆ ಹಾಗೂ ಅಲ್ಪಸಂಖ್ಯಾತ ಕೋಮುವಾದ ಅಲ್ಪಸಂಖ್ಯಾತರ ನೈಜ ಹಿತಾಸಕ್ತಿಗಳಿಗೇ ವಿರೋಧವಾದದ್ದು ಎಂದು ನೆನಪಿಸಿದೆ. ಅಲ್ಪಸಂಖ್ಯಾತರು ಆಂದೋಲನಗಳ ಮುಖ್ಯಧಾರೆಯಲ್ಲಿ ಸೇರದಂತೆ ತಡೆಯುವ ಈ ಶಕ್ತಿಗಳ ಮತಾಂಧ ಹಾಗೂ ಹಳಸಲು ಮೌಲ್ಯಗಳು ಮಹಿಳಾ ಸಮಾನತೆಯನ್ನು ವಿರೋಧಿಸುತ್ತವೆ, ಬಹುಸಂಖ್ಯಾತ ಕೋಮುವಾದ ಬೆಳೆಯಲು ನೆರವಾಗುತ್ತವೆ. ಆದ್ದರಿಂದ ಸಿಪಿಐ(ಎಂ) ಅಲ್ಪಸಂಖ್ಯಾತರ ನಡುವೆ ಪ್ರತ್ಯೇಕತಾವಾದಿ ಪ್ರವೃತ್ತಿಗಳನ್ನು ವಿರೋಧಿಸಿ ಅಲ್ಪಸಂಖ್ಯಾತರ ನ್ಯಾಯಬದ್ಧ ಹಕ್ಕುಗಳ ರಕ್ಷಣೆಗೆ ಸರ್ವ ಸಾಮಾನ್ಯ ಆಂದೋಲನ ಬೆಳೆಸಲು ಕೆಲಸ ಮಾಡುವುದಾಗಿ ಮಹಾಧಿವೇಶನ ಸಾರಿದೆ.

ಕಾಂಗ್ರೆಸ್ ನೀತಿಗಳಿಂದುಟಾದ ಅಸಂತೃಪ್ತಿಯನ್ನು ಬಳಸಿ 'ಹಿಂದುತ್ವ'ದ ವೇದಿಕೆಯ ಮೇಲೆ ದಿಲ್ಲಿಯಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವ ನಿರೀಕ್ಷೆಯಿಟ್ಟುಕೊಂಡಿದೆ. ಆದರೆ ಎಲ್ಲಿ ಒಂದು ಪರಿಣಾಮಕಾರಿ ಜಾತ್ಯಾತೀತ ಪರ್ಯಾಯವಿದೆಯೋ, ಜಾತ್ಯಾತೀತ ಶಕ್ತಿಗಳಲ್ಲಿ ಐಕ್ಯತೆಯಿದೆಯೋ ಅಲ್ಲೆಲ್ಲಾ ಬಿಜೆಪಿಯನ್ನೂ ದೂರಸರಿಸಲು, ಸೋಲಿಸಲು ಸಾಧ್ಯ ಎಂದು ಇತ್ತೀಚಿನ ಚುನಾವಣೆಗಳು ತೋರಿಸಿವೆ. ಇದರಿಂದ ಪಾಠ ಕಲಿತು ಜನಗಳ ಮುಂದೆ ಒಂದು ಪರಿಣಾಮಕಾರಿ ಜಾತ್ಯಾತೀತ ಪರ್ಯಾಯ ಇಟ್ಟು ಬಿಜೆಪಿಯ ಕೋಮುವಾದಿ ರಾಜಕೀಯವನ್ನು ಸೋಲಿಸಬೇಕು, ಕಾಂಗ್ರೆಸ್(ಐ)ನ ರಾಜಿ ಮಾಡಿಕೊಳ್ಳುವ ಪಾತ್ರವನ್ನು ವಿಫಲಗೊಳಿಸಬೇಕು ಎಂದು ಎಲ್ಲಾ ದೇಶಪ್ರೇಮಿ ಮತ್ತು ಜಾತ್ಯಾತೀತ ಪ್ರತಿಪಕ್ಷಗಳಿಗೆ, ಶಕ್ತಿಗಳಿಗೆ ಮಹಾಧಿವೇಶನ ಕರೆ ನೀಡಿದೆ.

ಒಂದು ಸಮಿಶ್ರ ಸಂಸ್ಕೃತಿ ಹೊಂದಿರುವ, ವಿಭಿನ್ನ ಧಾರ್ಮಿಕ ಹಾಗೂ ಸಾಮಾಜಿಕ ಸಂಪ್ರದಾಯಗಳ ಜನ ಸಾಮರಸ್ಯದಿಂದ ಬದುಕುತ್ತಿರುವ ಭಾರತದ ಹೆಮ್ಮೆಯ ಪರಂಪರೆಯನ್ನು ಕಾಪಾಡಿಕೊಳ್ಳಬೇಕು, ಎಲ್ಲಾ ಕೋಮುಗಳ ಜನಗಳ ದೇಶಪ್ರೇಮಿ ಭಾವನೆಗಳನ್ನು ಜಾಗೃತಗೊಳಿಸಿ ಜಾತ್ಯಾತೀತ ಜೀವನ ಶೈಲಿಯ ರಕ್ಷಣೆಗೆ ಅವರನ್ನು ಅಣಿನೆರೆಸಬೇಕು ಎಂದಿರುವ 15ನೇ ಮಹಾಧಿವೇಶನ ಕೋಮುವಾದಿಗಳ ತಂತ್ರಗಳನ್ನು ವಿಫಲಗೊಳಿಸಲು, ಜಾತ್ಯಾತೀತತೆ-ಮತ್ತು ರಾಷ್ಟ್ರೀಯ ಐಕ್ಯತೆಯನ್ನು ರಕ್ಷಿಸಲು ಒಂದು ಸತತ ಸರ್ವತೋಮುಖಿ ಹೋರಾಟ ನಡೆಸಬೇಕು ಎಂದು ಕರೆ ನೀಡಿದೆ.

ಯುರೋಪಿನ ಏಳುದೇಶಗಳ ನಡುವೆ ಗಡಿ ನಿಯಂತ್ರಣ ಕ್ರಮಗಳು ರದ್ದು

ಮಾರ್ಚ್ 25 ರಿಂದ ಯುರೋಪಿನ ಏಳು ದೇಶಗಳು ತಮ್ಮ ಗಡಿಗಳಲ್ಲಿರುವ ನಿಯಂತ್ರಣ ಕ್ರಮಗಳನ್ನು ರದ್ದು ಮಾಡಿವೆ. ಆ ಮೂಲಕ 'ಮುಕ್ತ ಗಡಿ' ಅಸ್ತಿತ್ವಕ್ಕೆ ಬಂದಿದೆ ಅಥವಾ ಗಡಿ ಇಲ್ಲವಾಗಿದೆ. ಈ ಕ್ರಮ ಕೈಗೊಂಡಿರುವ ಯುರೋಪಿಯನ್ ಒಕ್ಕೂಟದ ಏಳು ದೇಶಗಳೆಂದರೆ -ಜರ್ಮನಿ, ಬೆಲ್ಜಿಯಂ, ನೆದರ್ ಲ್ಯಾಂಡ್, ಲಕ್ಸಂಬರ್ಗ್, ಫ್ರಾನ್ಸ್, ಸ್ಪೇನ್ ಮತ್ತು ಪೋರ್ಚುಗಲ್

ಈ 'ಗಡಿರಹಿತ' ಯುರೋಪು, ಹಿಂದಿನ ಒಪ್ಪಂದದ ಪ್ರಕಾರ ಐದು ವರ್ಷಗಳ ಹಿಂದೆ ಜಾರಿಗೆ ಬರಬೇಕಾಗಿತ್ತು. ಐದು ವರ್ಷಗಳ ನಂತರವೂ ಭಾಗಶಃ ಜಾರಿಗೆ ಬಂದಿದೆ. ಇನ್ನೂ ಹಲವು ದೇಶಗಳು ಈ ಕ್ರಮಕೈಗೊಳ್ಳಲು ತಡಮಾಡುತ್ತಿವೆ. ಅನುಮಾನಿಸುತ್ತಿವೆ. ಈಗಾಗಲೇ 'ಗಡಿರಹಿತ' ಒಪ್ಪಂದ ಜಾರಿಗೆ ತಂದಿರುವ ದೇಶಗಳಲ್ಲೂ ತೀವ್ರ ಅನುಮಾನ, ಆತಂಕಗಳು ವ್ಯಕ್ತವಾಗಿವೆ. ಹೆಚ್ಚಿನ ಸಮಸ್ಯೆಗಳನ್ನು ತರಬಹುದು. ಕಾನೂನು ಬಾಹಿರ ವಲಸೆಗಾರರು ಇತ್ಯಾದಿ. ಆದರೆ ವ್ಯಾಪಾರ, ಪ್ರವಾಸೋದ್ಯಮ ಇತ್ಯಾದಿ ವಿಷಯದಲ್ಲಿ ಹೆಚ್ಚಿನ ಪ್ರಯೋಜನವಾಗಲಿಕ್ಕಿಲ್ಲ ಎಂಬ ಭಾವನೆ ಇದೆ. ಇದು ಯೋರೋಪಿನ ದುರ್ಬಲ ದೇಶಗಳಲ್ಲಿ ಸರ್ವೇಸಾಮಾನ್ಯವಾಗಿರುವ ಭಾವನೆ. ತಮ್ಮ ಸ್ವಂತಿಕೆ, ಸಂಸ್ಕೃತಿ ಯುರೋಪಿಯನ್ ಗಾಳಿಯಲ್ಲಿ ಕೊಚ್ಚಿಹೋದಿತೆಂಬ ಆತಂಕವಿದೆ. ಜರ್ಮನಿಯಲ್ಲಿ ಮಾತ್ರ ಈ ಕ್ರಮಗಳ ಬಗ್ಗೆ ಸ್ವಲ್ಪ ಮಟ್ಟಿಗೆ ಖುಷಿ, ಸಂಭ್ರಮ ಕಂಡು ಬಂದಿತಂತೆ. ಅಲ್ಲೂ ವೇತನ ಸ್ತರಗಳನ್ನು ಇಳಿಸಲು ಜರ್ಮನ್ ಗುತ್ತೇದಾರಿಗಳು ಬಳಸಬಹುದು ಎಂಬ ಆತಂಕ ಜರ್ಮನ್ ಕಾರ್ಮಿಕರಲ್ಲಿದೆ.

ಈ ಗಡಿ ಕ್ರಮಗಳನ್ನು ರದ್ದು ಮಾಡಿರುವುದು ಎಂದರೆ ಈ ಏಳು ದೇಶಗಳ ನಡುವೆ ಗಡಿಗಳಲ್ಲಿ ಪಾಸ್ ಪೋರ್ಟ್‌ಗಳನ್ನು ತಪಾಸಣೆ ಮಾಡುವುದಿಲ್ಲ. ಒಂದೇ ದೇಶ ಎಂಬಂತೆ ಸೀದಾ ಹೋಗಬಹುದು. ವಿಮಾನ ನಿಲ್ದಾಣಗಳಲ್ಲೂ ಈ ಏಳು ದೇಶಗಳ ನಡುವೆ ಸಂಚರಿಸುವ ವಿಮಾನ ಹಾರಾಟಗಳಲ್ಲಿ ಬಂದ ಪ್ರಯಾಣಿಕರಿಗೆ ಯಾವುದೇ ಪಾಸ್ ಪೋರ್ಟ್ ತಪಾಸಣೆ ಇರುವುದಿಲ್ಲ. ಇದರಿಂದಾಗಿ ಈ ದೇಶಗಳ ವಿಮಾನ ನಿಲ್ದಾಣಗಳಲ್ಲಿ ಇತರ ಆರು ದೇಶಗಳಿಂದ ಬರುವ ವಿಮಾನ ಹಾರಾಟಗಳಿಂದ ಬರುವ ಪ್ರಯಾಣಿಕರನ್ನು ಹಾಗೂ ಇರುವ ಪ್ರಯಾಣಿಕರಿಂದ ಪ್ರತ್ಯೇಕಿಸುವ ಕ್ರಮ ಕೈಗೊಳ್ಳಲಾಗಿದೆ. ಈ ರೀತಿ 'ಗಡಿರಹಿತ' ಯುರೋಪು ಹೊಸ ತಲೆ ನೋವುಗಳನ್ನು ಸೃಷ್ಟಿಸಿದೆ.

ಬ್ರಿಟನ್ 'ಗಡಿರಹಿತ' ಕ್ರಮ ಸೇರಲು ನಿರಾಕರಿಸಿದೆ. ಇದರಿಂದಾಗಿ ಐರ್ಲೆಂಡ್ (ಬ್ರಿಟನ್ ಮೂಲಕವೇ ಇತರ ದೇಶಗಳೊಂದಿಗೆ ಗಡಿ ಹೊಂದಿರುವುದರಿಂದ) ಸಹ ಈ ಕ್ರಮದಿಂದ ಹೊರಗುಳಿಯಬೇಕಾಗಿದೆ. ಗ್ರೀಸ್, ಇಟಲಿ, ಮತ್ತು ಆಸ್ಟ್ರಿಯಾ ಜೂನ್‌ನಲ್ಲಿ ಈ ಕ್ರಮಗಳಿಗೆ ಸೇರುವುದು ಎಂದು ಹೇಳಿವೆ. ಡೆನ್ಮಾರ್ಕ್, ಸ್ವೀಡನ್ ಹಾಗೂ ಫಿನ್ ಲ್ಯಾಂಡ್ ಈ ಬಗ್ಗೆ ಯಾವುದೇ ನಿರ್ಧಾರ ಕೈಗೊಂಡಿಲ್ಲ.

ಈ 'ಗಡಿರಹಿತ' ಯುರೋಪು ಜಾರಿಯಿಂದ ಸಾಮಾನ್ಯ ಜನತೆಗೆ ಗಡಿದಾಟುವಾಗ ಸ್ವಲ್ಪ ಸುಗಮವಾಗುತ್ತದೆ ಎಂದು ಬಿಟ್ಟರೆ ವಿಶೇಷ ಲಾಭವೇನಿಲ್ಲ. ಲಾಭವಿರವುದು ಯುರೋಪಿನ ಗುತ್ತೇದಾರಿಗಳಿಗೆ, ವ್ಯಾಪಾರಿಗಳಿಗೆ ಅದರಲ್ಲೂ ಜರ್ಮನಿಯಂತಹ ಪ್ರಬಲ ದೇಶಗಳಿಗೆ ದುರ್ಬಲ ದೇಶಗಳು ಕಳೆದುಕೊಳ್ಳುವುದೇ ಹೆಚ್ಚು.

-ಶರತ್‌ಚಂದ್ರ

ರಶ್ಯಾ-ಅಮೇರಿಕ ಸಂಬಂಧಗಳಲ್ಲಿ ವಿರಸ

ಅಮೇರಿಕದ ಎಲ್ಲಾ ಆಜ್ಞೆಗಳಿಗೆ 'ಜೀ ಹುಜೂರ್' ಎನ್ನುವ ರಶ್ಯನ್ ಅಧ್ಯಕ್ಷ ಯೆಲ್ಟ್‌ಸಿನ್‌ರ ಸರ್ಕಾರ ಸಹ 'ಊಹೂಂ' ಎನ್ನುವ ಸ್ಥಿತಿ ಬಂದಿದೆ. ಅಮೇರಿಕಕ್ಕೆ ಇದರಿಂದ ತೀವ್ರ ಇರಿಸು ಮುರುಸಾಗಿದೆ. ಇರಾನ್‌ಗೆ ರಶ್ಯಾ ಶಸ್ತ್ರಾಸ್ತ್ರ ಸರಬರಾಜು ಮಾಡುತ್ತಿದೆ. ಒಂದು ಅಣುಶಕ್ತಿ ಕೇಂದ್ರ ಸ್ಥಾಪಿಸಲು ಹಾಗೂ ಮೂರು ಕೇಂದ್ರಗಳನ್ನು ಸ್ಥಾಪಿಸಲು ನೆರವಾಗಲು ಒಂದು ಒಪ್ಪಂದ ಬಗ್ಗೆ ರಶ್ಯಾ ಇರಾನ್ ಜತೆ ಮಾತುಕತೆ ನಡೆಯುತ್ತಿದೆ. ಸುಮಾರು 80 ಕೋಟಿ ಡಾಲರುಗಳಷ್ಟೇ ಮೌಲ್ಯದ ಈ ವ್ಯಾಪಾರಕ್ಕೆ ರಶ್ಯನ್ ಸರ್ಕಾರ ಬಹಳಷ್ಟು ಪ್ರಾಧಾನ್ಯತೆ ಕೊಟ್ಟಿದೆ. ಈ ಒಪ್ಪಂದ ರದ್ದುಮಾಡಬೇಕೆಂಬ ಅಮೇರಿಕನ್ ಒತ್ತಾಯವನ್ನು ರಶ್ಯನ್ ಸರ್ಕಾರ ತಿರಸ್ಕರಿಸಬೇಕಾಗಿ ಬಂದಿದೆ. ಅಣ್ವಸ್ತ್ರ ಪ್ರಸರಣ ಒಪ್ಪಂದದ ಯಾವುದೇ ನಿಬಂಧನೆಗಳನ್ನು ಈ ಒಪ್ಪಂದ ಉಲ್ಲಂಘಿಸುವುದಿಲ್ಲ ಎಂಬುದು ರಶ್ಯಾದ ಅಂಬೋಣ. ಉತ್ತರ ಕೊರಿಯಾಕ್ಕೆ ಅಮೇರಿಕವೇ ಅಣುಶಕ್ತಿ ಕೇಂದ್ರಗಳನ್ನು ಕಟ್ಟಲು ಆಶ್ವಾಸನೆ ಕೊಟ್ಟಿರುವುದನ್ನು ರಶ್ಯಾ ನೆನಪಿದ್ದಂತೂ ಅಮೇರಿಕಕ್ಕೆ ಇನ್ನಷ್ಟು ಪಜೀತಿಗೆ ಸಿಕ್ಕಿಸಿದೆ. ಇರಾನ್ ಜತೆ ಅಣುಶಕ್ತಿ ಒಪ್ಪಂದ ಹಾಗೂ ಚೆಚೆನ್ಯಾದ ಮೇಲೆ ಆಕ್ರಮಣದ ವಿಷಯದಲ್ಲಿ ಭಿನ್ನಾಭಿಪ್ರಾಯದ ಆಧಾರದ ಮೇಲೆ ಸೆನೆಟ್ ಸದಸ್ಯರು ರಶ್ಯಾಕ್ಕೆ ಸಹಾಯಧನ ರದ್ದುಮಾಡುವ ಬೆದರಿಕೆಗೂ ರಶ್ಯಾ ಬಗ್ಗಿದಂತಿಲ್ಲ. ಅಮೇರಿಕಕ್ಕೆ ಬಗ್ಗಿ ಬಗ್ಗಿ ಸೋತು ಹೋಗಿ, ರಶ್ಯಾ ಸೆಟೆದು ನಿಂತಂತಿದೆ. ಆದರೆ ಐ.ಎಂ.ಎಫ್.-ವಿಶ್ವಬ್ಯಾಂಕ್ ನ ಎಂಜಲಿಗೆ ಕಾದಿರುವ ಯೆಲ್ಸಿನ್ ಸರ್ಕಾರ ಎಷ್ಟುದಿನ ಸೆಟೆದು ನಿಲ್ಲಬಲ್ಲುದು ಎಂದು ಕಾದು ನೋಡಬೇಕಾಗಿದೆ.

ರಶ್ಯಾದಲ್ಲಿ ವೋಡ್ಕಾದ ಹೆಚ್ಚಿದ ಹಾವಳಿ

ರಶ್ಯಾದಲ್ಲಿ ಗಂಡಸರಲ್ಲಿ ಕುಡುಕುತನದ ಸಮಸ್ಯೆ ಹಿಂದಿನಿಂದ ಇತ್ತು. ಆದರೆ ಇಂದಿನ ರಶ್ಯಾದಲ್ಲಿ ಆ ಸಮಸ್ಯೆ ತೀವ್ರವಾಗಿದೆ. ರಶ್ಯಾದ ವೋಡ್ಕಾ ಅತ್ಯಂತ ಪ್ರಬಲ ಸಾರಾಯಿ ಎಂದು ಕುಖ್ಯಾತವಾದದ್ದು. ಕುಡುಕುತನದಿಂದ ಬರುವ ರೋಗಗಳು, ಅಪಘಾತಗಳು, ಸಾವು-ನೋವುಗಳು ಕಳೆದ 5-6 ವರ್ಷಗಳು ಭಾರೀ ಪ್ರಮಾಣದಲ್ಲಿ ಹೆಚ್ಚಿವೆ. ರಶ್ಯಾದ ಗಂಡಸರ ಸರಾಸರಿ ಆಯಸ್ಸು ದೊಡ್ಡ ಪ್ರಮಾಣದಲ್ಲಿ, ವೋಡ್ಕಾದ ಕಾಣಿಕೆ ಸಹ ಮಹತ್ವದ್ದು ಎನ್ನಲಾಗಿದೆ. 1987ರಲ್ಲಿ ರಶ್ಯನ್ ಗಂಡಸರ ಸರಾಸರಿ ಆಯಸ್ಸು 65 ವರ್ಷ ಇದ್ದರು 1993ರಲ್ಲಿ 59ಕ್ಕೆ ಇಳಿದಿದೆ.

ಈಗಿನ ರಶ್ಯಾದಲ್ಲಿ ವೋಡ್ಕಾದ ಗುಣಮಟ್ಟವು ಮಾರುಕಟ್ಟೆ ಆರ್ಥಿಕತೆ ಸರಿಯಾಗಿ ಕುಸಿದಿದ್ದು, ವೋಡ್ಕಾ ವಿಷವಾಗಿ ಸತ್ತವರ ಸಂಖ್ಯೆ ಅಪಾಯಕಾರಿಯಾಗಿ ಏರುತ್ತಿದೆ. ಸರಾಸರಿ ವೋಡ್ಕಾ ಕುಡುಕುತನದ ಸಹ ವಿಪರೀತವಾಗಿ ಏರಿದೆ. 1987ರಲ್ಲಿ ಸರಾಸರಿ 3.9 ಲೀಟರ್ ವೋಡ್ಕಾ ತಲಾ ಬಳಕೆಯಿದ್ದರೆ, 1992ರಲ್ಲಿ 10.5 ಲೀಟರ್ ದಾಟಿತ್ತು. ಅದು ಹೆಚ್ಚುತ್ತಲೇ ಇದೆ. ಮಾರುಕಟ್ಟೆ ಉದಾರೀಕರಣದಿಂದ ಆಹಾರ ವಸ್ತುಗಳ ಬೆಲೆ ಏರುತ್ತಿದ್ದರೆ, ವೋಡ್ಕಾದ ಬೆಲೆ ಅನುಪಾತದ ಪ್ರಕಾರ ಕಡಿಮೆ ಇದೆ. ಅಲ್ಲದೆ ಆರ್ಥಿಕ ಬಿಕ್ಕಟ್ಟು, ಅಭದ್ರತೆ, ಸಾಮಾಜಿಕ ಅಶಾಂತಿ, ಆತಂಕ ಕುಡುಕುತನವನ್ನು ವಿಪರೀತ ಹೆಚ್ಚಿದೆ. ರಶ್ಯಾವನ್ನು ವೋಡ್ಕಾ ಮುಂದೆಂದೂ ಚೇತರಿಸಲಾಗದ ರೀತಿಯಲ್ಲಿ ನಾಶಮಾಡಬಹುದು ಎಂಬ ಭೀತಿ ಅವರಿಗಿದೆ.

ಇದೇ ರೀತಿ ಉಕ್ರೇನ್‌ನಲ್ಲಿ ಕೂಡಾ ಆಹಾರ ಸಮಸ್ಯೆಯಿಂದಾಗಿ ಸರಾಸರಿ ಆಯಸ್ಸು 2 ವರ್ಷದಷ್ಟು ಇಳಿದಿದೆ. 1990ರಿಂದ1994ರವರೆಗೆ ಜನಸಂಖ್ಯೆ 4 ಲಕ್ಷದಷ್ಟು ಕಡಿಮೆಯಾಗಿದೆ.

ವಿನ್ನಿ ಮಂಡೇಲಾ ಮಂತ್ರಿಮಂಡಲದಿಂದ ವಜಾ

ದಕ್ಷಿಣ ಆಫ್ರಿಕಾದ ಅಧ್ಯಕ್ಷ ನೆಲ್ಸನ್ ಮಂಡೇಲಾ ವಿನ್ನಿ ಮಂಡೇಲಾರನ್ನು ತಮ್ಮ ಮಂತ್ರಿಮಂಡಲದಿಂದ ವಜಾ ಮಾಡಿದ್ದಾರೆ. ವಿನ್ನಿ ಮಂಡೇಲಾ ಸರ್ಕಾರವನ್ನು ಬಹಿರಂಗವಾಗಿ ಟೀಕಿಸಿದ್ದಕ್ಕಾಗಿ ಹಾಗೂ ಹಲವಾರು ಹಗರಣಗಳಲ್ಲಿ ಸಂಶಯಕ್ಕೊಳಗಾಗಿರುವುದರಿಂದ ಆಕೆಯನ್ನು ವಜಾ ಮಾಡಲಾಗಿದೆ. ಆಕೆ ಸರ್ಕಾರದಲ್ಲಿ ಕಲೆ, ಸಂಸ್ಕೃತಿ, ವಿಜ್ಞಾನ ಹಾಗೂ ತಂತ್ರಜ್ಞಾನ ಇಲಾಕೆಯ ಉಪ ಮಂತ್ರಿಯಾಗಿದ್ದರು. ಸರ್ಕಾರಿ ಗೃಹ ನಿರ್ಮಾಣ ಕಾಮಗಾರಿಯೊಂದರಲ್ಲಿ ಅಕ್ರಮವಾಗಿದೆ ಎಂದು ಆಕೆಯ ಮೇಲೆ ಆಪಾದನೆ ಇತ್ತು. ಎ.ಎನ್.ಸಿ.ಯ ಮಹಿಳಾ ಲೀಗ್ ನಲ್ಲೂ ಆಕೆಯ ಸ್ವೇಚ್ಛಾಚಾರದ ಕ್ರಮಗಳು ಟೀಕೆಗೆ ಒಳಗಾಗಿದ್ದವು. ಆಕೆಯ ಕೆಲವು ನಿರ್ಧಾರಗಳ ವಿರುದ್ಧ ಪ್ರತಿಭಟಿಸಿ ಲೀಗ್‌ನ 10 ಸದಸ್ಯರು ರಾಜೀನಾಮೆ ನೀಡಿದ್ದರು. ಇದಲ್ಲದೆ ಅಧ್ಯಕ್ಷರು ಆಕೆಗೆ ದೇಶ ಬಿಟ್ಟು ಹೊರಗೆ ಪ್ರವಾಸಕ್ಕೆ ಹೋಗಬಾರದು ಎಂಬ ನಿರ್ಬಂಧ ಮುರಿದು ಆಕೆ ವಿದೇಶ ಪ್ರವಾಸಕ್ಕೆ ತೆರಳಿದ್ದರು.

ಈ ಎಲ್ಲಾ ಅಶಿಸ್ತು, ಹಗರಣಗಳಿಂದಾಗಿ ಅಧ್ಯಕ್ಷ ಮಂಡೇಲಾ ಆಕೆಯನ್ನು ವಜಾ ಮಾಡುವ ನಿರ್ಧಾರ ಕೈಗೊಳ್ಳಬೇಕಾಯಿತು. ಅಧ್ಯಕ್ಷ ಮಂಡೇಲಾ ಈ ನಿರ್ಧಾರಕ್ಕೆ ವ್ಯಾಪಕ ಬೆಂಬಲ ದೊರಕಿದೆ. ನೆಲ್ಸನ್ ಮಂಡೇಲಾ, ವಿನ್ನಿ ಮಂಡೇಲಾರಿಂದ ಈಗಾಗಲೇ ವಿವಾಹ ವಿಚ್ಛೇಧನೆ ಪಡೆದಿದ್ದಾರೆ ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಪತಿಯಿಂದ ದೀರ್ಘ ವಿರಹ, ವರ್ಣಭೇದದ ಸರ್ಕಾರ ಆಕೆಯ ಮೇಲೆ ಹೇರಿದ ಹಲವಾರು ಮಾನಸಿಕ ಒತ್ತಡ, ಚಿತ್ರಹಿಂಸೆಗಳ ಫಲವಾಗಿ ಆಕೆ ಒಂದು ರೀತಿಯ ಮನೋರೋಗದಿಂದ ನರಳುತ್ತಿದ್ದಾರೆ ಎನ್ನಲಾಗಿದೆ. ಇದೇ ಆಕೆಯ ಈ ವಿಚಿತ್ರ ವರ್ತನೆಗೆ ಕಾರಣ ಎನ್ನಲಾಗಿದೆ.

ಜಗತ್ತಿನ ನಾಲ್ವರು ಬಡವರಲ್ಲಿ ಮೂವರು ಏಷ್ಯಾದಲ್ಲಿ

ESCAP ಎಂಬ ವಿಶ್ವ ಸಂಸ್ಥೆಯ ಸಂಘಟನೆ (Economic and Social Commission for ASIA and Pacific -ಏಷ್ಯಾ ಹಾಗೂ ಫೆಸಿಫಿಕ್ ಪ್ರದೇಶದ ಆರ್ಥಿಕ ಸಮಾಜಿಕ ಕಮೀಷನ್) ಬಡತನದ ಬಗ್ಗೆ ತಯಾರಿಸಿದ ವರದಿ ಏಷ್ಯಾದಲ್ಲಿ ಬಡತನದ ಬಗ್ಗೆ ದಂಗು ಬಡಿಸುವ ಹಲವು ಸಂಗತಿಗಳನ್ನು ಬೆಳಕಿಗೆ ತಂದಿದೆ.

ಜಗತ್ತಿನ ನಾಲ್ವರಲ್ಲಿ ಮೂವರು ಬಡವರು ಏಷ್ಯಾದಲ್ಲಿದ್ದಾರೆ (ಸರಾಸರಿ ಆದಾಯ ದಿನಕ್ಕೆ ಸುಮಾರು 3 ರೂ.ಗಿಂತ ಕಡಿಮೆ ಇರುವವರು ಬಡವರು ಎಂಬ ಆಧಾರದ ಮೇಲೆ)

ಬಾಂಗ್ಲಾದೇಶ ಅತ್ಯಂತ ಹೆಚ್ಚು ಬಡತನ ಇರುವ ದೇಶ. ಶೇಕಡಾ 86 ಇತರ ಹೆಚ್ಚು ಬಡತನ ಇರುವ ದೇಶಗಳೆಂದರೆ ನೇಪಾಳ ಶೇಕಡಾ 66, ಭಾರತ ಶೇಕಡಾ 50, ಪಾಕಿಸ್ತಾನ ಶೇಕಡಾ 50, ಇಂಡೋನೇಷ್ಯಾ -ಶೇಕಡಾ ೩೮

ಬಡತನದ ಪ್ರಮಾಣ ಹಳ್ಳಿಗಳಲ್ಲಿ ಹೆಚ್ಚು, ಬಡವರಲ್ಲಿ ಶೇಕಡಾ 80 ಹಳ್ಳಿಗಳಲ್ಲಿ ವಾಸಿಸುವವರು. ಬಡವರಲ್ಲಿ ಶೇಕಡಾ 60ಕ್ಕಿಂತಲೂ ಹೆಚ್ಚು ಮಹಿಳೆಯರು.

ಏಷ್ಯಾದಲ್ಲಿ 10-14 ಪ್ರಾಯದ ಮಕ್ಕಳಲ್ಲಿ ಶೇಕಡಾ 18 ಹೊಟ್ಟೆ ಪಾಡಿಗೆ ದುಡಿಯುತ್ತಿದ್ದಾರೆ. ದಕ್ಷಿಣ ಏಷ್ಯಾದಲ್ಲಿ ಉತ್ತಮ ಆಹಾರದ ಕೊರತೆಯಿಂದ ಬಳಲುವವರ ಪ್ರಮಾಣ ಶೇಕಡಾ 60. ಜಗತ್ತಿನ ಎಲ್ಲಾ ದೇಶಗಳ ವಿಕಾಸಶೀಲ ದೇಶಗಳಿಗೆ ಈ ಸರಾಸರಿ ಶೇಕಡಾ 30ಕ್ಕಿಂತ ಏಷ್ಯಾದ ಸರಾಸರಿ ಅತಿ ಹೆಚ್ಚು. ಏಷ್ಯಾದಲ್ಲಿ ಬೀದಿ ಮಕ್ಕಳ ಸಂಖ್ಯೆ ಮೂರು ಕೋಟಿಯಷ್ಟು. ಹತ್ತುಲಕ್ಷ ಮಕ್ಕಳು ಸೂಳೆಗಾರಿಕೆಯ ವಿಷಚಕ್ರದಲ್ಲಿ ಸಿಕ್ಕಿಬಿದ್ದಿದ್ದಾರೆ. ಇವೆಲ್ಲ ಅಧಿಕೃತ ಅಂಕೆ ಸಂಖ್ಯೆಗಳ ನಿಜವಾದ ಸಂಖ್ಯೆ ಇನ್ನೂ ಹೆಚ್ಚು.

ಜಪಾನಿ ಪೋಲೀಸ್ ಮುಖ್ಯಸ್ಥನ ಮೇಲೆ ಗುಂಡು

ಜಪಾನ್‌ನ 2.6 ಲಕ್ಷ ಪೋಲೀಸ್ ಪಡೆಯ ಮುಖ್ಯಸ್ಥರ ಮೇಲೆ ಗುಂಡು ಹಾರಿಸಿ ಅವರನ್ನು ಇತ್ತೀಚೆಗೆ ತೀವ್ರವಾಗಿ ಗಾಯಗೊಳಿಸಲಾಗಿದೆ. ಅವರು ತೀವ್ರವಾಗಿ ಗಾಯಗೊಂಡಿದ್ದರೂ, ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎನ್ನಲಾಗಿದೆ. ಟೋಕ್ಯೋದ ಭೂಗತ ರೈಲುಗಳಲ್ಲಿ ವಿಷಾನಿಲ ಆಕ್ರಮಣದ ನಂತರ ಈ ಆಕ್ರಮಣ ಜಪಾನಿನ ಜನತೆಯ ಆತಂಕಕ್ಕೆ ಕಾರಣವಾಗಿದೆ. ಈ ಎರಡೂ ಒಂದೇ ಗುಂಪಿನ ಕೆಲಸವೇ ಎಂದು ತನಿಖೆ ನಡೆಸಲಾಗುತ್ತಿದೆ. ಜಂ ಶಿನ್ ರಿಕ್ಯೋ ಎಂಬ ಧಾರ್ಮಿಕ ಪಂಥ ಹಾಗೂ ಜಪಾನಿನ ಭೂಗತ ಮಾಫಿಯಾ ಸಂಶಯಕ್ಕೆ ಒಳಗಾದವರಲ್ಲಿ ಪ್ರಮುಖರು. ಸಾಮಾನ್ಯವಾಗಿ ಜಪಾನಿನ ಮಾಫಿಯಾ ಉನ್ನತ ಅಧಿಕಾರಿಗಳ ಹತ್ಯೆಗೆ ಪ್ರಯತ್ನಿಸುವುದಿಲ್ಲ. ಆದರೆ ಈ ಪೋಲೀಸ್ ಮುಖ್ಯಸ್ಥ ಭೂಗತ ಮಾಫಿಯಾದ ವಿರುದ್ಧ ಕಠಿಣ ಕ್ರಮ ಕೈಗೊಂಡ ಹೆಸರಿರುವಾತ.

ಕೋಮುವಾದದ ವಿರುದ್ಧ ಸರ್ವತೋಮುಖ ಹೋರಾಟ

ಪುಟ 1 ರಿಂದ

...ಗಾವಕಾಶಗಳು ನಾಶವಾಗುತ್ತಿದ್ದರೆ, ಗುತ್ತೇದಾರಿಗೆ, ವಿದೇಶೀ ಬಂಡವಾಳಕ್ಕೆ ಸಣ್ಣ ಪ್ರಮಾಣದ ಉದ್ದಿಮೆಗಳ ವಲಯದಲ್ಲಿ ನುಗ್ಗಲೂ ಅವಕಾಶ ನೀಡಿದ್ದರಿಂದ ಅಲ್ಲೂ ಹಲವಾರು ಘಟಕಗಳು ಮುಚ್ಚಿ ನಿರುದ್ಯೋಗಕ್ಕೆ ಕಾಣಿಕೆ ನೀಡಿವೆ. ಸಣ್ಣ ಉದ್ದಿಮೆದಾರರನ್ನು ಈ ನೀತಿಗಳ ದುಷ್ಪರಿಣಾಮಗಳು ತಟ್ಟಿವೆ.

ಕೃಷಿ ವಲಯವನ್ನು ದೊಡ್ಡ ಬಂಡವಾಳಶಾಹಿಗಳಿಗೆ, ಬಹುರಾಷ್ಟ್ರೀಯ ಕಂಪನಿಗಳಿಗೆ ತೆರೆದಿಟ್ಟಿರುವುದರಿಂದ ಭೂಮಿತಿ ಶಾಸನಗಳನ್ನು ದುರ್ಬಲಗೊಳಿಸುವ ಪ್ರಯತ್ನ ಅಧಿಕೃತವಾಗಿಯೇ ಆರಂಭವಾಗಿದೆ. ಕೋಟ್ಯಾಂತರ ಭೂಹೀನರನ್ನು ಉತ್ಪಾದಕ ಪ್ರಕ್ರಿಯೆಗೆ ಸೆಳೆದು ಉತ್ಪಾದಕ ಶಕ್ತಿಗಳ ಮೇಲಿನ ಅಡೆ-ತಡೆಗಳನ್ನು ನಿವಾರಿಸಲು ಏಕೈಕ ದಾರಿಯಾದ ಭೂಸುಧಾರಣೆಗಳ ಅನುಷ್ಠಾನ ಮಾಡುವ ಬದಲು ಅವನ್ನು ದುರ್ಬಲಗೊಳಿಸುವ ಪ್ರವೃತ್ತಿ ಕಾಣುತ್ತಿದೆ.

ಉದಾರೀಕರಣದಿಂದ ಸೂಲು ಮತ್ತಿತರ ...ಸಾಮಗ್ರಿಗಳ ಬೆಲೆಯೇ ಕೈಮಗ್ಗ, ವಿದ್ಯುತ್ ಮಗ್ಗಗಳ ಕಾರ್ಮಿಕರು ತೀವ್ರ ಸಂಕಟಕ್ಕೊಳಗಾಗಿದ್ದಾರೆ. ಉದ್ಯೋಗಾವಕಾಶಗಳ ವರ್ಗಾವಣೆಯಿಂದ ಅತೀ ಹೆಚ್ಚು ತೊಂದರೆಯಾಗಿರುವುದು ಅಸಂಘಟಿತ ವಲಯದಲ್ಲಿರುವ ಮಹಿಳಾ ಕಾರ್ಮಿಕರಿಗೆ ಬಹುರಾಷ್ಟ್ರೀಯ ಕಂಪೆನಿಗಳು ಆಳಸಮುದ್ರದಲ್ಲಿ ಕೆಲಸಮಾಡುವ ಟ್ರಾಲರ್‌ಗಳನ್ನು ಬಳಸಲಾರಂಭಿಸಿರುವುದರಿಂದ ಸಾವಿರಾರು ಮೀನುಗಾರರಿಗೂ ಬೆದರಿಕೆ ಬಂದಿದೆ. ಈರೀತಿ ಆರ್ಥಿಕ ನೀತಿಗಳು ಒಂದು ಸ್ವಾವಲಂಬೀ ಸ್ವತಂತ್ರ ಅಭಿವೃದ್ಧಿಯ ನಮ್ಮ ಸಾಮರ್ಥ್ಯದ ಮೇಲೆ ಸರ್ವತೋಮುಖವಾಗಿ ಧಾಳಿಯಿಟ್ಟಿವೆ.

ಆದ್ದರಿಂದ ಸಿಪಿಐ(ಎಂ) ಮಹಾಧಿವೇಶನ ಸಾರ್ವಜನಿಕ ವಲಯದ ರಕ್ಷಣೆ ನಡೆಸಬೇಕು, ಶ್ರೀಮಂತರ ಮೇಲೆ ತೆರಿಗೆ ಹಾಕಿ, ತೆರಿಗೆ ವಂಚನೆ ತಡೆದು ಸಂಪನ್ಮೂಲಗಳನ್ನು ಎತ್ತಬೇಕು, ಅಂತರ್ರಚನೆಗಳು ಮತ್ತು ಸಾಮಾಜಿಕ ಕಲ್ಯಾಣವಲಯಗಳಲ್ಲಿ ಸರಕಾರೀ ಬಂಡವಾಳ ಹೂಡಿಕೆ ಹಾಗೂ ಖರ್ಚನ್ನು ಹೆಚ್ಚಿಸಬೇಕು, ಅತೀ ಅವಶ್ಯಕ ಉಚ್ಚ ತಂತ್ರಜ್ಞಾನ ಹಾಗೂ ರಾಷ್ಟ್ರೀಯ ಆದ್ಯತೆಗಳಿಗೆ ಅನುಗುಣವಾಗಿ ವಿದೇಶೀ ಬಂಡವಾಳ ಹೂಡಿಕೆಯ ಬಗ್ಗೆ ನೀತಿಯನ್ನು ನಿರ್ಧರಿಸಬೇಕು, ಭೂಸುಧಾರಣೆಗಳನ್ನು, ಕೃಷಿ ಕೂಲಿಕಾರರ ಒಂದು ಕೇಂದ್ರ ಶಾಸನದ ಮೂಲಕ ಕನಿಷ್ಠ ಕೂಲಿಯನ್ನು ತುರ್ತಾಗಿ ಜ್ಯಾರಿಗೊಳಿಸಬೇಕು, ರೇಷನ್ ವ್ಯವಸ್ಥೆಯನ್ನು 14 ಜೀವನಾವಶ್ಯಕ ಸಾಮಗ್ರಿಗಳನ್ನು ಪೂರೈಸುವಂತೆ ಎತ್ತರಿಸಬೇಕು, ಸಾರ್ವಜನಿಕ ಶಿಕ್ಷಣ ಮತ್ತು ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಹೆಚ್ಚು ಖರ್ಚು ಮಾಡಬೇಕು ಹಾಗೂ ಅಧಿಕಾರಗಳನ್ನು ರಾಜ್ಯಗಳಿಗೆ, ಸ್ಥಳೀಯ ಸಂಸ್ಥೆಗಳಿಗೆ ವಿಕೇಂದ್ರೀಕರಿಸಬೇಕು ಎಂದು ಕರೆ ನೀಡಿದೆ.

ಕಳೆದ ನಾಲ್ಕು ವರ್ಷಗಳಲ್ಲಿ ಆರ್ಥಿಕ ನೀತಿಗಳ ವಿರುದ್ಧ ಒಂದು ದೇಶವ್ಯಾಪಿ ಆಂದೋಲನ ಬೆಳೆದಿದೆ. ಕಾರ್ಮಿಕ ವರ್ಗ ನಾಲ್ಕು ಸಾರ್ವತ್ರಿಕ ಮುಷ್ಕರಗಳು ಮತ್ತು ವಿವಿಧ ವಲಯಗಳೂ ಅಸಂಖ್ಯ ಸ್ಥಳೀಯ ಹೋರಾಟಗಳನ್ನು ನಡೆಸಿದೆ. ಎಡಪಕ್ಷಗಳ ಕಾನೂನುಭಂಗ ಚಳುವಳಿ ಈ ಹೊಸ ಆರ್ಥಿಕ ನೀತಿಗಳ ವಿರುದ್ಧ ಪ್ರತಿರೋಧಕ್ಕೆ ಇನ್ನಷ್ಟು ಉತ್ತೇಜನ ನೀಡಿದೆ. ಎಡಪಕ್ಷಗಳು ಮತ್ತು 'ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ' ಈ ನೀತಿಗಳ ವಿರುದ್ಧ ಜನರ ಪ್ರತಿರೋಧ ಹೆಚ್ಚುವ ದೊಡ್ಡ ಕೊಡುಗೆ ನೀಡಿವೆ. ಇದರಿಂದ ಕಾಂಗ್ರೆಸ್(ಐ)ನ್ನು ಜನ ದೂರ ಸರಿಸುತ್ತಿದ್ದಾರೆ. ಇತ್ತೀಚಿನ ಚುನಾವಣೆಗಳಲ್ಲಿ ಕಾಂಗ್ರೆಸ್(ಐ)ನ ಸೋಲು ಜನಗಳಲ್ಲಿ ವ್ಯಾಪಕವಾಗಿರುವ ಅಸಂತೃಪ್ತಿಯ ಸಂಕೇತ ಎಂದು ಮಹಾಧಿವೇಶನ ಹೇಳಿದೆ.

ಆರ್ಥಿಕ ನೀತಿಗಳ ವಿರುದ್ಧ ಆಂದೋಲನವನ್ನು ತೀವ್ರಗೊಳಿಸಲು ಸನ್ನದ್ಧರಾಗಿ ಎರಡು ಇಡೀ ಪಕ್ಷಕ್ಕೆ 15ನೇ ಮಹಾಧಿವೇಶನ ಕರೆ ನೀಡಿದೆ. ದುಡಿಯುವ ಜನಗಳ ಮೇಲೆ ಒಂದೊಂದು ಹಲ್ಲೆ ನಡೆಸಿದಾಗಲೂ ಆರ್ಥಿಕ ನೀತಿಗಳ ಒಂದೊಂದು ಪ್ರತಿಕೂಲ ಪರಿಣಾಮವಾದಾಗಲೂ ಅವುಗಳ ವಿರುದ್ಧ ಜನರನ್ನು ಹೋರಾಟಕ್ಕೆ ಅಣಿನೆರೆಸಲು ನಮ್ಮ ಪಕ್ಷ ಬುಡದಿಂದ ಹಿಡಿದು ಅಖಿಲ ಭಾರತ ಮಟ್ಟದವರೆಗೂ ನೇತೃತ್ವ ವಹಿಸಬೇಕು. ಪ್ರತಿಯೊಂದು ಆರ್ಥಿಕ ವಲಯದಲ್ಲೂ, ಉದ್ದಿಮೆಯಲ್ಲೂ ಈನೀತಿಗಳನ್ನು ಹಿಮ್ಮೆಟ್ಟಿಸುವ ಐಕ್ಯ ಹೋರಾಟಗಳನ್ನು ಕೈಗೆತ್ತಿಕೊಳ್ಳಬೇಕು. ಕೃಷಿಕೂಲಿಕಾರರು ಮತ್ತು ರೈತಾಪಿ ಜನಗಳನ್ನು ಈ ಆಂದೋಲನಕ್ಕೆ ಸೆಳೆಯಲು ವಿಶೇಷ ಪ್ರಯತ್ನ ನಡೆಸಬೇಕು. ಇಂದಿನ ಸಂದರ್ಭದಲ್ಲಿ ಕೃಷಿ ಕಾರ್ಮಿಕರಿಗೆ ಭೂಮಿ ಮತ್ತು ಹೆಚ್ಚಿನ ಕೂಲಿಗಾಗಿ ಹೋರಾಟ ಅತ್ಯಂತ ನಿರ್ಣಾಯಕವಾಗುತ್ತದೆ. ಏಕೆಂದರೆ ಹೊಸ ಆರ್ಥಿಕನೀತಿಗಳು ಅತೀ ಹೆಚ್ಚಾಗಿ ತಟ್ಟಿರುವುದು ಗ್ರಾಮೀಣ ಬಡವರನ್ನು.

ಸಿಪಿಐ(ಎಂ) ಮತ್ತು ಎಡಪಕ್ಷಗಳು ದೇಶವ್ಯಾಪಿ ಪ್ರತಿರೋಧ ಆಂದೋಲನವನ್ನು ತೀವ್ರಗೊಳಿಸುವ ಕ್ರಮ ಕೈಗೊಳ್ಳಬೇಕು, ಎಡಶಕ್ತಿಗಳನ್ನು ಜಂಟಿ ಹೋರಾಟಗಳಲ್ಲಿ ಒಗ್ಗಟ್ಟಾಗಿಸುವಲ್ಲಿ ನೇತೃತ್ವ ನೀಡಬೇಕು ಎಂದು 15ನೇ ಮಹಾಧಿವೇಶನ ಕರೆ ನೀಡಿದೆ.

ನಮ್ಮ ಸ್ವತಂತ್ರ ಚಟುವಟಿಕೆ ದೇಶಪ್ರೇಮಿ ಪ್ರಜಾಪ್ರಭುತ್ವ ಶಕ್ತಿಗಳ ಸಾಧ್ಯವಾದಷ್ಟು ವ್ಯಾಪಕ ಐಕ್ಯತೆಯನ್ನು ಬೆಸೆಯಲು ನಮ್ಮ ದೇಶದ ಆರ್ಥಿಕ ಹಾಗೂ ರಾಜಕೀಯ ಸಾರ್ವಭೌಮತೆಯನ್ನು ರಕ್ಷಿಸುವ ಹೋರಾಟದಲ್ಲಿ ಬಂಡವಾಳಶಾಹಿ ಪಕ್ಷಗಳನ್ನು ಅನುಸರಿಸುತ್ತಿರುವ ಜನಸಮೂಹಗಳನ್ನು ಅಣಿನೆರೆಸಲು ಶಕ್ತವಾಗಬೇಕು ಎಂದು ಹೇಳಿರುವ 15ನೇ ಮಹಾಧಿವೇಶನ ರಾವ್ ಸರಕಾರದ ನೀತಿಗಳು ಜನರಿಗೆ, ದೇಶಕ್ಕೆ ಬಾಧಕ ತರುವಂತವುಗಳು, ಅವನ್ನು ನಿಲ್ಲಿಸಬೇಕು, ಬದಲಿಸಲೇ ಬೇಕು ಎಂದು ಹೇಳಿದೆ.

KRNM/BGS-405 MAG (2) PRB DECR 319-78/79
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462
ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27

ಲೆನಿನರ 125ನೇ ಜನ್ಮ ವಾರ್ಷಿಕೋತ್ಸವ ಆಚರಿಸಲು ಕರೆ

ಈ ವರ್ಷದ ಏಪ್ರಿಲ್ 22ರಿಂದ ಲೆನಿನ್‌ರ ಜನ್ಮದ 125ನೇ ವಾರ್ಷಿಕೋತ್ಸವ ಆರಂಭವಾಗುತ್ತದೆ. ಇದನ್ನು ತಕ್ಕ ರೀತಿಯಲ್ಲಿ ಆಚರಿಸಬೇಕೆಂದು 15ನೇ ಮಹಾಧಿವೇಶನ ಇಡೀ ಪಕ್ಷಕ್ಕೆ ಕರೆ ನೀಡಿದೆ. ನಿರ್ಣಯದ ಪೂರ್ಣ ಪಾಠ ಹೀಗಿದೆ.

ಲೆನಿನ್‌ರ ಬೋಧನೆಗಳು ಚಾರಿತ್ರಿಕ ಮಹತ್ವದವುಗಳು. ಅವು ಇಂದು ಪ್ರಸ್ತುತವಾಗಿರುವ ಬೋಧನೆಗಳು.

ಮಾರ್ಕ್ಸ್‌ವಾದದ ಬಾವುಟವನ್ನು ಮುಂದಕ್ಕೊಯ್ಯುತ್ತಾ ಅವರು ಹೊಸ ಬೆಳವಣಿಗೆಗಳ ಸಂದರ್ಭದಲ್ಲಿ ಅತ್ಯಂತ ಸೃಜನಾತ್ಮಕ ಹಾಗೂ ವೈಜ್ಞಾನಿಕ ರೀತಿಯಲ್ಲಿ ಬೆಳೆಸಿ ಶ್ರೀಮಂತಗೊಳಿಸಿದರು. ಸಾಮ್ರಾಜ್ಯಶಾಹಿಯ ಪಾಂಡಿತ್ಯ ಪೂರ್ಣ ವಿಶ್ಲೇಷಣೆಯ ಆಧಾರದ ಮೇಲೆ ಹೊಸ ಯುಗದಲ್ಲಿ ಕ್ರಾಂತಿಕಾರಿ ಹೋರಾಟ ಇಡೀ ಕಣಕ್ಷೋಟವನ್ನು ವರ್ಣಿಸಿದರು. ಮಾನವ ಚಟುವಟಿಕೆಯ, ಜ್ಞಾನದ ಪ್ರತಿಯೊಂದು ಆಯಾಮವನ್ನೂ ಆವರಿಸಿದ ಲೆನಿನ್‌ರ ಸೈದ್ಧಾಂತಿಕ ಕೃತಿಗಳ ಹರಹು ಎಲ್ಲಾ ಕ್ರಾಂತಿಗಳಿಗೆ ಒಂದು ವಿಶಾಲ ಭಂಡಾರ.

ಆಧುನಿಕ ಸಮಾಜದ ಮತ್ತು ಇಡೀ ಮಾನವ ಕುಲದ ನೇತಾರನಾಗಿ ಕಾರ್ಮಿಕ ವರ್ಗ ಮೂಡಿಬಂದುದನ್ನು ತೋರಿಸಿದ ವಿಶ್ವ ಇತಿಹಾಸದ ಹೊಸ ಘಟ್ಟವನ್ನು ಸಾರಿದ ಮಹಾನ್ ಅಕ್ಟೋಬರ್ ಸಮಾಜವಾದಿ ಕ್ರಾಂತಿಯನ್ನು ವಿಜಯದೆಡೆಗೆ ಒಯ್ದ ಅತ್ಯಂತ ಶ್ರೇಷ್ಠ ಕ್ರಾಂತಿಕಾರಿ ಎಂದು ಲೆನಿನ್ ಸದಾ ಸ್ಮರಣೀಯರು.

ಸೋವಿಯತ್ ಒಕ್ಕೂಟದಲ್ಲಿ ಸಮಾಜವಾದಿ ಪ್ರಭುತ್ವವನ್ನು, ಕಾರ್ಮಿಕ ವರ್ಗದ ನೇತೃತ್ವದ ಸಮಾಜವನ್ನು ಕಟ್ಟುವಲ್ಲಿ ಲೆನಿನ್‌ರ ಆ ಮೂಲ್ಯ ಕಾಣಿಕೆ ಸಮಾಜವಾದಿ ಪರಿವರ್ತನೆಗಾಗಿ ಹೋರಾಡುತ್ತಿರುವ ಎಲ್ಲಾ ಕಮ್ಯುನಿಸ್ಟರಿಗೂ ಅತ್ಯಂತ ಪ್ರಸ್ತುತ.


ಲೆನಿನ್ ಕಾರ್ಮಿಕ ವರ್ಗದ ಅಂತರಾಷ್ಟ್ರೀಯತೆಯ ಚೇತನದ ಮೂರ್ತ ಸ್ವರೂಪರು. ಅಂತರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲನದ ಬೆಳವಣಿಗೆ ಹಾಗೂ ಮುನ್ನಡೆಗೆ ಅವರ ಕೊಡುಗೆ ಯುಗಾಂತರಕಾರಿ ಮಹತ್ವವುಳ್ಳದ್ದು. ಕಮ್ಯುನಿಸ್ಟ್ ಅಂತರಾಷ್ಟ್ರೀಯ ಸ್ಥಾಪನೆಗೊಂಡದ್ದು ಅವರ ನಾಯಕತ್ವ ಹಾಗೂ ಮಾರ್ಗದರ್ಶನದಲ್ಲಿ. ನಂತರ ಇದು ಜಗತ್ತಿನಾದ್ಯಂತ ಕಮ್ಯುನಿಸ್ಟ್ ಪಕ್ಷಗಳು ರಚನೆಗೊಂಡು ಬಲಗೊಳ್ಳಲು ದಾರಿ ಮಾಡಿಕೊಟ್ಟಿತು.

ಮಾರ್ಕ್ಸ್‌ವಾದವನ್ನು ಕ್ರಾಂತಿಕಾರಿ ಹೋರಾಟದ ಮೂರ್ತ ಪರಿಸ್ಥಿತಿಗಳಿಗೆ ವೈಜ್ಞಾನಿಕವಾಗಿ ಅನ್ವಯಿಸುತ್ತಾ ಅದರ ಆಧಾರದ ಮೇಲೆ ಕ್ರಾಂ ತಿಕಾರಿ ಪ್ರಕ್ರಿಯೆಯ ಆಳವಾದ ಜ್ಞಾನದಿಂದ ಲೆನಿನ್ ಜಗತ್ತಿನಲ್ಲಿ ಹಾಗೂ ಹಲವು ದೇಶಗಳಲ್ಲಿ ಕಮ್ಯುನಿಸ್ಟ್ ಆಂದೋಲನದ ಕಾರ್ಯತಂತ್ರ ಹಾಗೂ ಕಾರ್ಯನೀತಿಗಳನ್ನು ಶ್ರೀಮಂತಗೊಳಿಸಿದರು.

ಜಗತ್ತಿನ ದಮನಕ್ಕೊಳಗಾದ ದೇಶಗಳ ಹಾಗೂ ಜನಗಳ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟದ ಮಹತ್ವ, ಸಾರವನ್ನು ಹಾಗೂ ವಸಾಹತುಶಾಹಿ-ವಿರೋಧಿ ಹೋರಾಟಗಳು ಮತ್ತು ಕಾರ್ಮಿಕ ವರ್ಗದ ಹೋರಾಟಗಳ ನಡುವಿನ ಕೊಂಡಿಯನ್ನು ಕುರಿತಂತೆ ಲೆನಿನ್‌ರ ಆಳವಾದ ವಿಶ್ಲೇಷಣೆ ವಿಮೋಚನಾ ಹೋರಾಟಗಳ ಯಶಸ್ಸು ಹಾಗೂ ಬೃಹತ್ ಮುನ್ನಡೆಗೆ ಸ್ಫೂರ್ತಿ ಹಾಗೂ ಮಾರ್ಗದರ್ಶನ ನೀಡಿತು.

ಕ್ರಾಂತಿಕಾರಿ ಹೋರಾಟದ ಮುನ್ನಡೆ ಹಾಗೂ ಯಶಸ್ಸಿಗೆ ಅಗತ್ಯವಾದ ಕ್ರಾಂತಿಕಾರಿ ಕಾರ್ಮಿಕ ವರ್ಗದ ಪಕ್ಷಗಳನ್ನು ಕಟ್ಟುವಲ್ಲಿ ಲೆನಿನ್‌ರು ನೀಡಿದ ಅಭೂತಪೂರ್ವ ಮುಖಂಡತ್ವ ಹಾಗ ಮಾರ್ಗದರ್ಶನ ಮತ್ತು ಕಮ್ಯುನಿಸ್ಟ್ ಪಕ್ಷಗಳ ಮೂಲಭೂತ ಸಂಘಟನಾ ನೀತಿಗಳ ಬಗ್ಗೆ ಅವರ ವಿವರಣೆ ಚಾರಿತ್ರ ಮಹತ್ವ ಹಾಗೂ ಸಮಂಜಸತೆ ಉಳ್ಳದ್ದು.

15ನೇ ಮಹಾಧಿವೇಶನ ಪಕ್ಷ ಈ ವಾರ್ಷಿಕೋತ್ಸವವನ್ನು ಅತ್ಯಂತ ಪರಿಣಾಮಕಾರಿ ರೀತಿಯಲ್ಲಿ ಮಾರ್ಕ್ಸ್‌ವಾದ-ಲೆನಿನ್‌ವಾದದ ಸಾರಭೂತ ಹಾಗೂ ಮೂಲಭೂತ ಭೋದನೆಗಳ ಬಗ್ಗೆ ಇಡೀ ಪಕ್ಷಕ್ಕೆ ಶಿಕ್ಷಣ ಹಾಗೂ ಮರುಶಿಕ್ಷಣ ನೀಡುವ ಉದ್ದೇಶದಿಂದ ಆಚರಿಸಬೇಕೆಂದು ಪ್ರೇರೇಪಿಸುತ್ತದೆ. ಈ ಮೂಲಕ ಸಿಪಿಐ(ಎಂ) ಸೈದ್ಧಾಂತಿಕವಾಗಿ, ರಾಜಕೀಯವಾಗಿ ಹಾಗೂ ಸಂಘಟನಾತ್ಮಕವಾಗಿ ಹೆಚ್ಚು ಐಕ್ಯತೆಯಿಂದ ಕೂಡಿದ ಬಲಿಷ್ಠವಾಗಿ ಹಾಗೂ ಸಾಮೂಹಿಕ ಹೋರಾಟಗಳಲ್ಲಿ ಹೆಚ್ಚು ಪುಟಿಗೊಳ್ಳುವಂತಾಗಬೇಕು; ಭಾರತದ ಶ್ರಮಜೀವಿ ಜನತೆಯ ಕ್ರಾಂತಿಕಾರಿ ಮುಂಚೂಣಿಯಾಗಿ ತನ್ನ ಚಾರಿತ್ರಿಕ ಪಾತ್ರವನ್ನು ನೆರವೇರಿಸಲು ಶಕ್ತವಾಗಬೇಕು.



ಫ್ಯಾಸಿಸಂ ಮೇಲಿನ ವಿಜಯದ 50ನೇ ವಾರ್ಷಿಕೋತ್ಸವ ಆಚರಿಸಲು ಕರೆ

ಮೇ 9, 1995ರಂದು ಯುರೋಪಿನಲ್ಲಿ ಫ್ಯಾಸಿಸಂ ಮೇಲೆ ವಿಜಯ ಸಾಧಿಸಿ 50 ವರ್ಷಗಳಾಗುತ್ತಿವೆ. ಸಾಮ್ರಾಜ್ಯಶಾಹಿಯ ಅತ್ಯಂತ ಹೊಲಸು ಹಾಗೂ ಅಮಾನುಷ ರೂಪವಾದ ಫ್ಯಾಸಿಸಂ 1930ರ ದಶಕದಲ್ಲಿ ಬಂಡವಾಳಶಾಹಿ ಜಗತ್ತಿನಲ್ಲಿನ ಆರ್ಥಿಕ ಕುಸಿತದ ಹಿನ್ನೆಲೆಯಲ್ಲಿ ಬೆಳೆಯಿತು. ಬಂಡವಾಳಶಾಹಿ ದೇಶಗಳ ನೇರ-ಪರೋಕ್ಷ ಬೆಂಬಲದಿಂದ ಭೂತಾಕಾರವಾಗಿ ಬೆಳೆದು ಅವರನ್ನೇ ನುಂಗಲು ಹೊರಟಿತು. ಕೊನೆಗೆ ಸೋವಿಯಟ್ ಒಕ್ಕೂಟದ ವೀರ ಜನತೆ, ಹಾಗೂ ಯುರೋಪಿನ ಎಲ್ಲೆಡೆ ಕಮ್ಯುನಿಸ್ಟರ ನಿರಂತರ ಹೋರಾಟದ ಫಲವಾಗಿ, ಬಂಡವಾಳಶಾಹಿ ದೇಶಗಳೂ ಫ್ಯಾಸಿಸಂ ವಿರುದ್ಧ ಕೈಜೋಡಿಸಬೇಕಾಗಿ ಬಂದ ಪರಿಸ್ಥಿತಿಯಲ್ಲಿ, ಮೇ 9, 1995 ರಂದು ಅಳಿದುಳಿದ ನಾಝಿ ಯುದ್ಧ ಮಂತ್ರ ಶರಣಾಯಿತು. ಯುರೋಪಿನಲ್ಲಿ ನಾಝೀವಾದ ಕಾರಣವಾದರೂ ಸಾಮ್ರಾಜ್ಯಶಾಹಿಯ ಈ ಹೊಲಸು ಮುಖ ಮತ್ತೆ ಕಾಣಿಸಿಕೊಳ್ಳುವುದಿಲ್ಲ ಎಂದು ಭಾವಿಸಿದರೆ ಅದು ತಪ್ಪಾಗುತ್ತದೆ ಎಂದು ಎಚ್ಚರಿಸಿರುವ ಸಿಪಿಐ(ಎಂ) ಹದಿನೈದನೇ ಮಹಾಧಿವೇಶನ, ಪಕ್ಷದ ಘಟಕಗಳ ಜನಗಳ ನಡುವೆ ಹೋಗಿ ಫ್ಯಾಸಿಸಂನ ಮೂಲ ಹಾಗೂ ಸ್ವರೂಪದ ಬಗ್ಗೆ ತಿಳಿಸಬೇಕೆಂದು ಕರೆ ನೀಡಿದೆ. ಅಂದು ದೇಶಾದ್ಯಂತ ಸಭೆಗಳು, ವಿಚಾರ ಸಂಕಿರಣಗಳು, ಚರ್ಚೆಗಳ ಮೂಲಕ ಫ್ಯಾಸಿಸಂನ ಕರಾಳ ಕೃತ್ಯಗಳನ್ನು, ಅದು ಮತ್ತೆ ಜಗತ್ತಿನಲ್ಲಿ ತಲೆಯೆತ್ತುವ ಅಪಾಯದ ಬಗ್ಗೆ ಎಚ್ಚರಿಬೇಕು ಎಂದು ಕರೆ ನೀಡಿದೆ.

(ನಿರ್ಣಯದ ಪೂರ್ಣಪಾಠ ಮುಂದಿನವಾರ ಪ್ರಕಟಿಸಲಾಗುವುದು)

ಕೇಂದ್ರ ಸರ್ಕಾರ ತ್ರಿಪುರಾ ಎಡರಂಗದ ವಿರುದ್ಧ ಪಕ್ಷಪಾತ ನಿಲ್ಲಿಸಬೇಕು

ಏಪ್ರಿಲ್ 1993ರಲ್ಲಿ ವಿಧಾನ ಸಭಾ ಚುನಾವಣೆಗಳಲ್ಲಿ ಬೃಹತ್ ಬಹುಮತ ಪಡೆದು ಕಳೆದ ಎರಡು ವರ್ಷಗಳಿಂದ ಆಳ್ವಿಕೆ ನಡೆಸುತ್ತಿರುವ ತ್ರಿಪುರಾದ ಎಡರಂಗ ಸರ್ಕಾರವನ್ನು ಅಭಿನಂದಿಸಿರುವ ಸಿಪಿಐ(ಎಂ) 15ನೇ ಮಹಾಧಿವೇಶನ ಅದರೊಡನೆ ಸಂಪೂರ್ಣ ಸೌಹಾರ್ದವನ್ನು ವ್ಯಕ್ತಪಡಿಸಿ ಅದು ಜನಸಾಮಾನ್ಯರ ಆಶೋತ್ತರಗಳನ್ನು ಈಡೇರಿಸುವಂತಾಗಲಿ, ಬುಡಕಟ್ಟು ಜನಗಳು ಹಾಗೂ ಇತರರ ಐಕ್ಯತೆಯನ್ನು ಕಾಪಾಡುವಲ್ಲಿ ಯಶಸ್ವಿಯಾಗಲಿ ಎಂದುಹಾರೈಸಿದೆ.

ಕೇಂದ್ರ ಪಕ್ಷಪಾತ ನೀತಿಗಳು ಹಾಗೂ ಕಾಂಗ್ರೆಸ್(ಐ)-ಟಿಯುಜೆಎಸ್ ಕೂಟ ಉಗ್ರಗಾಮಿಗಳಿಗೆ ಪ್ರೋತ್ಸಾಹ ನೀಡುತ್ತಿರುವ ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ ಕೆಲಸ ಮಾಡಬೇಕಾಗಿರುವ ತ್ರಿಪುರಾದ ಎಡರಂಗ ಈ ಅಧಿಕಾರವಧಿಯ ಆರಂಭದಲ್ಲೇ ದಾರಿ ತಪ್ಪಿದ ಯುವಕರಿಗೆಶಸ್ತ್ರತ್ಯಾಗ ಮಾಡಿ ಸಾಮಾನ್ಯ ಜೀವನ ನಡೆಸಲುಕರೆ ನೀಡಿತು. ಇದಕ್ಕೆ ಓಗೊಟ್ಟು ವಿವಿಧ ಉಗ್ರಗಾಮಿ ಗುಂಪುಗಳ 2465 ವ್ಯಕ್ತಿಗಳು ಶರಣಾಗತರಾದರು. ಆದರೆ ಅವರ ಪುನರ್ವಸತಿಗೆ ಬೇಕಾದ ಕನಿಷ್ಠ ಹಣವನ್ನು ನೀಡಲು ಕೇಂದ್ರ ಸರ್ಕಾರ ನಿರಾಕರಿಸಿದೆ. ಹೀಗೆ 447 ಟಿ.ಎನ್.ವಿ. ಉಗ್ರಗಾಮಿಗಳು ಶರಣಾದಾಗ ಅದೇ ಕೇಂದ್ರ ಸರ್ಕಾರ 33 ಕೋಟಿ ರೂ.ಗಳನ್ನು ನೀಡಿತ್ತು. ಇತ್ತೀಚೆಗೆ ಕೂಡಾ ಅಸ್ಸಾಂ ಸರ್ಕಾರಕ್ಕೆ ಶರಣಾಗತರಾದ ಉಲ್ಫಾ ಉಗ್ರಗಾಮಿಗಳ ಪುನರ್ವಸತಿಗೆ ಇನ್ನೂ ಹೆಚ್ಚು ಹಣ ನೀಡಿದೆ.

1993ರಲ್ಲಿ ನೆರೆ ಹಾವಳಿಗೆ ತುತ್ತಾದಾಗಲೂ ರಾಜ್ಯಕ್ಕೆ ಅಲ್ಪ ಹಣ ನೀಡಿ ತನ್ನಪಕ್ಷಪಾತನಿಲುವನ್ನು ಕೇಂದ್ರ ಸರ್ಕಾರ ತೋರಿಸಿಕೊಟ್ಟಿತು. ಮೂರು ಕಡೆಯಿಂದ ಬಾಂಗ್ಲಾದೇಶ್‌ನಿಂದ ಆವೃತ್ತವಾಗಿರುವ ಈ ರಾಜ್ಯದಲ್ಲಿ ರೈಲು ಮಾರ್ಗ 40ಕಿ.ಮೀ.ಮಾತ್ರ ವಿದ್ದು ಇತ್ತೀಚಿನ ರೈಲ್ವೆ ಬಜೆಟ್ಟಿನಲ್ಲೂ ರೈಲು ಮಾರ್ಗ ವಿಸ್ತರಣೆ ಮಾಡಬೇಕೆಂಬ ರಾಜ್ಯದ ನ್ಯಾಯಯುತ ಬೇಡಿಕೆಯನ್ನು ನಿರ್ಲಕ್ಷಿಸಲಾಗಿದೆ. ತ್ರಿಪುರಾದ ಆರ್ಥಿಕ ಅಭಿವೃದ್ಧಿಯ ಅಗತ್ಯಗಳನ್ನು ಕೇಂದ್ರ ಸರ್ಕಾರ ನಿರ್ಲಕ್ಷಿಸುತ್ತಿದೆ. ಓ.ಎನ್.ಜಿ.ಸಿ. ರಾಜ್ಯದಲ್ಲಿ ಕಂಡು ಹಿಡಿದದೊಡ್ಡ ಅನಿಲಸಂಗ್ರಹವನ್ನು ಬಳಸಲು ಕೂಡಾಕೇಂದ್ರ ಸರ್ಕಾರವೇನೂ ಮಾಡಿಲ್ಲ ಎಂದು ಈನಿರ್ಣಯ ಹೇಳಿದೆ.

ಒಂದೆಡೆ ಬುಡಕಟ್ಟು ಉಗ್ರಗಾಮಿ ಗುಂಪುಗಳು ಹಿಂಸಾಚಾರ ತ್ಯಜಿಸಲು ಎಡರಂಗ ಸರ್ಕಾರ ಪ್ರಯತ್ನ ನಡೆಸಿದ್ದರೆ, ಇನ್ನೊಂದೆಡೆ ಭಯೋತ್ಪಾದಕ ಚಟುವಟಿಕೆಗಳನ್ನು ತಡೆಯಲು ಪ್ರಯತ್ನಿಸುತ್ತಿದೆ. ಇದರಲ್ಲೂ ಕೇಂದ್ರ ಸರ್ಕಾರ ಸಾಕಷ್ಟು ಅರೆಸೈನಿಕ ಪಡೆಗಳನ್ನು ಕೊಡುವ ಬದಲು ಕಾಂಗ್ರೆಸ್(ಐ)-ಟಿ.ಯು.ಜೆ.ಎಸ್. ಸರಕಾರ ಇದ್ದಾಗ ಇದ್ದ ಪಡೆಗಳನ್ನೇ ಕಳೆದೆರಡು ವರ್ಷಗಳಲ್ಲಿ ಹಿಂದಕ್ಕೆ ಪಡೆಯುತ್ತಿರುವ ಬಗ್ಗೆ ಮಹಾಧಿವೇಶನ ಆಘಾತ ವ್ಯಕ್ತಪಡಿಸಿತು.

ಕೇಂದ್ರ ಸರ್ಕಾರದ ಇಂತಹ ಉದ್ದೇಶಪೂರಿತ ಕ್ರಮಗಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್(ಐ)-ಟಿ.ಯು.ಜೆ.ಎಸ್. ಕಾನೂನು ವ್ಯವಸ್ಥೆಯ ಬೊಬ್ಬೆ ಎಬ್ಬಿಸಿ ತ್ರಿಪುರಾವನ್ನು ಗಲಭೆ ಪೀಡಿತ ಪ್ರದೇಶವೆಂದುಸಾರಬೇಕೆಂದುಒತ್ತಾಯಮಾಡುತ್ತಿದೆ.

ಕಾಂಗ್ರೆಸ್(ಐ)-ಟಿಯುಜೆಎಸ್ ಕೂಟ ಸಿಪಿಐ(ಎಂ) ಕಾರ್ಯಕರ್ತರ ಮೇಲೆ ಆಕ್ರಮಣ ಮಾಡುವ ಕೆಲವು ಉಗ್ರಗಾಮಿ ಗುಂಪುಗಳಿಗೆ ನೆರವು ನೀಡುವ ಅಪಾಯಕಾರಿ ಆಟ ಆಡುತ್ತಿದೆ. ಇದಕ್ಕೆ ಇತ್ತೀಚೆಗೆ ಹತ್ತಾರು ಕಾರ್ಯಕರ್ತರು ಬಲಿಯಾಗಿದ್ದಾರೆ ಎಂದು ಮಹಾಧಿವೇಶನ ಗಮನಿಸಿತು. ಅದೇ ವೇಳೆಗೆ ಒಂದೆಡೆ ಕಾಂಗ್ರೆಸ್(ಐ) ಬಂಗಾಳೀ ಸಂಕುಚಿತವಾದವನ್ನು ಪ್ರೋತ್ಸಾಹಿಸುತ್ತಿದ್ದಾರೆ. ಟಿ.ಯು.ಜೆ.ಎಸ್. ಬುಡಕಟ್ಟು ಪ್ರತ್ಯೇಕತೆ ಪ್ರೋತ್ಸಾಹ ನೀಡುತ್ತಿದೆ. ಎಡರಂಗ ಮತ್ತು ಸಿಪಿಐ(ಎಂ) ಇಂತಹ ದುಷ್ಟ ಸಂಚುಗಳನ್ನು ವಿಫಲಗೊಳಿಸಿ ಐಕ್ಯತೆ ಕಾಪಾಡಲು ಶ್ಲಾಘನಾರ್ಹ ಪ್ರಯತ್ನ ನಡೆಸುತ್ತಿದೆ ಎಂದು ಮಹಾಧಿವೇಶನ ಹೇಳಿದೆ.

ಆದ್ದರಿಂದ ಕೇಂದ್ರ ಸರ್ಕಾರ ತಕ್ಷಣ ಶರಣಾಗತರಾಗಿರುವ ಬುಡಕಟ್ಟು ಉಗ್ರಗಾಮಿಗಳ ಪುನರ್ವಸತಿಗೆ ಸಾಕಷ್ಟು ಹಣ ನೀಡಬೇಕು, ರಾಜ್ಯ ಸರಕಾರಕ್ಕೆ ಸಾಕಷ್ಟು ಅರೆಸೈನಿಕ ಪಡೆಗಳನ್ನು ನೀಡಬೇಕು, ರಾಜ್ಯ ಪೋಲೀಸ್ ಪಡೆಯ ಆಧುನೀಕರಣಕ್ಕೆ ಹಣ ನೀಡಬೇಕು ಎಂದು ಒತ್ತಾಯಿಸಿದೆ. ಜನಾಂಗ ವೈಷಮ್ಯವನ್ನು ಹಂಚಿ ಜನಗಳ ಐಕ್ಯತೆಯನ್ನು ಮುರಿಯುವ ಕಾಂಗ್ರೆಸ್(ಐ)-ಟಿಯುಜೆಎಸ್‌ಕೂಟದ ವಿಚ್ಛಿದ್ರಕಾರಿ ಪ್ರಯತ್ನಗಳನ್ನುಬಲವಾಗಿ15ನೇಮಹಾಧಿವೇಶನಖಂಡಿಸಿದೆ.

ಜನತಾ ಆಂದೋಲನ ತೀವ್ರಗೊಳಿಸಿ..........

ಪುಟ 1 ರಿಂದ

ನರಸಿಂಹರಾವ್ ಸರಕಾರದ ಕಳೆದ ಮೂರು ವರ್ಷಗಳ ಆಡಳಿತೆಯ ಕರ್ಮಕಾಂಡವನ್ನು ಬಿಚ್ಚುತ್ತಾ, ಹೊಸ ಆರ್ಥಿಕ ನೀತಿಯಿಂದ ದೇಶದ ಕೈಗಾರಿಕೆಗಳ ಮೇಲಾಗುತ್ತಿರುವ ಪರಿಣಾಮಗಳನ್ನು ವಿವರಿಸಿದರು. ಬಾಬ್ರಿ ಮಸೀದಿಯನ್ನು ಕೆಡವಲಿಕ್ಕೆ ಅವಕಾಶ ಮಡಿರುವುದನ್ನು ಬಿಜೆಪಿಯಂಥ ಮತಾಂಧ ಶಕ್ತಿಗಳಿಗೆ ಅಪ್ರತ್ಯಕ್ಷ ಪ್ರೋತ್ಸಾಹ ನೀಡುತ್ತಿರುವುದನ್ನು ಖಂಡಿಸಿ, ಈ ಎರಡೂ ಶಕ್ತಿಗಳ ವಿರುದ್ಧ ಸಿಪಿಐ(ಎಂ) ಪಕ್ಷ, ಎಡಪಕ್ಷಗಳ ಜೊತೆಯಲ್ಲಿ ನಡೆಸಿಕೊಂಡು ಬಂದ ಹೋರಾಟಗಳನ್ನು ವಿವರಿಸುತ್ತಾ, ನರಸಿಂಹರಾವ್ ಸರಕಾರದ ಹೊಸ ಆರ್ಥಿಕ ನೀತಿಯನ್ನು ಕೋಮುವಾದಿ ಬಿಜೆಪಿಯನ್ನು ಸೋಲಿಸಲು ಹೋರಾಟ ಮುಂದುವರಿಸಬೇಕೆಂದು ಕರೆ ನೀಡಿದರು. ನಂತರ ಮಾತನಾಡಿದ ಪಶ್ಚಿಮ ಬಂಗಾಳ ಎಡರಂಗ ಸರ್ಕಾರದ ಮುಖ್ಯಮಂತ್ರಿ ಜ್ಯೋತಿ ಬಸು ಅವರು ಕಾಂಗ್ರೆಸ್ ಮತ್ತು ಬಿಜೆಪಿಯನ್ನು ಕಟುವಾಗಿ ಟೀಕಿಸುತ್ತಾ ದೇಶದ ಅಭಿವೃದ್ಧಿಯ ಹೆಸರಿನಲ್ಲಿ ವಿಶ್ವಬ್ಯಾಂಕ್ ಮತ್ತು ವಿದೇಶಗಳಿಂದ ಕೇಂದ್ರ ಸರ್ಕಾರ ಪಡೆಯುತ್ತಿರುವ ಸಾಲ ಮತ್ತು ಧನ ಸಹಾಯದಲ್ಲಿ ಹೆಚ್ಚಿನ ಪಾಲು ಕಾಂಗ್ರೆಸ್ ಮುಖ್ಯಮಂತ್ರಿಗಳ ಮತ್ತು ಮುಖಂಡರ ಕೈ ಸೇರುತ್ತದೆಂದೂ ಆದರೆ ಅವುಗಳ ಭಾರ ಸಾರ್ವಜನಿಕರ ಮೇಲೆ ಬೀಳುತ್ತದೆಂದೂ ವಿವರಿಸಿದರು. ಬಿಜೆಪಿ ಬಹಳ ಅಪಾಯಕರವಾಗಿದೆ ಎಂದೂ, ಅನಾಗರಿಕವಾಗಿದೆ ಎಂದೂ ಎಚ್ಚರಿಸಿ ಅದರ ಧೋರಣೆಗಳು ಸಮಾಜದ ರೂಪುರೇಷೆಗಳಿಗೆ ವಿರೋಧವಾಗಿದೆಂದೂ, ಅದು ದೇಶದ ಐಕ್ಯತೆಯನ್ನು ನಾಶಗೊಳಿಸುತ್ತದೆಂದೂ ಹೇಳಿದರು. ಬಿಜೆಪಿ-ಶಿವಸೇನೆ ಮಹಾರಾಷ್ಟ್ರದಲ್ಲಿ ಅಧಿಕಾರಕ್ಕೆ ಬಂದಕೂಡಲೇ ಬಾಂಗ್ಲಾದೇಶೀಯರ, ಪಾಕಿಸ್ತಾನಿಗಳ ಹೆಸರಿನಲ್ಲಿ ಅಲ್ಪ ಮತಸ್ತರ ಮೇಲೆ ಆಕ್ರಮಣ ನಡೆಸುತ್ತಿರುವುದರತ್ತ ಗಮನ ಸೆಳೆದು ಇಂಥ ಮತೀಯ ಶಕ್ತಿಗಳ ವಿರುದ್ಧ ಶಕ್ತಿಮೀರಿ ಹೋರಾಟ ನಡೆಸಬೇಕೆಂದು ಕರೆ ನೀಡಿದರು. ಪಶ್ಚಿಮ ಬಂಗಾಳದ ಎಡರಂಗ ಸರ್ಕಾರದ ಸಾಧನೆಗಳನ್ನು ವಿವರಿಸುತ್ತ, ತಮ್ಮ ಸರಕಾರ ಈಗ ಸ್ವೀಕರಿಸಿರುವ ಔದ್ಯೋಗಿಕ ಧೋರಣೆಯನ್ನು ವಿವರಿಸಿ, ಕೇಂದ್ರ ಸರಕಾರ ತಮ್ಮ ಸರಕಾರಕ್ಕೆ ಧನ ಸಹಾಯ ನಿರಾಕರಿಸಿರುವುದರಿಂದಲೇ ಬೇರೆ ಉಪಾಯವಿಲ್ಲದೆ, ಜನರ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಸಲುವಾಗಿ ಹೊಸ ಕೈಗಾರಿಕಾ ನೀತಿ ಅನುಸರಿಸಬೇಕಾಗಿ ಬಂದಿರುವುದನ್ನು ವಿವರಿಸಿದರು. ಕಾಂಗ್ರೆಸ್ ಮತ್ತು ಬಿಜೆಪಿ ವಿರುದ್ಧ ಮೂರನೆಯ ಪರ್ಯಾಯವನ್ನು ನಿರ್ಮಿಸಬೇಕೆಂದೂ, ಅದೇ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ರಂಗವೆಂದೂ ಹೇಳಿ, ಅಂಥ ಶಕ್ತಿಯನ್ನು ಬೆಳೆಸಲು ಎಲ್ಲರೂ ಶ್ರಮಿಸಬೇಕೆಂದು ಕರೆ ನೀಡಿದರು.

ಹೊಸ ಸ್ಫೂರ್ತಿ, ಹೊಸ ಘೋಷಣೆಗಳೊಡನೆ ಬೃಹತ್ ಸಾರ್ವಜನಿಕ ಸಭೆ ಮುಕ್ತಾಯವಾಯಿತು.